

## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

### ಮಂದಿರಗಳ ಮೇಲೆ ಮುಸ್ಲಿಮರ ದಾಳಿ

ನಾಲ್ಕನೆಯದಾಗಿ ಹಂಪಿಯ ದೇವಾಲಯಗಳು. ಹಂಪಿ ಕರ್ನಾಟಕದ ವಿಜಯನಗರ ಜಿಲ್ಲೆಯಲ್ಲಿದೆ. ವಿರೂಪಾಕ್ಷ ದೇವಾಲಯ, ವಿಜಯ ವಿಠಲ ಮಂದಿರ, ಹನುಮಾನ್ ಮಂದಿರ, ಸಾಸಿವೆ ಕಾಳು ಗಣೇಶ ಮಂದಿರ, ಕಲ್ಲಿನ ರಥ ಮುಂತಾದ ಹನ್ನೊಂದು ದೇವಾಲಯಗಳುಳ್ಳ ಕರ್ನಾಟಕದ ವಾಸ್ತುಶಿಲ್ಪದ ತವರು,ಶಿಲ್ಪಕಲೆಗಳ ಮೇರು ಶಿಖರ. ಯುನೆಸ್ಕೋ ಪರಿಗಣಿತ ವಿಶ್ವ ಪಾರಂಪರಿಕ ತಾಣ. ಇಲ್ಲಿನ ಕಂಭಗಳನ್ನು ನುಡಿಸಿದರೆ ಹೊರಹೊಮ್ಮುವ ಸಪ್ತಸ್ವರಗಳ ಮೋಡಿ ವಿಶ್ವಪ್ರಸಿದ್ಧ. ಕೇಳಿಸದೆ ಕಲ್ಲು ಕಲ್ಲಿನಲಿ ಚಿತ್ರಗೀತೆ ಕೇಳುಗರ ಮೈರೋಮಾಂಚನಗೊಳಿಸುವುದು. ಅಕ್ಕಿಕಾಳು ಗಾತ್ರದ ಕಲ್ಲಿನಲ್ಲಿ ಗಣಪನ ಕೆತ್ತನೆ ಅತ್ಯದ್ಭುತ! ಕ್ರಿಸ್ತಶಕ 1199 ರ ಶಾಸನ ಹಿಂದು ಸಾಮ್ರಾಜ್ಯದ ಹೊಯ್ಸಳ ರಾಜರು ಇಲ್ಲಿ ದುರ್ಗಾ ಪಂಪಾದೇವಿ ಶಿವನ ದೇವಾಲಯ ನಿರ್ಮಿಸಿದರೆನ್ನುವುದು. 1336 ರಿಂದ 1565ರವರೆಗೆ ಹಂಪಿ ವಿಜಯನಗರ ಸಾಮ್ರಾಜ್ಯದ ರಾಜಧಾನಿ. ಕಲ್ಲಿನ ರಥವನ್ನೊಳಗೊಂಡು ಬಹುಪಾಲು ದೇವಾಲಯಗಳು 16 ನೇ ಶತಮಾನದಲ್ಲಿ ಶ್ರೀಕೃಷ್ಣದೇವರಾಯನಿಂದ ನಿರ್ಮಾಣಗೊಂಡವು. 23.1.1565 ರಲ್ಲಿ ಗೋಲ್ಕಂಡ ಬಿಜಾಪುರ ಅಹಮದ್ನಗರ ಹಾಗೂ ಬೀದರ್‌ನ ಮುಸ್ಲಿಂ ಸುಲ್ತಾನರು ಒಟ್ಟಾಗಿ ಸೇರಿ ತಾಳೀಕೋಟೆಯ ಬಳಿ ವಿಜಯನಗರ ಅರಸರನ್ನು ಸೋಲಿಸಿದ ಬಳಿಕ ಮುಸ್ಲಿಂ ಸೈನ್ಯ ಹಂಪಿಯ ಅರಮನೆಯನ್ನು ಭಗ್ನಗೊಳಿಸಿತು. ಅಪಾರ ಪ್ರಮಾಣದ ಜನರನ್ನು ಕೊಂದಿತು. ಆರು ತಿಂಗಳ ಕಾಲ ಸ್ಮಾರಕಗಳನ್ನು ದೇವಾಲಯಗಳನ್ನು ನಾಶಗೊಳಿಸಿತೆಂಬುದಕ್ಕೆ ಇಂದಿನ ಅವಶೇಷಗಳೇ ಸಾಕ್ಷಿ.

# ಪ್ರೌಢಶಾಲೆಗಳಲ್ಲಿ ಖಾಲಿ ಇವೆ 59,772 ಶಿಕ್ಷಕರ ಹುದ್ದೆಗಳು

## 700 ಶಿಕ್ಷಕರ ನೇಮಕದ ವಿಚಾರ ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇದೆ. ಕಲ್ಯಾಣ ಕರ್ನಾಟಕದಲ್ಲಿ 5,300 ಶಿಕ್ಷಕರನ್ನು ನೇಮಕ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 59,772 ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್.ಮಧುಬಂಗಾರಪ್ಪ ವಿಧಾನಸಭೆಗೆ ತಿಳಿಸಿದರು. ಪ್ರಶೋತ್ತರ ವೇಳೆಯಲ್ಲಿ ಬಿಜೆಪಿ ಶಾಸಕ ಕೆ.ಗೋಪಾಲಯ್ಯ ಅವರ ಪರವಾಗಿ ಶಾಸಕ ಭೈರತಿ ಬಸವರಾಜು ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಒಟ್ಟು 46,755 ಶಾಲೆಗಳಿದ್ದು, 1,65,618 ಶಿಕ್ಷಕರ ಕಾರ್ಯನಿರತ ಹುದ್ದೆಗಳಿವೆ. ಪ್ರಾಥಮಿಕ ಶಿಕ್ಷಣದಲ್ಲಿ 50,067 ಹಾಗೂ ಪ್ರೌಢಶಾಲೆಗಳಲ್ಲಿ 9,705 ಹುದ್ದೆಗಳು ಖಾಲಿ ಇವೆ. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ 45 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಈಗಾಗಲೇ 13,500 ಶಿಕ್ಷಕರ ನೇಮಕ ಪ್ರಕ್ರಿಯೆ ಪೂರ್ಣಗೊಂಡಿದ್ದು, 12,000 ಶಿಕ್ಷಕರ ನೇಮಕ ಮಾಡಲಾಗಿದೆ. 700 ಶಿಕ್ಷಕರ ನೇಮಕದ ವಿಚಾರ ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇದೆ. ಕಲ್ಯಾಣ ಕರ್ನಾಟಕದಲ್ಲಿ 5,300 ಶಿಕ್ಷಕರನ್ನು ನೇಮಕ ಮಾಡುವ ಪ್ರಕ್ರಿಯೆ ಶುರು ಮಾಡಲಾಗಿದೆ ಎಂದರು.

ಹಿಂದಿನ ಸರ್ಕಾರದಲ್ಲಿ ಮೂರೂವರೆ ವರ್ಷದಲ್ಲಿ 4,500 ಶಿಕ್ಷಕರನ್ನು ಮಾತ್ರ ನೇಮಕ ಮಾಡಲಾಗಿತ್ತು. ಅನುದಾನಿತ ಶಾಲೆಗಳ ಶಿಕ್ಷಕರ ನೇಮಕಾತಿಗೂ ಅವಕಾಶ ಕಲ್ಪಿಸಲಾಗಿದೆ. ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿ 20 ಶಿಕ್ಷಕರ ಕೊರತೆಯಿದ್ದು, ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಕಳೆದ ಮೂರು ವರ್ಷಗಳಲ್ಲಿ 20 ಕೊಠಡಿಗಳ ನಿರ್ಮಾಣಕ್ಕೆ 278 ಲಕ್ಷ ರೂ. ಮಂಜೂರಾಗಿದ್ದು, ಈಗಾಗಲೇ 241.19 ಲಕ್ಷ ರೂ. ಬಿಡುಗಡೆಯಾಗಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಬಿಜೆಪಿ ಶಾಸಕ ಬಿ.ಸಿ.ಪಾಟೀಲರ ಪರವಾಗಿ ಶಾಸಕ ವಿ. ಸುನೀಲ್ ಕುಮಾರ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪದವಿ ಪೂರ್ವ ಕಾಲೇಜುಗಳ ಅತಿಥಿ ಶಿಕ್ಷಕರ ಗೌರವಧನ ಹೆಚ್ಚಳ ಮಾಡುವ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗುತ್ತಿದೆ ಎಂದರು.

> **ಇದಕ್ಕೆ ಉತ್ತರಿಸಿದ ಸಚಿವರು, ಸಕಾಲಕ್ಕೆ ಅತಿಥಿ ಉಪನ್ಯಾಸಕರ ಗೌರವಧನ ನೀಡಲಾಗುವುದು ಎಂದರು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ 173 ಸರ್ಕಾರಿ ಶಾಲೆಗಳಿದ್ದು, 88 ಶಾಲೆಗಳ 200 ಕೊಠಡಿಗಳು ಶಿಥಿಲಗೊಂಡಿವೆ ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡರ ಪ್ರಶ್ನೆಗೆ ಸಚಿವ ಮಧುಬಂಗಾರಪ್ಪ ಉತ್ತರಿಸಿದರು.**

ಅತಿಥಿ ಶಿಕ್ಷಕರ ಪ್ರತಿಭಟನಾ ಸ್ಥಳಕ್ಕೆ ಭೇಟಿ ಕೊಟ್ಟು ಮನವಿ ಸ್ವೀಕರಿಸಲಾಗಿದೆ. ಗೌರವಧನದ ಹೆಚ್ಚಳದ ಬೇಡಿಕೆಯನ್ನು ಆರ್ಥಿಕ ಇಲಾಖೆ ತಿರಸ್ಕರಿಸಿದೆ. ಮಾಸಿಕ 30 ಸಾವಿರ ರೂ.ಗೆ ಗೌರವಧನ ಹೆಚ್ಚಳ ಮಾಡುವುದು ಕಷ್ಟ. ಈ ಬಗ್ಗೆ ಮುಖ್ಯಮಂತ್ರಿ ಗಮನಕ್ಕೆ ತಂದು ಹೆಚ್ಚಳ ಮಾಡಲು ಕೋರಲಾಗುವುದು ಎಂದಾಗ ಸುನೀಲ್‌ಕುಮಾರ್‌ರವರು, ನೀವು ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಅವರ ಮಗ. ಬಂಗಾರಪ್ಪ ಅವರು ದಿಟ್ಟತನದಿಂದ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದ್ದರು. ಅದರಂತೆ ನೀವು ಉತ್ತರ ಕೊಡಬೇಕು ಎಂದಾಗ ಬಂಗಾರಪ್ಪ ಅವರ ರೀತಿಯಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಕ್ರಮ ಕೈಗೊಳ್ಳುತ್ತಾರೆ ಎಂದು ಹೇಳಿದರು. ಉತ್ತರ ಮುಂದುವರೆಸಿದ ಸಚಿವರು, ಅತಿಥಿ ಉಪನ್ಯಾಸಕರಿಗೆ ಗೌರವಧನ ಮಾಸಿಕ 9 ಸಾವಿರದಿಂದ 12 ಸಾವಿರಕ್ಕೆ ಹೆಚ್ಚಿಸಲಾಗಿದೆ. ಅತಿಥಿ ಉಪನ್ಯಾಸಕರಿಗೆ ವಾರದಲ್ಲಿ 10 ಗಂಟೆಗಳ ಕಾರ್ಯಭಾರವನ್ನು ನಿಗದಿಪಡಿಸಲಾಗಿದೆ ಎಂದರು. ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ಅತಿಥಿ ಉಪನ್ಯಾಸಕರ ವೇತನ ಹೆಚ್ಚಳವಾಗಬೇಕು. ಅವರ ಟೆನ್ಷನ್ ಕಡಿಮೆ ಮಾಡಬೇಕು. ಇದಕ್ಕೆ ಶೀಘ್ರ ಪರಿಹಾರ ಕಂಡುಕೊಳ್ಳಿ ಎಂದು ಸಲಹೆ ಮಾಡಿದರು.

> **ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಕನಿಷ್ಠ ವೇತನ 18 ಸಾವಿರ ರೂ. ಇದೆ. ಅದಕ್ಕೂ ಕಡಿಮೆ ಗೌರವಧನ ಅತಿಥಿ ಉಪನ್ಯಾಸಕರಿಗೆ ನೀಡಲಾಗುತ್ತಿದೆ. ಈಗಾಗಲೇ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಗೌರವಧನ ಹೆಚ್ಚಳ ಮಾಡಲಾಗಿದೆ. ಇವರಿಗೂ ಹೆಚ್ಚಿಸಬೇಕು. ಪ್ರತಿ ತಿಂಗಳು ಗೌರವಧನ ನೀಡುವ ಮೂಲಕ ಗೌರವಯುತವಾಗಿ ಬದುಕಲು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿದರು.**

### ರಾಜ್ಯದಲ್ಲಿ ಕಾಡಾನೆ ದಾಳಿಗೆ ಮತ್ತೊಂದು ಬಲಿ: ಎನ್.ಆರ್ ಪುರದಲ್ಲಿ ರೈತ ಸಾವು

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕಾಡಾನೆ ದಾಳಿಗೆ ಮತ್ತೊಂದು ಬಲಿಯಾಗಿದ್ದು, ಎನ್.ಆರ್ ಪುರದಲ್ಲಿ ರೈತರೊಬ್ಬರು ಸಾವನ್ನಪ್ಪಿದ್ದಾರೆ. ಇತ್ತೀಚೆಗೆ ಕೆರೆಗ ನಿವಾಸಿ ಉಮೇಶ್ ಎಂಬುವವರು ಕಾಡಾನೆ ದಾಳಿಗೆ ಬಲಿಯಾಗಿದ್ದರು. ಈ ಬೆನ್ನಲ್ಲೇ ಮತ್ತೊಂದು ಘಟನೆ ನಡೆದಿದೆ. ಮುತ್ತಿನಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯ ಯಕ್ಕಡಬೈಲು ಗ್ರಾಮದ ಎಲಿಯಾಸ್ (60) ಎಂಬುವವರು ಮೃತಪಟ್ಟಿದ್ದು, ತಮ್ಮ ಮನೆಯ ಹಿಂಭಾಗದ ಕಾಡಿನಲ್ಲೇ ಆನೆ ತುಳಿತಕ್ಕೊಳಗಾಗಿ ಮೃತಪಟ್ಟಿದ್ದಾರೆ.



ಉದಯವಾಹಿನಿ ಚಿತ್ರ

### ಅಂಬೇಡ್ಕರ್ ಬಗ್ಗೆ ಅಮಿತ್ ಶಾ ಹೇಳಿಕೆ ಪ್ರಜಾಪ್ರಭುತ್ವಕ್ಕೆ ಅಪಮಾನ

• ಉದಯವಾಹಿನಿ, ಬೆಂಗಳೂರು

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರು ಹೇಳುವ ಬದಲು ದೇವರ ನಾಮ ಜಪ ಮಾಡಿದ್ದರೆ ಮುಕ್ತಿ ದೊರೆಯುತ್ತಿತ್ತು' ಎನ್ನುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಪ್ರಜಾಪ್ರಭುತ್ವಕ್ಕೆ ಮಾಡಿರುವ ಅಪಮಾನ ಎಂದು ಡಿಸಿಎಂ ಡಿ. ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಳಗಾವಿ ಸುವರ್ಣ ವಿಧಾನಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಅಂಬೇಡ್ಕರ್ ಅವರು ಹಾಗೂ ಸಂವಿಧಾನವನ್ನು ನಾವುಗಳು ಪ್ರತಿಪಾದನೆ ಮಾಡದೆ ಮತ್ತಿನ್ಯಾರು ಮಾಡಲು ಸಾಧ್ಯ ಎಂದು ಪ್ರಶ್ನಿಸಿದರು. ಅಂಬೇಡ್ಕರ್ ಅವರು ನಮಗೆ ಸಂವಿಧಾನ ಕೊಟ್ಟವರು ಅವರಿಗೆ ನಾವೆಲ್ಲ ಗೌರವ ಕೊಡುವುದು ನಮ್ಮ ಕರ್ತವ್ಯ. ಬಸವಣ್ಣ ಅವರ ಕಾಯಕವೇ ಕೈಲಾಸ ತತ್ವದಲ್ಲಿ ನಾವೆಲ್ಲರೂ ನಂಬಿಕೆ ಇಟ್ಟಿರುವವರು ಎಂದರು. ಸಂವಿಧಾನಕ್ಕೆ ಮತ್ತು ಅಂಬೇಡ್ಕರ್ ಅವರಿಗೆ ಮಾಡಿರುವ ಅಪಮಾನದ ಕುರಿತು ಹೆಚ್ಚಿನ ಚರ್ಚೆಯನ್ನು ನಾವೆಲ್ಲರೂ ಮಾಡಬೇಕಿದೆ ಎಂದು ಹೇಳಿದರು.

### ವಿದ್ಯುತ್ ಸಂಪರ್ಕಗಳನ್ನು ಸಕ್ರಮಗೊಳಿಸಲು ಆದೇಶ

• ಉದಯವಾಹಿನಿ, ಬೆಂಗಳೂರು

ದೇವದುರ್ಗ ತಾಲ್ಲೂಕಿನಲ್ಲಿ ಇರುವ ದೊಡ್ಡಿಗಳು ಹಾಗೂ ತಾಂಡಗಳಿಗೆ ಅನಧಿಕೃತ ವಿದ್ಯುತ್ ಸಂಪರ್ಕ ಪಡೆಯಲಾಗಿದ್ದು, ಈ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಆದೇಶ ನೀಡಲಾಗಿದೆ ಎಂದು ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ವಿಧಾನಸಭೆಗೆ ತಿಳಿಸಿದರು. ಪ್ರಶೋತ್ತರ ವೇಳೆಯಲ್ಲಿ ಜೆಡಿಎಸ್ ಶಾಸಕಿ ಕರೆಮ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ದೇವದುರ್ಗ ತಾಲ್ಲೂಕಿನಲ್ಲಿ 132 ದೊಡ್ಡಿಗಳ 792 ಮನೆಗಳು ಹಾಗೂ 26 ತಾಂಡಗಳ 373 ಮನೆಗಳಿಗೆ ನಿರಂತರ ಜ್ಯೋತಿ ಮಾರ್ಗಗಳ ಮೂಲಕ 24 ಗಂಟೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಸುಮಾರು 799 ಒಂಟಿ ಮನೆಗಳು ಹೊಲ ಮತ್ತು ಗದ್ದೆಗಳಲ್ಲಿ ನಿರ್ಮಿಸಿದ್ದು, ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆಯಲಾಗಿದೆ. ಹಗಲಿನ ವೇಳೆಯಲ್ಲಿ ಈ ಮನೆಗಳಿಗೆ ಐಪಿ ಫೀಡರ್ ಮೂಲಕ ಅನಧಿಕೃತ ವಿದ್ಯುತ್ ಪಡೆಯಲಾಗಿದ್ದು, ಸಂಜೆ 6 ಗಂಟೆಯಿಂದ ಬೆಳಗಿನವರೆಗೆ ಸಿಂಗಲ್ ಫ್ಯೂಜ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.



ಉದಯವಾಹಿನಿ ಚಿತ್ರ

ಈ ಮನೆಗಳಿಗೆ ಎಸ್‌ಸಿ/ಎಸ್‌ಟಿ/ಟಿಎಸ್‌ಪಿ ಯೋಜನೆಯಡಿ ಅನುದಾನದ ಲಭ್ಯತೆ ಮೇರೆಗೆ ಹಂತಹಂತವಾಗಿ ಮೂಲಭೂತ ಸೌಕರ್ಯ ಕಲ್ಪಿಸಿ ವಿದ್ಯುತ್ ಸಂಪರ್ಕ ಅಧಿಕೃತಗೊಳಿಸಲಾಗುವುದು ಎಂದು ಹೇಳಿದರು.

### ವಿಧಾನಸಭೆಯಲ್ಲಿ ಪ್ರತಿಭಟನೆ, ಕಲಾಪ ಮುಂದೂಡಿಕ

• ಉದಯವಾಹಿನಿ, ಬೆಂಗಳೂರು

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಅವಹೇಳನಕಾರಿ ಹೇಳಿಕೆಯನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿ ಆಡಳಿತ ಪಕ್ಷದ ಶಾಸಕರೇ ಪ್ರತಿಭಟನೆ ನಡೆಸಿದ್ದರಿಂದ ಕೆಲ ಕಾಲ ಕಲಾಪ ಮುಂದೂಡಬೇಕಾದ ಪ್ರಸಂಗ ನಡೆಯಿತು. ಸದನ ಮುಂದೂಡಿಕೆಯಾದ ನಂತರವೂ ಪ್ರತಿಭಟನೆ ಮುಂದುವರೆದಿದ್ದು ವಿಶೇಷವಾಗಿತ್ತು.

ನಿಯಮ 69ರ ಅಡಿ ಸಾರ್ವಜನಿಕ ಮಹತ್ವದ ವಿಷಯವನ್ನಾಗಿ ಬಳ್ಳಾರಿ ಜಿಲ್ಲೆಯಲ್ಲಿನ ಬಾಣಂತಿಯರ ಸಾವಿನ ಪ್ರಕರಣದ ಮೇಲೆ ನಡೆದ ಚರ್ಚೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಸುದೀರ್ಘ ಉತ್ತರ ನೀಡಿದರು.

ಬಳಿಕ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಕೆಲ ಸ್ಪಷ್ಟನೆಗಳನ್ನು ಕೇಳುತ್ತಿದ್ದರು. ಮಧ್ಯ ಪ್ರವೇಶಿಸಿದ ಕಾಂಗ್ರೆಸ್ ಶಾಸಕ ಹೆಚ್.ಸಿ.ಬಾಲಕೃಷ್ಣ, ಸಚಿವರು ಸಮರ್ಥವಾಗಿ ಉತ್ತರ ನೀಡಿದ್ದಾರೆ. ಮತ್ತೊಂದು ಮಹತ್ವದ ವಿಚಾರ ಇಲ್ಲಿ ಚರ್ಚೆಯಾಗಬೇಕು, ನಿರ್ಣಯವೂ ಅಂಗೀಕಾರಗೊಳ್ಳಬೇಕು ಎಂದು ವಿಷಯ ಪ್ರಸ್ತಾಪಿಸಿದರು.



ಉದಯವಾಹಿನಿ ಚಿತ್ರ

ಕಾಂಗ್ರೆಸ್‌ನ ಎಲ್ಲಾ ಶಾಸಕರು ಇದಕ್ಕೆ ಬೆಂಬಲ ವ್ಯಕ್ತಪಡಿಸಿದರು. ಜೊತೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ತಮ ಸ್ಥಾನದಿಂದಲೇ ಪ್ರದರ್ಶನ ಮಾಡಿ ಪ್ರತಿಭಟನೆ ವ್ಯಕ್ತ ಪಡಿಸಿದರು.

ಇದು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿಗೆ ಕಾರಣವಾಯಿತು. ಸದನದ ಒಳಗೆ ಯಾವುದೇ ಭಿತ್ತಿಪತ್ತ ಹಾಗೂ ಭಾವಚಿತ್ರಗಳನ್ನು ಪ್ರದರ್ಶನ ಮಾಡುವಂತಿಲ್ಲ ಎಂದು ಸಭಾಧ್ಯಕ್ಷರು ತಿಳಿಹೇಳಿದರು. ಆದರೆ ಕಾಂಗ್ರೆಸ್ ಶಾಸಕರು ಇದಕ್ಕೆ ಕಿವಿಗೊಡದೆ ಪ್ರತಿಭಟನೆಯನ್ನು ಮುಂದುವರೆಸಿದರು.

> **ಗೊಂದಲದ ವಾತಾವರಣ ಮುಂದುವರೆದಾಗ ಸಭಾಧ್ಯಕ್ಷರು 10 ನಿಮಿಷಗಳ ಕಾಲ ಕಲಾಪವನ್ನು ಮುಂದೂಡಿದರು. ನಂತರವೂ ಕಾಂಗ್ರೆಸ್ ಶಾಸಕರು ಅಂಬೇಡ್ಕರ್ ಭಾವಚಿತ್ರ ಹಿಡಿದು ಪ್ರತಿಭಟನೆ ಮುಂದುವರೆಸಿದರು. ಜೈ ಭೀಮ್ ಘೋಷಣೆಗಳನ್ನು ಕೂಗಿದರು. ಸದನದಲ್ಲಿ ಕುಳಿತಿದ್ದ ಮುಖ್ಯಮಂತ್ರಿಯವರು ಅಂಬೇಡ್ಕರ್ ಅವರ ಭಾವಚಿತ್ರ ಹಿಡಿದು ತಮ ಶಾಸಕರ ಪ್ರತಿಭಟನೆಗೆ ಬೆಂಬಲ ವ್ಯಕ್ತ ಪಡಿಸಿದರು.**

### ಗೃಹಲಕ್ಷ್ಮಿ ಹಣದಿಂದ ಮಾಂಗಲ್ಯ ಖರೀದಿಸಿದ ಮಹಿಳೆ : ಬಿಜೆಪಿಗೆ ಡಿಕೆಶಿ ತಿರುಗೇಟು

• ಉದಯವಾಹಿನಿ, ಬೆಂಗಳೂರು

ಕೊಪ್ಪಳದಲ್ಲಿ ಮಹಿಳೆಯೊಬ್ಬರು ಗೃಹಲಕ್ಷ್ಮಿ ಹಣದಿಂದ ಮಾಂಗಲ್ಯ ಖರೀದಿಸಿದ್ದು, ಈ ವಿಚಾರವನ್ನಿಟ್ಟುಕೊಂಡು ಬಿಜೆಪಿಗೆ ಡಿಸಿಎಂ ಡಿಕೆ ಶಿವಕುಮಾರ್ ತಿರುಗೇಟು ನೀಡಿದ್ದಾರೆ. ಕಾಂಗ್ರೆಸ್ ಗ್ಯಾರಂಟಿಗಳ ಬಗ್ಗೆ ಬಿಜೆಪಿ ಹರಿಬಿಟ್ಟಿದ್ದ ಸುಳ್ಳು ಸುದ್ದಿಗಳು ಇದೀಗ ತಿರುಗುಬಾಣವಾಗಿ ಪರಿಣಮಿಸಿವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಿಮ್ಮ ಮಂಗಳಸೂತ್ರ ಕಸಿಯುತ್ತಾರೆ'' ಎಂದು ಬಿಜೆಪಿಯವರು ಸುಳ್ಳು ಸುದ್ದಿ ಹರಿಬಿಟ್ಟಿದ್ದರು. ಆದರೆ ಕೊಪ್ಪಳದ ಗಂಗಾವತಿಯಲ್ಲಿ ಗ್ಯಾರಂಟಿ ಫಲಾನುಭವಿಯೊಬ್ಬರು ಗೃಹಲಕ್ಷ್ಮಿ ಯೋಜನೆಯ ಹಣ ಉಳಿಸಿ ಮಂಗಳಸೂತ್ರವನ್ನು ಖರೀದಿಸಿದ್ದಾರೆ. ಸತ್ಯಕ್ಕೆ ಗೆಲುವು ಖಚಿತ, ಸುಳ್ಳಿಗೆ ಸೋಲು ನಿಶ್ಚಿತ, ಇದು ಸತ್ಯಕ್ಕೆ ಇರುವ ಶಕ್ತಿ ನೋಡಿ ಎಂದು ಬಿಜೆಪಿಗೆ ಡಿಸಿಎಂ ಡಿಕೆ ಶಿವಕುಮಾರ್ ತಿರುಗೇಟು ನೀಡಿದ್ದಾರೆ.

### ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬೃಹತ್ ಪ್ರತಿಭಟನೆ ಮತ್ತು ಪ್ರತಿಕೃತಿ ದಹನ

• ಉದಯವಾಹಿನಿ, ಬೆಂಗಳೂರು

ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್‌ರವರ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವಹೇಳನಕಾರಿ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿ ಒಕ್ಕೂಟದಿಂದ ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ಹಾಗೂ ಪ್ರತಿಕೃತಿ ದಹನ ಮತ್ತು ಅಮಿತ್ ಶಾ ಭಾವಚಿತ್ರಕ್ಕೆ ಚಪ್ಪಳಿಯಲ್ಲಿ ಹೊಡೆಯುವುದರ ಮೂಲಕ ತೀವ್ರವಾಗಿ ಖಂಡಿಸಲಾಯಿತು.

ಇದೇ ವೇಳೆ ವಿಶ್ವವಿದ್ಯಾಲಯದ ಕುಲಪತಿಗಳ ಅನುಪಸ್ಥಿತಿಯಲ್ಲಿ ಕುಲಸಚಿವ ಶೇಕ್ ಲತೀಫ್ ಅವರು ಪ್ರತಿಭಟನಾ ಸ್ಥಳಕ್ಕೆ ಬಂದು ಕುಲಪತಿಗಳ ಮುಖಾಂತರ ಗೌರವಾನ್ವಿತ ರಾಷ್ಟ್ರಪತಿಗಳಿಗೆ ಸಲ್ಲಿಸುತ್ತಿರುವ ದೂರಿನ ಮನವಿ ಪತ್ರವನ್ನು ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿ ಒಕ್ಕೂಟ ಮೂಲಕ ನೀಡಲಾಯಿತು.



ಉದಯವಾಹಿನಿ ಚಿತ್ರ

ಇದೇ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳು, ನಿವೃತ್ತ ಪ್ರಾಧ್ಯಾಪಕರು ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು, ಅತಿಥಿ ಉಪನ್ಯಾಸಕರು ಹೋರಾಟದಲ್ಲಿ ಪಾಲ್ಗೊಂಡಿದ್ದರು.

**ಸಚಿವ ಅಮಿತ್ ಶಾ ಅವಹೇಳನಕಾರಿ ಹೇಳಿಕೆ**

ಈ ಹೋರಾಟದ ನೇತೃತ್ವ ವಹಿಸಿದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿ ಒಕ್ಕೂಟ ಗೌರವ ಅಧ್ಯಕ್ಷರು ಚಂದ್ರು ಪೆರಿಯಾರ್, ಒಕ್ಕೂಟದ ಅಧ್ಯಕ್ಷ ಸತೀಶ್ ಜಿ.ಕೆ , ಯಲ್ಲಪ್ಪ ಅಜೀವ, ಈಶ್ವರ್ ಸಿರಿಗೇರಿ, ಲಿಂಗರಾಜು ಎಸ್.ಎಂ, ಅಶೋಕ್ ವಿ, ಸುಗುಣ, ಪ್ರಶಾಂತ ಟಿ.ಎಂ, ಮತೀತರ ವಿದ್ಯಾರ್ಥಿ ಮುಖಂಡರು ನೇತೃತ್ವ ವಹಿಸಿದರು .

### ಬೆಂಗಳೂರಿನ ಐಐಎಸ್ಸಿ ವಿದ್ಯಾರ್ಥಿ ಅನುಮಾನಾಸ್ಪದವಾಗಿ ನಾಪತ್ತೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಐಐಎಸ್ಸಿ ಕ್ಯಾಂಪಸ್ ನಿಂದ ವಿದ್ಯಾರ್ಥಿಯೋರ್ವ ನಿಗೂಢವಾಗಿ ನಾಪತ್ತೆಯಾಗಿದ್ದಾನೆ. ಇದ್ದಕ್ಕಿದ್ದಂತೆ ವಿದ್ಯಾರ್ಥಿ ನಾಪತ್ತೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಅನ್ಮೋಲ್ ಗಿಲ್ ನಾಪತ್ತೆಯಾಗಿರುವ ವಿದ್ಯಾರ್ಥಿ, ಬೆಂಗಳೂರಿನ ಯಶವಂತಪುರ ಬಳಿ ಇರುವ ಐಐಎಸ್ ಸಿಯಲ್ಲಿ ಎಂಟೆಕ್ ವ್ಯಾಸಂಗ ಮಾಡುತ್ತಿದ್ದ. ಡಿಸೆಂಬರ್ 16ರಿಂದ ಐಐಎಸ್ಸಿ ಕ್ಯಾಂಪಸ್ ನಿಂದ ಏಕಾಏಕಿ ನಾಪತ್ತೆಯಾಗಿದ್ದಾನೆ. ಇದ್ದಕ್ಕಿದ್ದಂತೆ ವಿದ್ಯಾರ್ಥಿ ಎಲ್ಲಿಗೆ ಹೋಗಿದ್ದಾನೆ, ಏನಾಗಿದ್ದಾನೆ ಎಂಬ ಬಗ್ಗೆಯೂ ಸುಳಿವು ಸಿಗುತ್ತಿಲ್ಲ. ಯಶವಂತಪುರ ಪೊಲೀಸ್ ಠಾಣೆಯಲ್ಲಿ ವಿದ್ಯಾರ್ಥಿ ಮಿಸ್ಸಿಂಗ್ ಕೇಸ್ ದಾಖಲಾಗಿದ್ದು, ವಿದ್ಯಾರ್ಥಿ ಪತ್ತೆಗ ಪೊಲೀಸರು ಶೋಧ ಕಾರ್ಯ ನಡೆಸಿದ್ದಾರೆ.

### ಪಿಂಚಣಿದಾರರಿಗೆ ಜ.31ರವರೆಗೆ ಗಡುವು ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ನೌಕರರ ಭವಿಷ್ಯ ನಿಧಿ ಸಂಸ್ಥೆ ವೇತನದ ಮೇಲೆ ಹೆಚ್ಚಿನ ಪಿಂಚಣಿಗಾಗಿ ಆಯ್ಕೆಗಳ ಮೌಲ್ಯಮಾಪನ / ಜಂಟಿ ಆಯ್ಕೆಗಳಿಗೆ ಸಂಬಂಧಿಸಿದ ಬಾಕಿ ಇರುವ ಅರ್ಜಿಗಳನ್ನು ಪ್ರಕ್ರಿಯೆಗೊಳಿಸಲು ಮತ್ತು ಅಪ್ಲೋಡ್ ಮಾಡಲು ಉದ್ಯೋಗದಾತರಿಗೆ ಅಂತಿಮ ವಿಸ್ತರಣೆಯನ್ನು ಘೋಷಿಸಿದೆ. ಉದ್ಯೋಗದಾತರು ಮತ್ತು ಅವರ ಸಂಘಗಳು ಸಲ್ಲಿಸಲು ಹೆಚ್ಚುವರಿ ಸಮಯವನ್ನು ಕೋರಿ ಪದೇ ಪದೇ ಮಾಡಿದ ಮನವಿಗಳಿಗೆ ಪ್ರತಿಕ್ರಿಯೆಯಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ತಿಳಿಸಿದೆ.

ನವೆಂಬರ್ 4, 2022 ರ ಸುಪ್ರೀಂ ಕೋರ್ಟ್ ಆದೇಶಕ್ಕೆ ಅನುಗುಣವಾಗಿ ಈ ಅರ್ಜಿಗಳನ್ನು ಸಲ್ಲಿಸಲು ಆನ್ಲೈನ್ ಸೌಲಭ್ಯವನ್ನು ಆರಂಭದಲ್ಲಿ ಫೆಬ್ರವರಿ 26, 2023 ರಂದು ಪ್ರಾರಂಭಿಸಲಾಯಿತು. ಮೇ 3, 2023 ರ ಮೂಲ ಗಡುವನ್ನು ಮೊದಲು ಜೂನ್ 26, 2023 ರವರೆಗೆ ವಿಸ್ತರಿಸಲಾಯಿತು, ಅರ್ಹ ಪಿಂಚಣಿದಾರರು ಮತ್ತು ಸದಸ್ಯರಿಗೆ ತಮ್ಮ ಅರ್ಜಿಗಳನ್ನು ಸಲ್ಲಿಸಲು ನಾಲ್ಕು ತಿಂಗಳ ಅವಕಾಶವನ್ನು ನೀಡಲಾಯಿತು.

ಅಂತಿಮ ಸಲ್ಲಿಕೆಯ ಗಡುವನ್ನು ಜುಲೈ 11, 2023 ಎಂದು ನಿಗದಿಪಡಿಸಿ, ಇನ್ನೂ 15 ದಿನಗಳ ವಿಸ್ತರಣೆಯನ್ನು ನೀಡಲಾಯಿತು.

ಈ ದಿನಾಂಕದ ವೇಳೆಗೆ ಇಪಿಎಫ್‌ಒ 17.49 . ಲಕ್ಷ ಅರ್ಜಿಗಳನ್ನು ಸ್ವೀಕರಿಸಿದೆ, ಅನೇಕ ವಿಸ್ತರಣೆಗಳ ಹೊರತಾಗಿಯೂ, 3.1 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಅಪೂರ್ಣವಾಗಿ ಉಳಿದಿವೆ. ಉದ್ಯೋಗದಾತರು ಅಗತ್ಯ ವೇತನ ಡೇಟಾವನ್ನು ಅಪ್ಲೋ ಡ್ ಮಾಡುವಲ್ಲಿ ತೊಂದರೆಗಳನ್ನು ಎದುರಿಸಿದ್ದಾರೆ, ಇದು ವಿಸ್ತ್ರತ ಸಮಯಕ್ಕಾಗಿ ಮತ್ತಷ್ಟು ಮನವಿಗಳಿಗೆ ಕಾರಣವಾಗಿದೆ.




ಉದಯವಾಹಿನಿ ಚಿತ್ರ

> **ಈ ಸವಾಲುಗಳಿಗೆ ಸ್ಪಂದಿಸಿದ ಇಪಿಎಫ್‌ಒ ಈಗ ಉಳಿದ ಎಲ್ಲಾ ಅರ್ಜಿಗಳನ್ನು ಪ್ರಕ್ರಿಯೆಗೊಳಿಸಲು ಮತ್ತು ಅಪ್ಲೋಡ್ ಮಾಡಲು ಉದ್ಯೋಗದಾತರಿಗೆ ಜನವರಿ 31, 2025 ರ ಅಂತಿಮ ಗಡುವನ್ನು ನಿಗದಿಪಡಿಸಿದೆ.ಆದ್ದರಿಂದ, ಈ ಬಾಕಿ ಇರುವ ಅರ್ಜಿಗಳನ್ನು ಪ್ರಕ್ರಿಯೆಗೊಳಿಸಲು ಮತ್ತು ಅಪ್ಲೋಡ್ ಮಾಡಲು ಉದ್ಯೋಗದಾತರಿಗೆ ಜನವರಿ 31, 2025 ರವರೆಗೆ ಅಂತಿಮ ಅವಕಾಶವನ್ನು ನೀಡಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ.**

### ಲೋಕ್ ಅದಾಲತ್‌ನಲ್ಲಿ ಒಂದೇ ದಿನ ದಾಖಲೆಯ 38.80 ಲಕ್ಷ ಪ್ರಕರಣ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಡಿ.14ರಂದು ನಡೆದ ರಾಷ್ಟ್ರೀಯ ಲೋಕ್ ಅದಾಲತ್ ನಲ್ಲಿ ದಾಖಲೆಯ 38.80 ಲಕ್ಷ ಪ್ರಕರಣ ಇತ್ಯರ್ಥಪಡಿಸಲಾಗಿದೆ. ಕಕ್ಷಿದಾರರಿಗೆ 2248 ಕೋಟಿ ರೂ. ಪರಿಹಾರ ಕೊಡಿಸಲಾಗಿದೆ ಎಂದು ಹೈಕೋರ್ಟ್ ಹಿರಿಯ ನ್ಯಾಯಮೂರ್ತಿ ಹಾಗೂ ರಾಜ್ಯ ಕಾನೂನು ಸೇವಾ ಪದಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ ವಿ. ಕಾಮೇಶ್ವರರಾವ್ ತಿಳಿಸಿದ್ದಾರೆ. ಅದಾಲತ್ ನಲ್ಲಿ ಒಟ್ಟು 1581 ವೈವಾಹಿಕ ಪ್ರಕರಣ ಇತ್ಯರ್ಥ ಪಡಿಸಲಾಗಿದ್ದು, 307 ದಂಪತಿ ರಾಜೀ ಸಂಧಾನದಿಂದ ಪುನಃ ಒಟ್ಟಿಗೆ ಜೀವನ ನಡೆಸಲು ಮುಂದಾಗಿದ್ದಾರೆ. ಅದಾಲತ್‌ಗಾಗಿ ಒಟ್ಟು 1019 ನ್ಯಾಯ ಪೀಠಗಳನ್ನು ರಚಿಸಲಾಗಿತ್ತು.

ಇವುಗಳಲ್ಲಿ ಹೈಕೋರ್ಟ್ ಪೀಠಗಳಲ್ಲಿದ್ದ 1151, ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿದ್ದ 2,44,038 ಪ್ರಕರಣಗಳು ಸೇರಿ ಒಟ್ಟು 38,80,881 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. 3311 ವಿಭಾಗದಾವೆ, 5168 ಮೋಟಾರು ವಾಹನ ಅಪಘಾತ ಪ್ರಕರಣ ಇತ್ಯರ್ಥಪಡಿಸಲಾಗಿದ್ದು, 260 ಕೋಟಿ ರೂಪಾಯಿ ಪರಿಹಾರ ಕೊಡಿಸಲಾಗಿದೆ. ಒಟ್ಟು 11,262 ಚೆಕ್ ಬೌನ್ಸ್ ಪ್ರಕರಣಗಳು, 597 ಭೂಸ್ವಾಧೀನ ಪ್ರಕರಣ, 1004 ಎವಿಸಿ ಪ್ರಕರಣ, 3432 ಅಮಲ್ದಾರಿ ಪ್ರಕರಣ, 82 ರೇರಾ ಪ್ರಕರಣ ಇತ್ಯರ್ಥಪಡಿಸಲಾಗಿದೆ. ಬೆಂಗಳೂರಿನ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದ್ದ ಶ್ರೀನಿವಾಸ ವರ್ಸಸ್ ಕಾಂಡೀಡ್ ಬಿಲ್ಡರ್ ಪ್ರಕರಣದಲ್ಲಿ 23.70 ಕೋಟಿ ರೂ.ಗೆ ಇತ್ಯರ್ಥಪಡಿಸಲಾಗಿದೆ. ಹಿರಿಯ ನಾಗರಿಕರಿಗೆ ಸೇರಿದ 1921 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.



### ಸಾರಿಗೆ ಮುಷ್ಕರ ಡಿ.31ರಿಂದ ಬಸ್ ಸಂಚಾರದಲ್ಲಿ ಭಾರಿ ವ್ಯತ್ಯಯ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ವಿವಿಧ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕರು ಡಿಸೆಂಬರ್ 31ರಿಂದ ಮುಷ್ಕರಕ್ಕೆ ಕರೆ ಕೊಟ್ಟಿದ್ದು, ಬಸ್ ಸಂಚರದಲ್ಲಿ ಭಾರಿ ವ್ಯತ್ಯಯವಾಗುವ ಸಾಧ್ಯತೆ ಇದೆ. ಶಕ್ತಿ ಯೋಜನೆಯ ಬಾಕಿ ಹಣ ಬಿಡುಗಡೆ, ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಕೆ.ಎಸ್.ಆರ್.ಟಿ.ಸಿ. ಬಿಎಂಟಿಸಿ, ಎನ್.ಡಬ್ಲ್ಯು. ಕೆ. ಆರ್.ಟಿ.ಸಿ. ಕೆಕೆಆರ್ ಟಿಸಿ ಸೇರಿದಂತೆ ನಾಲ್ಕು ನಿಗಮಗಳಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಬಸ್ ಸಂಚಾರ ಅಸ್ತವ್ಯಸ್ಥಗೊಳ್ಳಲಿದೆ. ಸಾರಿಗೆ ಸಂಘಟನೆಗಳ ಮುಖಂಡರು, ನೌಕರರು ಹಾಗೂ ಪ್ರಯಾಣಿಕರಿಗೆ ಕರಪತ್ರ ಹಂಚುವ ಮೂಲಕ ಮುಷ್ಕರಕ್ಕೆ ಬೆಂಬಲ ನೀಡುವಂತೆ ಒತ್ತಾಯಿಸಿವೆ.

ಜನವರಿ 1ರಿಂದ ಬಸ್ ಸಂಚಾರವಿರುವುದಿಲ್ಲ ಸಹಕರಿಸಿ ಎಂದು ಪ್ರಾಣಿಕರಿಗೆ ಮತ್ತು ಸಾರಿಗೆ ನೌಕರರಿಗೆ ಈಗಾಗ್ಲೆ ಕರಪತ್ರದ ಮೂಲಕ ಮನವಿ ಮಾಡಲಾಗುತ್ತಿದೆ. ಡಿಸೆಂಬರ್ 31ರಿಂದ ಯಾರೂ ಕರ್ತವ್ಯಕ್ಕೆ ಹಾಜರಾಗಬಾರದು ಎಂದು ಕಂಡಕ್ಟರ್, ಡ್ರೈವರ್, ಮೆಕಾನಿಕ್‌ಗಳಿಗೆ ಸಾರಿಗೆ ಮುಖಂಡರು ಕರಪತ್ರ ಹಂಚುತ್ತಿದ್ದಾರೆ. ಈ ವೇಳೆ ಮಾತನಾಡಿದ ಸಾರಿಗೆ ಮುಖಂಡರು, ಶಕ್ತಿ ಯೋಜನೆಯ ಬಾಕಿ ಹಣ 2 ಸಾವಿರ ಕೋಟಿಯಷ್ಟಿದೆ ಅದನ್ನು ಮೊದಲು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

### ಕೌಶಲ್ಯಾಭಿವೃದ್ಧಿ ತರಬೇತಿಗಾಗಿ ಪ.ಜಾ , ಪ.ಪಂಗಡ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

• ಉದಯವಾಹಿನಿ, ಬೆಂಗಳೂರು

ಪ್ರವಾಸೋದ್ಯಮ ಇಲಾಖೆ ವತಿಯಿಂದ 2024-25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ/ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ತರಬೇತಿ ಕಾರ್ಯಕ್ರಮಗಳು:** ಫುಡ್ ಬೇವರೇಜ್ ಸರ್ವಿಸ್ ಸ್ಟೇವಾರ್ಡ (10ನೇ ತರಗತಿ ವಿದ್ಯಾರ್ಹತೆ), ರೂಮ್ ಅಟೇಂಡೆಟ್ (5ನೇ ತರಗತಿ ವಿದ್ಯಾರ್ಹತೆ), ಫಂಟ್ ಆಫೀಸ್ ಅಸೋಸಿಯೇಟ್ (12ನೇ ತರಗತಿ ವಿದ್ಯಾರ್ಹತೆ), ಮಲ್ಟಿ ಕ್ಯೂಸಿನ್ ಕುಕ್ (8ನೇ ತರಗತಿ ವಿದ್ಯಾರ್ಹತೆ) ತರಬೇತಿಗಾಗಿ 20 ರಿಂದ 45 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು ಡಿಸೆಂಬರ್ 28 ರ ಒಳಗಾಗಿ ಅರ್ಜಿಗಳನ್ನು ಸಹಾಯಕ ನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರವಾಸೋದ್ಯಮ ಇಲಾಖೆ, ಕೊಠಡಿ ಸಂ: 09, ನೆಲಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ ದೇವನಹಳ್ಳಿ ತಾಲ್ಲೂಕು ಇಲ್ಲಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08022040633 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾನು ಪವಿತ್ರಾ ಗೌಡ ಬಗ್ಗೆ ಮಾತಾಡಬೇಕು ಅಂದ್ರೆ 3 ಸಾವಿರ ಕೊಡಿ

## ಮಾಧ್ಯಮಗಳ ಸಂಪರ್ಕಕ್ಕೆ ಸಿಕ್ಕಿದ್ದ ಪವಿತ್ರಾ ಗೌಡ ಅವರ ಮಾಜಿ ಪತಿ ಸಂಜಯ್ ಸಿಂಗ್ ಇದೀಗ ಪವಿತ್ರ ಗೌಡ ಬಿಡುಗಡೆ

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಪವಿತ್ರಾ ಗೌಡ ಸದ್ಯ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಬೆಂಗಳೂರಿನ ಪರಪ್ಪನ ಅಗ್ರಗಾರ ಜೈಲಿನಲ್ಲಿ ಆರು ತಿಂಗಳು ಕಳೆದಿರುವ ಪವಿತ್ರ ಗೌಡಗೆ ಹೈಕೋರ್ಟ್ ಜಾಮೀನು ನೀಡಿದೆ. ಅತ್ತ ಪವಿತ್ರಾ ಗೌಡ ಬಿಡುಗಡೆಯಾಗುತ್ತಿದ್ದಂತೆ ಇತ್ತ ಆಕೆಯ ಮಾಜಿ ಪತಿ ಕೂಡ ಪ್ರತ್ಯಕ್ಷ ಆಗಿದ್ದು ಎಲ್ಲೆಡೆ ಅವರ ಸಂದರ್ಶನವೇ ವೈರಲ್ ಆಗುತ್ತಿದೆ.

ಪವಿತ್ರ ಗೌಡ ಬಂಧನವಾಗುತ್ತಿದೆ ಮಾಧ್ಯಮಗಳ ಸಂಪರ್ಕಕ್ಕೆ ಸಿಕ್ಕಿದ್ದ ಪವಿತ್ರಾ ಗೌಡ ಅವರ ಮಾಜಿ ಪತಿ ಸಂಜಯ್ ಸಿಂಗ್ ಇದೀಗ ಪವಿತ್ರ ಗೌಡ ಬಿಡುಗಡೆಯಾಗುತ್ತಿದ್ದಂತೆ ಮತ್ತೆ ಅವರ ಹಳೆಯ ಸಂಬಂಧದ ಬಗ್ಗೆ ಮಾತನಾಡುತ್ತಾ ಎಲ್ಲೆಡೆ ಸಂದರ್ಶನ ನೀಡುತ್ತಿದ್ದಾರೆ. ಆದರೆ ಈ ಸಂದರ್ಶನಗಳನ್ನು ನೀಡಲು ಪವಿತ್ರಾ ಗೌಡ ಅವರ ಮಾಜಿ ಪತಿ ಸಂಜಯ್ ಸಿಂಗ್ ವಾಹಿನಿಗಳ ಬಳಿ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ ಎನ್ನುವ ಆರೋಪ ಕೇಳಿ ಬಂದಿದೆ.



ಉದಯವಾಹಿನಿ ಚಿತ್ರ

**ಮಾಜಿ ಪತಿಯ ಆಡಿಯೋ ವೈರಲ್**

> **ಈ ಹಿಂದೆ ನಾನು ಫ್ರೀಯಾಗಿ ಮಾಡಿ ನನಗೆ ತುಂಬಾ ಕಷ್ಟ ಬಂದಿತ್ತು. ನನ್ನ ಕಷ್ಟವನ್ನು ಯಾರೂ ನೋಡಿಲ್ಲ. ನಾನೇಷ್ಟು ಕಷ್ಟದಲ್ಲಿ ಇದ್ದೇನೆ ಎನ್ನುವುದನ್ನು ಯಾರೂ ನೋಡಿಲ್ಲ. ಹೀಗಾಗಿ ಈಗ ಹಣ ಕೊಟ್ಟರೆ ಸಂದರ್ಶನ ಕೊಡುತ್ತೇನೆ ಬೇಕಾದರೆ ತೆಗೆದುಕೊಳ್ಳಿ. ಇಲ್ಲವಾದರೆ ಬಿಡಿ' ಎಂದು ಸಂಜಯ್ ಸಿಂಗ್ ಹೇಳಿದ್ದಾರೆ ಎನ್ನಲಾದ ಆಡಿಯೋವೊಂದು ವೈರಲ್ ಆಗುತ್ತಿದೆ.**

ಪವಿತ್ರಾ ಗೌಡ ಬಗ್ಗೆ ಮಾತನಾಡಲು ಸಂಜಯ್ ಸಿಂಗ್ ಮಾಧ್ಯಮಗಳ ಬಳಿ ಹಣ ನೀಡುವಂತೆ ಕೇಳುತ್ತಿದ್ದಾರೆ ಎನ್ನುವ ಗಂಭೀರ ಆರೋಪ ಕೇಳಿಬಂದಿದ್ದು, ಸಂಜಯ್ ಸಿಂಗ್ ಮಾತನಾಡಿದ್ದಾರೆ ಎನ್ನಲಾದ ಆಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

'ನಾನು ಹಣ ಚಾರ್ಜ್ ಮಾಡುತ್ತೇನೆ. ಹಣ ಇಲ್ಲದೇ ನಾನು ಯಾವ ಸಂದರ್ಶನ ಕೂಡ ಕೊಡಲು ಆಗುವುದಿಲ್ಲ. ನಾನು ಈವರೆಗೂ ಎಷ್ಟು ಸಂದರ್ಶನ ಕೊಟ್ಟಿದ್ದೇನೋ, ಅಷ್ಟಕ್ಕೂ ನಾನು ಹಣ ಪಡೆದುಕೊಂಡಿದ್ದೇನೆ. ನಾನೇನು ಲಕ್ಷಾಂತರ ರೂಪಾಯಿ ಹಣ ಕೇಳುವುದಿಲ್ಲ. ಅರ್ಧ ಗಂಟೆಯ ಸಂದರ್ಶನಕ್ಕೆ ಮೂರು ಸಾವಿರ ಕೊಡಿ ಸಾಕು'.

> **ಪವಿತ್ರಾ ಗೌಡ ಜೈಲಿಗೆ ಹೋದ ಸಂದರ್ಭದಲ್ಲಿ ಆಡಿದಂತೆ ಮಾತನಾಡುತ್ತೇನೆ. ನೀವು ಏನು ಕೇಳಬೇಕೋ ಕೇಳಿ. ನನ್ನ ಮಗಳ ಬಗ್ಗೆ ಬಿಟ್ಟು ಬೇರೆ ಮಾತನಾಡುತ್ತೇನೆ. ಆದರೆ ಹಣ ಕೊಟ್ಟರೆ ಮಾತ್ರ ಸಂದರ್ಶನ ಕೊಡುವುದು. ನೀವು ಹಣ ಕೊಟ್ಟರೆ ಬರುತ್ತೇನೆ. ಇಲ್ಲವಾದರೆ ಬರುವುದಿಲ್ಲ. ನನಗೇನು ಸಮಸ್ಯೆ ಇಲ್ಲ ಎಂದು ಹೇಳಿದ್ದಾರೆ ಎನ್ನಲಾಗಿದೆ.**
> **ಪವಿತ್ರ ಗೌಡ ಮಾಜಿ ಪತಿ ಸಂಜಯ್ ಸಿಂಗ್**

# 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇತಿಹಾಸ ಸೃಷ್ಟಿಸಲಿದೆ

## ಅಮರಾವತಿ ಹೋಟೆಲ್ ಹಿಂಭಾಗದಲ್ಲಿ ನಿರ್ಮಿಸುತ್ತಿರುವ ವೇದಿಕೆಗಳ ಸಿದ್ಧತೆ ಕಾರ್ಯಗಳ ಪರಿಶೀಲನೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿ

• ಉದಯವಾಹಿನಿ, ಮಂಡ್ಯ

ಮೂರನೇ ಬಾರಿಗೆ ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇತಿಹಾಸ ಸೃಷ್ಟಿಸಲಿದೆ. ಹಲವು ಹೊಸತನಗಳಿಗೆ ಸಾಕ್ಷಿಯಾಗುತ್ತಿರುವ ಸಾಹಿತ್ಯ ಸಮ್ಮೇಳನಕ್ಕೆ ಮಂಡ್ಯ ಸಕಲ ರೀತಿಯಲ್ಲಿ ಸಜ್ಜಾಗಿದೆ ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಎನ್ ಚಲುವರಾಯಸ್ವಾಮಿ ಅವರು ಹೇಳಿದರು. ನಗರದ ಸ್ಯಾಂಜೊ ಆಸ್ಪತ್ರೆ ಹಾಗೂ ಅಮರಾವತಿ ಹೋಟೆಲ್ ಹಿಂಭಾಗದಲ್ಲಿ ನಿರ್ಮಿಸುತ್ತಿರುವ ವೇದಿಕೆಗಳ ಸಿದ್ಧತೆ ಕಾರ್ಯಗಳ ಪರಿಶೀಲನೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

70-80 ಎಕರೆ ಪ್ರದೇಶದಲ್ಲಿ ಪ್ರಧಾನ ವೇದಿಕೆ ಎರಡು ಸಮಾನಾಂತರ ವೇದಿಕೆ, 60 ಎಕರೆ ಪ್ರದೇಶದಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ. 55 ವಸ್ತುಪ್ರದರ್ಶನ ಮಳಿಗೆಗಳು, 350 ವಾಣಿಜ್ಯ ಮಳಿಗೆ 450 ಪುಸ್ತಕ ಮಳಿಗೆಗಳು ಕೂಡ ತಲೆಎತ್ತಿವೆ. ಊಟಕ್ಕೆ 100 ಕೌಂಟರ್, ನೋಂದಾಯಿತ ಪ್ರತಿನಿಧಿಗಳಿಗೆ 40 ಕೌಂಟರ್‌ಗಳನ್ನು ತೆರೆಯಲಾಗಿದ್ದು ಎಲ್ಲರಿಗೂ ಒಂದೇ ಊಟದ ಮೆನು ಇರಲಿದೆ ಎಂದರು. ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆಹಾರದ ಗುಣಮಟ್ಟ ಪರೀಕ್ಷೆ ಮಾಡಿ ವರದಿ ಪಡೆಯಲಾಗುತ್ತದೆ.


ಉದಯವಾಹಿನಿ ಚಿತ್ರ

> ನಾಡುನುಡಿಗೆ ಸೇವೆ ಸಲ್ಲಿಸಿದ 170 ಮಂದಿ ಸಾಧಕರನ್ನು ಸನಾನಿಸಲಾಗುತ್ತಿದೆ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ಮ್ಣಾರ್ಥ 87 ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತದೆ. ಜೊತೆಗೆ ಬೆಲ್ಲದಾರತಿ ಹೆಸರಿನ ಸಂಚಿಕೆ ಕೂಡ ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಿದರು.

ನೀರನ್ನು ಸಹ ಪರೀಕ್ಷಿಸಲಾಗುತ್ತದೆ. ಸ್ವಚ್ಛತೆಗೆ 250 ಸಿಬ್ಬಂದಿಯನ್ನು ನೇಮಿಸಲಾಗಿದೆ. 150ಕ್ಕೂ ಹೆಚ್ಚು ವಿವಿಧ ಸ್ಥಳಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ. 6 ಸಾವಿರ ನೋಂದಾಯಿತ ಪ್ರತಿನಿಧಿಗಳಿಗೆ

> ಡಿ.20ರ ಮೊದಲ ದಿನ ಸಾಧುಕೋಕಿಲ ಮತ್ತು ರಾಜೇಶ್ ಕೃಷ್ಣನ್ ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಡಿ.21ರಂದು ಅರ್ಜುನ್ ಜನ್ಯ ಮತ್ತು ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಡಿ.22ರಂದು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಪೊಲೀಸ್ ಬ್ಯಾಂಡ್ ಇರಲಿದೆ ಎಂದು ವಿವರಿಸಿದರು. ಚೆಸ್ಕಾಂ ವತಿಯಿಂದ ನಗರದಲ್ಲಿ ವಿದ್ಯುತ್ ಅಲಂಕಾರ ಮಾಡಲಾಗುತ್ತಿದೆ.

ಅರ್ಧ ಕೆಜಿ ಬೆಲ್ಲ, ಅರ್ಧ ಕೆಜಿ ಸಕ್ಕರೆ, ಬ್ರಶ್, ಪೇಸ್ಟ್, ಸೋಪು, ಬೆಡ್ ಶೀಟ್ ಒಳಗೊಂಡ ಲೆದರ್ ಬ್ಯಾಗ್‌ನಲ್ಲಿ ವಸತಿ ಮತ್ತು ಸಮ್ಮೇಳನದ ಕಿಟ್ ನೀಡಲಾಗುವುದು ಎಂದರು.

ಸಮ್ಮೇಳನಕ್ಕೆ ಆಗಮಿಸುವ ಪ್ರತಿನಿಧಿಗಳಿಗೆ 7 ತಾಲ್ಲೂಕು ಕೇಂದ್ರಗಳಿಂದ 15 ಉಚಿತ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಇದರ ಜೊತೆಗೆ ಮಂಡ್ಯ ನಗರದಿಂದ ಕೂಡ ಬಸ್‌ಗಳು ಸಮ್ಮೇಳನದ ಸ್ಥಳಕ್ಕೆ ಉಚಿತವಾಗಿ ಕರೆತರಲಿವೆ. ಮೂರು ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಪಾರ್ಕಿಂಗ್ ಸ್ಥಳದಿಂದ ಕೂಡ ಉಚಿತ ಸಾರಿಗೆ ವಾಹನದ ವ್ಯವಸ್ಥೆ ಮಾಡಲಾಗಿದೆ. ಮೈಸೂರು ಬೆಂಗಳೂರಿನಿಂದ 30 ನಿಮಿಷಕ್ಕೆ ಒಂದು ವಿಶೇಷ ಬಸ್ ಸಂಚರಿಸಲಿದೆ ಎಂದರು.

> ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಮಾತನಾಡಿ, ಈ ಸಮ್ಮೇಳನದಲ್ಲಿ ಸಂಪೂರ್ಣ ತಂತ್ರಜ್ಞಾನ ಉಪಯೋಗಿಸಿ ಸಿದ್ಧತೆ ನಡೆಸಿದ ಜಿಲ್ಲಾಡಳಿತಕ್ಕೆ ಅಭಿನಂದನೆ ಸಲ್ಲಿಸಲಾಗುವುದು ಎಂದರು.

ಸಮ್ಮೇಳನಾಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರು ಸಂಜೆ ಮಂಡ್ಯಕ್ಕೆ ಆಗಮಿಸಲಿದ್ದು ಅವರನ್ನು ಬರಮಾಡಿಕೊಳ್ಳಲಾಗುವುದು. ಡಿ.20ರ ಶುಕ್ರವಾರ ಬೆಳಗ್ಗೆ 6ಕ್ಕೆ ಧ್ವಜಾರೋಹಣ ನೆರವೇರಲಿದೆ. 7 ಗಂಟೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಆರಂಭವಾಗಲಿದೆ.

ಮೆರವಣಿಗೆಯಲ್ಲಿ ಹಗಲುವೇಷ, ಮಹಿಳಾ ವೀರಗಾಸೆ, ಗೊರವರ ಕುಣಿತ ಕಂಸಾಳೆ, ಕರಗ, ಸುಗ್ಗಿಕುಣಿತ, ಕೋಲಾಟ ಒಳಗೊಂಡಂತೆ ಪೂರ್ಣಕುಂಭ ಹೊತ್ತ 300 ಮಹಿಳೆಯರು ಹಾಗೂ 50ಕ್ಕೂ ಹೆಚ್ಚು ಕಲಾತಂಡಗಳು ಪಾಲ್ಗೊಳ್ಳಲಿವೆ. ಮೆರವಣಿಗೆಗೆ ಮೈಸೂರು ಅರಮನೆ ರಾಜವಂಶಸ್ಥರಾದ ಪ್ರಮೋದಾದೇವಿ ಅವರು ಚಾಲನೆ ನೀಡಲಿದ್ದಾರೆ ಎಂದರು. ಮೂರು ವೇದಿಕೆಗಳನ್ನು ನಿರ್ಮಿಸಲಾಗುತ್ತಿದೆ. ಪ್ರಧಾನ ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷರ ಜೊತೆಗಿನ ಸಂವಾದವೂ ಸೇರಿದಂತೆ 11 ಗೋಷ್ಠಿಗಳು, 2 ಸಮಾನಾಂತರ ವೇದಿಕೆಗಳಲ್ಲಿ 20 ಗೋಷ್ಠಿಗಳು ಆಯೋಜನೆಗೊಂಡಿವೆ.

# ದಸರಾ ವಸ್ತುಪ್ರದರ್ಶನದಲ್ಲಿ ಫ್ಯಾಷನ್ ಷೋ ಡಿ.28ರಂದು

• ಉದಯವಾಹಿನಿ, ಮೈಸೂರು

'ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಹಾಗೂ ತಿಬ್ಬಾಸ್ ಸಮೂಹ ಸಹಯೋಗದಲ್ಲಿ ಡಿ.28ರಂದು ಸಂಜೆ 5ಕ್ಕೆ ದೊಡ್ಡ ಕೆರೆ ಮೈದಾನದ ದಸರಾ ವಸ್ತುಪ್ರದರ್ಶನ ಅವರಣದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ 'ಪ್ಯೂಚರ್ ಮಾಡೆಲ್ ಆಫ್ ಇಂಡಿಯಾ-4ನೇ ಆವೃತ್ತಿ'ಯ ಫ್ಯಾಷನ್ ಶೋ ಆಯೋಜಿಸಲಾಗಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ಇಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿವಿಧ ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ರಾಜ್ಯ ಮಟ್ಟದ ಈ ಸ್ಪರ್ಧೆಯಲ್ಲಿ ಅಂತಿಮವಾಗಿ 100 ಮಂದಿ ಪಾಲ್ಗೊಳ್ಳಲಿದ್ದಾರೆ' ಎಂದು ಮಾಹಿತಿ ನೀಡಿದರು. 'ವಿವಿಧ ವಯೋಮಾನದವರ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, 2 ವರ್ಷದಿಂದ 65 ವರ್ಷ ವಯಸ್ಸಿನವರಿಗೆ ಅವಕಾಶವಿದೆ. ಭಾಗವಹಿಸುವವರಿಗೆ 1ಸಾವಿರ ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. ನಮ್ಮ ಸಂಸ್ಕೃತಿ ಬಿಂಬಿಸುವ ಸಾಂಪ್ರದಾಯಿಕ ಉಡುಗೆಯ ಫ್ಯಾಷನ್ ಹೋ ಇದಾಗಿದೆ'



ಉದಯವಾಹಿನಿ ಚಿತ್ರ

ಎಂದು ಹೇಳಿದರು. '

ವೃತ್ತಿಯಲ್ಲಿ ಬ್ಯಾಂಕ್ ನೌಕರರಾಗಿರುವ ಅಂಧ ಯಾಂಪ್ ಮೇಲೆ ಹೆಜ್ಜೆ ಹಾಕಲಿದ್ದಾರೆ. ವಿಜೇತರಿಗೆ ನಗದು ಬಹುಮಾನ, ಟ್ರೋಫಿ ಪ್ರಮಾಣಪತ್ರ ಹಾಗೂ ಕೌನ್ ನೀಡಲಾಗುವುದು ಹೊಸ ಪ್ರತಿಭೆಗಳನ್ನು ಫ್ಯಾಷನ್ ಉದ್ಯಮಕ್ಕೆ ಪರಿಚಯಿಸುವ ಉದ್ದೇಶವನ್ನು ಕಾರ್ಯಕ್ರಮದ ಮೂಲಕ ಹೊಂದಲಾಗಿದೆ. ಪಾಲ್ಗೊಳ್ಳುವವರು ಸಾಂಪ್ರದಾಯಿಕ ಹಾಗೂ ದೇಶದ ಸಂಸ್ಕೃತಿ ಬಿಂಬಿಸುವ ಉಡುಗೆ-ತೊಡುಗೆಗಳನ್ನೇ ಧರಿಸುವುದು ಕಡ್ಡಾಯವಾಗಿದೆ' ಎಂದು ಸ್ಪಷ್ಟಪಡಿಸಿದರು. 'ಆಸಕ್ತರು ನೋಂದಣಿ ಹಾಗೂ ಮಾಹಿತಿಗೆ ಮೊ.ಸಂ. 98806 47392 ಸಂಪರ್ಕಿಸಬಹುದು' ಎಂದರು.

# ಕನ್ನಡ ಭವನ: ವಾಣಿಜ್ಯ ಬಳಕೆಗೆ ವಿರೋಧ

• ಉದಯವಾಹಿನಿ, ಸೋಮವಾರಪೇಟೆ

ಇಲ್ಲಿನ ಅಟಲ್ ಜೀ ಕನ್ನಡ ಭವನವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಪಟ್ಟಣ ಪಂ. ಮುಂದಾಗಿರುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ(ಕರವೇ) ಕಾರ್ಯಕರ್ತರು ಪಂಚಾಯಿತಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು. ಪಟ್ಟಣದ ಜೆಸಿ ವೇದಿಕೆ ಮುಂಭಾಗದಲ್ಲಿರುವ ವಾಣಿಜ್ಯ ಮಳಿಗೆಯ ಮೇಲ್ಭಾಗದಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ, ಸಭೆ ಸಮಾರಂಭಗಳಿಗಾಗಿ ದಿನದ ಬಾಡಿಗೆ ನಿಗದಿಪಡಿಸಿ ನೀಡುವ ಉದ್ದೇಶದಿಂದ ನಿರ್ಮಾಣ ಮಾಡಲಾಗಿರುವ ಭವನವನ್ನು ಇತರೆ ವಾಣಿಜ್ಯ ಉದ್ದೇಶಗಳಿಗೆ ನೀಡುತ್ತಿರುವುದು ಸರಿಯಲ್ಲ ಎಂದು ಪದಾಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದರು.

'ಪಂಚಾಯಿತಿಯ ಕೆಲ ಸದಸ್ಯರ ಪ್ರಭಾವದಿಂದ ವ್ಯಾಪಾರಿಗಳಿಗೆ ತಿಂಗಳು ಗಟ್ಟಲೆ ಭವನವನ್ನು ಬಾಡಿಗೆ ನೀಡಲಾಗುತ್ತಿದೆ. ಈ ನಡುವೆ ಸಭಾ


ಉದಯವಾಹಿನಿ ಚಿತ್ರ

ಭವನದಲ್ಲಿ ಜಿಮ್ ನಿರ್ಮಿಸುವ ಸಂಬಂಧ ಅರ್ಜಿ ಸಲ್ಲಿಕೆಯಾಗಿದ್ದು. ಖಾಸಗಿ ವ್ಯಕ್ತಿಗಳಿಗೆ ಬಾಡಿಗೆ ನೀಡಲು ಪಂಚಾಯಿತಿ ಮುಂದಾಗಿದೆ' ಎಂದು ಆರೋಪಿಸಿದರು.

ಕರವೇ ಜಿಲ್ಲಾಧ್ಯಕ್ಷ ಕೆ.ಎನ್. ದೀಪಕ್ ಮಾತನಾಡಿ, ಕಳೆದ 2019-20ನೇ ಸಾಲಿನಲ್ಲಿ ನಳಿನಿ ಗಣೇಶ್ ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ವೇದಿಕೆ ಹಾಗೂ ಜಾನಪದ ಪರಿಷತ್ ಸಂಘಟನೆಯ ಮನವಿಯ ಮೇರೆಗೆ ಸಭಾಂಗಣಕ್ಕೆ ಕನ್ನಡ ಭವನ ಎಂದು ನಾಮಕರಣ ಮಾಡಿ ಅಂದಿನ ಸಭೆ ನಿರ್ಣಯ ಮತ್ತು ಅಂಗೀಕಾರ ಮಾಡಿತ್ತು.

> 'ಮುಂದಿನ ದಿನಗಳಲ್ಲಿ ಈ ಸಭಾಂಗಣದಲ್ಲಿ ಸಂಪೂರ್ಣ ಅನುಕೂಲತೆಯನ್ನು ಕಲ್ಪಿಸಿ ಸಾರ್ವಜನಿಕ ಕಾರ್ಯಕ್ರಮಕ್ಕೆ ಮೀಸಲಾಗಿಸಬೇಕು. ತಿಂಗಳು, ವರ್ಷಗಟ್ಟಲೆ ಇತರೆ ವಾಣಿಜ್ಯ ಉದ್ದೇಶಕ್ಕೆ ಬಾಡಿಗೆ ನೀಡಬಾರದು ತಪ್ಪಿದಲ್ಲಿ ಸಂಘಟನೆಯಿಂದ ಪಟ್ಟಣ ಪಂಚಾಯಿತಿಯ ಮುಂದೆ ಅಹೋರಾತ್ರಿ ಧರಣಿ ನಡೆಸುತ್ತೇವೆ' ಎಂದು ಎಚ್ಚರಿಸಿದರು.

ನಂತರ ಅಟಲ್ ಜೀ ಕನ್ನಡ ಭವನ ಎಂಬ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿದೆ. ಆದರೆ, ಇಂದು ಹಣ ಮಾಡುವ ಉದ್ದೇಶದಿಂದ ವಾಣಿಜ್ಯ ಮಳಿಗೆಯನ್ನಾಗಿ ಬಳಸಿಕೊಳ್ಳಲು ಮುಂದಾಗಿರುವುದು ದುರಂತ' ಎಂದರು.

# ಅಂಬೇಡ್ಕರ್ ಕುರಿತ ಹೇಳಿಕೆ: ಗೃಹ ಸಚಿವ ಶಾ ರಾಜೀನಾಮೆಗೆ ಆಗ್ರಹ

• ಉದಯವಾಹಿನಿ, ಬಾಗೇಪಲ್ಲಿ

ರಾಜ್ಯಸಭೆ ಕಲಾಪದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿದ ಹೇಳಿಕೆ ಖಂಡಿಸಿ ಪಟ್ಟಣದ ಅಂಬೇಡ್ಕರ್ ಪುತ್ಥಳಿ ಎದುರು ರಾಜ್ಯ ಪ್ರಾಂತ ಕೃಷಿಕೂಲಿಕಾರರ ಸಂಘ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆಗಳು ಪ್ರತಿಭಟನೆ ನಡೆಸಿದವು. ಈ ವೇಳೆ ಅಂಬೇಡ್ಕರ್ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ ಗೃಹ ಸಚಿವ ಅಮಿತ್ ಶಾ ಅವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಕಾರರು


ಉದಯವಾಹಿನಿ ಚಿತ್ರ

ಆಗ್ರಹಿಸಿದರು. ಪ್ರಾಂತ ಕೃಷಿಕೂಲಿಕಾರರ ಸಂಘಟನೆ ರಾಜ್ಯ ಉಪಾಧ್ಯಕ್ಷ ಎಂ.ಪಿ.ಮುನಿವೆಂಕಟಪ್ಪ ಮಾತನಾಡಿ, 'ಪ್ರಜೆಗಳಿಂದ, ಪ್ರಜೆಗಳಿಗಾಗಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಎಲ್ಲರಿಗೂ ಸಮಾನವಾದ ಹಕ್ಕು ಹಾಗೂ ಮೀಸಲಾತಿಯನ್ನು ಕಲ್ಪಿಸಿದ್ದಾರೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನ ಅವಕಾಶಗಳು ಲಭ್ಯವಾಗುವಂತೆ ಮತ್ತು ಪ್ರತಿ ವ್ಯಕ್ತಿಯ ಪ್ರಗತಿಗಾಗಿ ಅಂಬೇಡ್ಕರ್ ಹೋರಾಡಿದ್ದಾರೆ. ಅಲ್ಲದೆ, ಅವರು ಜಾತೀಯತೆ, ಅಸ್ಪೃಶ್ಯತೆ ಧರ್ಮಾಂದತೆ, ಶಿಕ್ಷಣ, ಆರೋಗ್ಯ ಕಲ್ಪಿಸಲು ಹೋರಾಟ ಮಾಡಿದ್ದರು. ಇಂಥ ಧೀಮಂತ ವ್ಯಕ್ತಿ ಅಂಬೇಡ್ಕರ್ ಅವರ ಬಗ್ಗೆ ಅಮಿತ್ ಶಾ ಅವರು ಅವಮಾನಕಾರಿ ರೀತಿಯಲ್ಲಿ ನಾಲಿಗೆ ಹರಿಬಿಟ್ಟಿರುವುದು ಖಂಡನೀಯ' ಎಂದು

> ಎನ್‌ಡಿಎ ಮೈತ್ರಿಕೂಟದ ಕೇಂದ್ರ ಸರ್ಕಾರದ ಬಿಜೆಪಿ ನಾಯಕರು ಆರ್‌ಎಸ್‌ಎಸ್‌ನ ಅಣತಿಯಂತೆ ಜನಸಾಮಾನ್ಯರು ಮತ್ತು ಕೃಷಿ ಕೂಲಿ ಕಾರ್ಮಿಕರ ವಿರೋಧಿ ನೀತಿ, ಕಾಯ್ದೆಗಳನ್ನು ಜಾರಿಗೆ ತರಲು ಹೊರಟಿವೆ. ಅಂಬೇಡ್ಕರ್ ಅವರ ಬಗ್ಗೆ ಅವಮಾನಕಾರಿ ಮಾತುಗಳನ್ನಾಡಿದ ಅಮಿತ್ ಶಾ ಅವರನ್ನು ಕೇಂದ್ರ ಸಂಪುಟದಿಂದ ವಜಾ ಮಾಡಬೇಕು ಎಂದು ಒತ್ತಾಯಿಸಿದರು.

ಟೀಕಾಪ್ರಹಾರ ನಡೆಸಿದರು. ಸ್ವಾತಂತ್ರ ಹೋರಾಟದಲ್ಲಿ ಅನೇಕ ಮಹನೀಯರು, ಮಹಿಳೆಯರು, ವಿದ್ಯಾರ್ಥಿಗಳು ಮತ್ತು ಕೃಷಿ ಕೂಲಿಕಾರ್ಮಿಕರು ಭಾಗಿಯಾಗಿದ್ದರು. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಹಿಡನ್ ಅಜೆಂಡಾವನ್ನು ನಾವು ಒಪ್ಪುವುದಿಲ್ಲ.

# ಎಕ್ಸ್‌ಪ್ರೆಸ್ ವೇ ಸಂಚಾರ ಮಾರ್ಗದಲ್ಲಿ ಬದಲಾವಣೆ

• ಉದಯವಾಹಿನಿ, ಮಂಡ್ಯ

ಡಿಸೆಂಬರ್ 20 ರಿಂದ 22ರವರೆಗೆ ಸಕ್ಕರೆ ನಾಡು ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ. ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವವರಿಗಾಗಿ ಡಿಸೆಂಬರ್ 20ರಿಂದ ಮೂರು ದಿನಗಳ ಕಾಲ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ. ಡಿ.20ರಂದು ಮುಂಜಾನೆ 5 ಗಂಟೆಯಿಂದ 23ರ ಬೆಳಗ್ಗೆ 6 ಗಂಟೆಯವರೆಗೆ ಮಾರ್ಗ ಬದಲಾವಣೆಯಾಗಲಿದೆ.

ಬೆಂಗಳೂರು, ರಾಮನಗರ, ತುಮಕೂರು, ಮದ್ದೂರು, ಮಳವಳ್ಳಿಯಿಂದ ಎಕ್ಸ್ ಪ್ರೆಸ್ ವೇನಲ್ಲಿ ಬರುವವರಿಗೆ ಹೊಸಬೂದನೂರು ಬಳಿ ಎಕ್ಸಿಟ್ ಆಗಿ ಸರ್ವಿಸ್ ರಸ್ತೆ, ಸಮ್ಮೇಳನದ ಮುಖ್ಯ ದ್ವಾರದ ಮೂಲಕ ಬ್ಯಾಂಕರ್ಸ್ ಕಾಲೋನಿ ರಸ್ತೆ ಮೂಲಕ ಸಮ್ಮೇಳನ ಸ್ಥಳ ತಲುಪಬಹುದು. ಮೈಸೂರು, ಶ್ರೀರಂಗಪಟ್ಟಣ, ಪಾಂಡವಪುರದಿಂದ ಎಕ್ಸ್ ಪ್ರೆಸ್ ವೇನಲ್ಲಿ ಬರುವವರು ಶಶಿಕಿರಣ ಕನ್ವೆನ್ಷನ್ ಹಾಲ್ ಎದುರಿನಲ್ಲಿ ಎಕ್ಸಿಟ್ ಆಗಬೇಕು. ಸರ್ವಿಸ್ ರಸ್ತೆ ಮೂಲಕ ಹೊಸಬೂದನೂರು ಅಂಡರ್ ಪಾಸ್ ಮೂಲಕ ಯೂ ಟರ್ನ್ ಪಡೆದು ಸರ್ವಿಸ್ ರಸ್ತೆ ಮೂಲಕ ಬ್ಯಾಂಕರ್ಸ್ ಕಾಲೋನಿ


ಉದಯವಾಹಿನಿ ಚಿತ್ರ

> ಸರ್ವಿಸ್ ರಸ್ತೆಗಳಲ್ಲಿ ದ್ವಿಮುಖ ಸಂಚಾರ ನಿರ್ಬಂಧಿಸಲಾಗಿದ್ದು, ಚಿಕ್ಕಮಂಡ್ಯದಿಂದ ಹನಕೆರೆವರೆಗಿನ ಎರಡೂ ಬದಿಯ ಸರ್ವಿಸ್ ರಸ್ತೆಯಲ್ಲಿ ದ್ವಿಮುಖ ಸಂಚಾರ ನಿರ್ಬಂಧಿಸಲಾಗಿದೆ. ಮದ್ದೂರು ಮತ್ತು ಶ್ರೀರಂಗಪಟ್ಟಣ ಕಡೆಯಿಂದ ಸರ್ವಿಸ್ ರಸ್ತೆಯಲ್ಲಿ ಬರುವ ವಾಹನಗಳು ಎಕ್ಸ್ ಪ್ರೆಸ್ ವೇನಲ್ಲಿ ತೆರಳಬಹುದು. ನಿರ್ಬಂಧಿತ ವಾಹನಗಳನ್ನು ಹೊರತುಪಡಿಸಿ ಎಲ್ಲಾ ವಾಹನಗಳಿಗೆ ಎಕ್ಸ್ ಪ್ರೆಸ್ ವೇನಲ್ಲಿ ಸಂಚರಿಸಲು ಅವಕಾಶವಿದೆ.

ಮೂಲಕ ಸಮ್ಮೇಳನ ಸ್ಥಳಕ್ಕೆ ಬರಬಹುದು. ಇನ್ನು ಸಾಹಿತ್ಯ ಸಮ್ಮೇಳನಕ್ಕೆ ಬರುವವರಿಗಾಗಿ ಮಂಡ್ಯದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ.

# ವಿಷವಾಗುತ್ತಿದೆ ಆಹಾರ, ಉಸಿರಾಡುವ ಗಾಳಿ

• ಉದಯವಾಹಿನಿ, ಚಿಂತಾಮಣಿ

ಇತ್ತೀಚಿನ ದಿನಗಳಲ್ಲಿ ಕೃಷಿ ಮತ್ತು ತೋಟಗಾರಿಕೆಯಲ್ಲಿ ಪೀಡೆನಾಶಕಗಳ ಬಳಕೆ ಹೆಚ್ಚಾಗಿದ್ದು, ಪ್ರಕೃತಿ ಮೇಲೆ ದುಷ್ಪರಿಣಾಮ ಬೀರುತ್ತದೆ. ಸೇವಿಸುವ ಆಹಾರ, ಉಸಿರಾಡುವ ಗಾಳಿ ವಿಷಕಾರಿಯಾಗುತ್ತದೆ ಎಂದು ಕೃಷಿ ಇಲಾಖೆ ಉಪನಿರ್ದೇಶಕಿ ಎನ್.ಮಂಜುಳಾ ಆತಂಕ ವ್ಯಕ್ತಪಡಿಸಿದರು. ತಾಲ್ಲೂಕಿನ ಕೋಟಗಲ್ ಗ್ರಾಮದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಕೃಷಿ ಇಲಾಖೆ ಆಶ್ರಯದಲ್ಲಿ 2024-25ನೇ ಸಾಲಿನ ಸಸ್ಯ ಸಂರಕ್ಷಣಾ ಯೋಜನೆಯಡಿ ಬುಧವಾರ ಹಮ್ಮಿಕೊಂಡಿದ್ದ ಸಸ್ಯ ಸಂರಕ್ಷಣಾ ಔಷಧಗಳ ಶಿಫಾರಸು ಮತ್ತು ಸುರಕ್ಷಿತ ಬಳಕೆ ತರಬೇತಿ ಆಂದೋಲನದಲ್ಲಿ ಮಾತನಾಡಿದರು. ಸಮಗ್ರ ಕೃಷಿಯಿಂದ ರೈತರ ಆದಾಯ ದ್ವಿಗುಣವಾಗಲಿದ್ದು, ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಪೂರ್ವಜರು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಂಡು ಕೊಟ್ಟಿಗೆ ಗೊಬ್ಬರದಿಂದ ಬೇಸಾಯ ಮಾಡುತ್ತಿದ್ದರಿಂದ ಗುಣಮಟ್ಟದ ಆಹಾರ ಸಿಗುತ್ತಿತ್ತು ರೈತರು ವಿಜ್ಞಾನಿಗಳ ಸಲಹೆ, ಅಧಿಕಾರಿಗಳ ಮಾರ್ಗದರ್ಶನ, ಶಿಫಾರಸಿನಂತೆ ಕೀಟನಾಶಕಗಳನ್ನು ಬಳಸಬೇಕು ಎಂದರು.

ಸಹಾಯಕ ಕೃಷಿ ನಿರ್ದೇಶಕ ಅಮರನಾರಾಯಣರೆಡ್ಡಿ ಮಾತನಾಡಿ, ಸೂಕ್ತ ಶಿರಸ್ಸಿಲ್ಲದ ಅವೈಜ್ಞಾನಿಕ

> ಸುರಕ್ಷಿತ ಪೀಡನಾಶಕಗಳ ಬಳಕೆಯ ಅರಿವು ಮುಡಿಸುತ್ತಾ, ಸಾವಯವ ಕೃಷಿ ಪದ್ಧತಿ, ನೈಸರ್ಗಿಕ ಕೃಷಿಗೆ ಆದ್ಯತೆ ನೀಡಬೇಕು, ರಾಸಾಯನಿಕ ಗೊಬ್ಬರ, ಕೀಟನಾಶಕ ಪೀಡೆನಾಶಕಗಳನ್ನು ಅವಶ್ಯಕತೆಗೆ ತಕ್ಕಂತೆ ಉಪಯೋಗಿಸಬೇಕೆಂದು ತಿಳಿಸಿದರು.

ಕೀಟನಾಶಕ, ಸಸ್ಯನಾಶಕಗಳನ್ನು ಬಳಸುವುದರಿಂದ ಜೀವಸಂಕುಲದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಸರಿಯಾದ ರೋಗ ಮತ್ತು ಕೀಟಗಳನ್ನು ಗುರುತಿಸಿ, ಸಸ್ಯ ಸಂರಕ್ಷಣಾ ಔಷಧ ಸಿಂಪಡಿಸುವುದು ಅಗತ್ಯವಾಗಿದೆ. ಇದು ಪರಿಸರ, ಜೀವಸಂಕುಲ ಮತ್ತು ಮಾನವನ ಆರೋಗ್ಯಕ್ಕೆ ಸುರಕ್ಷಿತವಾಗಿರುತ್ತದೆ ಎಂದರು.

# ಬಾಳು ಬೆಳಗಿದ ಏಲಕ್ಕಿ ಬಾಳೆ

• ಉದಯವಾಹಿನಿ, ತುರುವೇಕೆರೆ

ಕುಟುಂಬಕ್ಕೆ ಆಧಾರವಾಗಿದ್ದ ಗಂಡನ ಸಾವಿನ ನಂತರ ಜೀವನ ನಿರ್ವಹಣೆಯ ಸಂಕಷ್ಟಕ್ಕೆ ಸಿಲುಕಿದ ಸೌಭಾಗ್ಯಮ್ಮ ಅವರನ್ನು ಕೈಹಿಡಿದದ್ದು ಏಲಕ್ಕಿಬಾಳೆ ಬೇಸಾಯ. ಪತಿಯಿಂದ ಬಳುವಳಿಯಾಗಿ ಬಂದ ನಾಲ್ಕು ಎಕರೆ ಖಾಲಿ ಜಮೀನು ಇತ್ತು. ಅದರಲ್ಲಿ ಏಲಕ್ಕಿಬಾಳೆ ಬೆಳೆಯುವ ಸಂಕಲ್ಪ ಮಾಡಿದರು. ಮಗನಿಗೂ ಕೃಷಿಯೆಡೆಗೆ ಆಸಕ್ತಿ ಮೂಡುವಂತೆ ಮಾಡಿದರು. ಊರಿನ ಕೆಲ ರೈತರ ಸಲಹೆ ಪಡೆದು, ನಂತರ ತೋಟಗಾರಿಕೆ ಮತ್ತು ನರೇಗಾ ಅಧಿಕಾರಿ ಗಳಿಂದ ಹೆಚ್ಚಿನ ಮಾಹಿತಿ ಪಡೆದು ಕೃಷಿ ಆರಂಭಿಸಿದರು.

ಬಾಳೆಗೆ ನೀರಿನ ಅಗತ್ಯ ಇದ್ದ ಕಾರಣ ಕೊಳವೆ ಬಾವಿ ಕೊರೆಸಿದರು. ಅದು ಸಿಡಿಲ ಮಣ್ಣಿನಿಂದ ಕುಸಿಯಿತು. ನಿರಾಶೆಗೊಳ್ಳದೆ ಕೃಷಿ ಹೊಂಡದ ಮೊರೆಹೋಗಿ 40 ಅಡಿಗಳಷ್ಟು ಬಾವಿ ತೆಗೆಸಿದರು. ಬಾವಿಯಿಂದ ತೆಗೆದ ಮಣ್ಣನ್ನೇ ನಾಲ್ಕು ಎಕರೆ ಖಾಲಿ ಜಮೀನಿಗೆ ಹರಡಿ ಹದ ಮಾಡಿದರು. ಎರಡು ಎಕರೆ ಭೂಮಿಯಲ್ಲಿ ಸುಮಾರು 1,500 ಬಾಳೆ ಸಸಿ ನೆಟ್ಟರು. ಬಾಳೆ ಕಟಾವು ಮಾಡಿದ ನಂತರ ಅದರ ಎಲೆಯನ್ನು ತೆಂಗಿನ ಬುಡಕ್ಕೆ ಹಾಕುವುದರಿಂದ ಹಸಿರೆಲೆ ಗೊಬ್ಬರವಾಗಿ ಲಾಭವಾಗುತ್ತದೆ. ಸಾವಯವ ಗೊಬ್ಬರವನ್ನು ಇಲ್ಲೇ ಉತ್ಪಾದಿಸುತ್ತಿದ್ದೇವೆ. ಹೆಚ್ಚಿನ ಗೊಬ್ಬರ ಹಾಕುವ ಅವಶ್ಯಕತೆ ಇಲ್ಲ. ಗಿಡ ನೆಟ್ಟ ಆರಂಭದಲ್ಲಿ ಮಾತ್ರ ಕುರಿಗೊಬ್ಬರ ಕೊಡಲಾಗಿದೆ. ನಂತರ ಬಾಳೆಯಿಂದಲೇ ಗೊಬ್ಬರ ಉತ್ಪಾದನೆಯಾಗುತ್ತದೆ ಎನ್ನುತ್ತಾರೆ ಸೌಭಾಗ್ಯಮ್ಮ ಅವರ ಮಗ ವೀರಭದ್ರಯ್ಯ. ನಿತ್ಯ ಮನೆಖರ್ಚು, ಮೊಮ್ಮಕ್ಕಳ ವಿದ್ಯಾಭ್ಯಾಸಕ್ಕೆ ಬಾಳೆ ಬೇಸಾಯ ಕೈಹಿಡಿಯಿತು. ಮನೆ ಮಂದಿಯೆಲ್ಲಾ ಕೆಲಸ ಮಾಡಿ ಸುಮಾರು ರೂ 94 ಸಾವಿರ ನರೇಗಾ ಕೂಲಿ ಹಣ ಕೃಷಿಗೆ ಆಸರೆಯಾಗಿ, ಕುಟುಂಬಕ್ಕೆ ಭದ್ರತೆ ಒದಗಿಸಿದೆ ಎಂದು ಸೌಭಾಗ್ಯಮ್ಮ ಹೇಳಿದರು.

# ಅವೈಜ್ಞಾನಿಕ ಯುಜಿಡಿ ವ್ಯವಸ್ಥೆ ತಂದ ಸಮಸ್ಯೆ

## ಮಳೆ-ಒಳಚರಂಡಿ ನೀರು ಮಿಶ್ರಣ ಸಮಸ್ಯೆ, ಪರಿಹಾರಕ್ಕೆ ಅಧಿಕಾರಿಗಳ ಜಾಣಕುರುಡು

• ಉದಯವಾಹಿನಿ, ಚಿಕ್ಕಬಳ್ಳಾಪುರ

ನಗರ ವ್ಯಾಪ್ತಿಯಲ್ಲಿ ಅವೈಜ್ಞಾನಿಕ ಒಳಚರಂಡಿ (ಯುಜಿಡಿ) ವ್ಯವಸ್ಥೆಯಿಂದಾಗಿ ಮಳೆ ನೀರು ಮತ್ತು ಶೌಚಗೃಹ ನೀರು ಮಿಶ್ರಣವಾಗುತ್ತಿದ್ದು ಜತೆಗೆ ನೀರಿನ ಪೋಲು ಮತ್ತು ಅನೈರ್ಮಲ್ಯ ಸಮಸ್ಯೆಯೂ ದೊಡ್ಡ ತಲೆ ನೋವಾಗಿ ಪರಿಣಮಿಸಿದೆ. ಹೌದು, ಜಿಲ್ಲಾ ಕೇಂದ್ರದಲ್ಲಿ ಚರಂಡಿ ವ್ಯವಸ್ಥೆ ಅವೈಜ್ಞಾನಿಕವಾಗಿದ್ದು, ಕೆಲವೆಡೆ ಸಾಮಾನ್ಯ ಚರಂಡಿಗೆ ಯುಜಿಡಿ ಪೈಪ್‌ಲೈನ್ ಸಂಪರ್ಕ ಕಲ್ಪಿಸಲಾಗಿದೆ. ಇದರ ಬಗ್ಗೆ ಸಭೆಗಳಲ್ಲಿ ಪ್ರಮುಖವಾಗಿ ಚರ್ಚೆಯಾಗುತ್ತಿದೆ. ಆದರೂ ಸೂಕ್ತ ಕ್ರಮ ಕೈಗೊಳ್ಳುವ ಕೆಲಸವಾಗುತ್ತಿಲ್ಲ. ಸ್ಥಳೀಯ ನಗರಸಭೆ ಸದಸ್ಯರು ಮತ್ತು ಜನರ ಕೂಗನ್ನು ಕೇಳಿಸಿಕೊಳ್ಳದ ಅಧಿಕಾರಿಗಳು, ಸ್ವಚ್ಛ ಭಾರತ್ ಅಭಿಯಾನದ ಸಾಧನೆಯ ಪ್ರಚಾರದಲ್ಲಿ ಮುಳುಗಿದ್ದಾರೆ. ಸಮಸ್ಯೆಗಳ ಪರಿಹಾರ ವಿಚಾರದಲ್ಲಿ ಜಾಣಕುರುಡು ಪ್ರದರ್ಶಿಸುತ್ತಿದ್ದಾರೆ.

**ಜಿಲ್ಲಾ ಕೇಂದ್ರದಲ್ಲಿ ಅವ್ಯವಸ್ಥೆ:** ನಗರಸಭೆ ವ್ಯಾಪ್ತಿಯಲ್ಲಿ 31 ವಾರ್ಡುಗಳಿದ್ದು, ಅಂದಾಜು 68 ಸಾವಿರ ಜನಸಂಖ್ಯೆ ಹೊಂದಿದೆ. ಹಳೇ ಪ್ರದೇಶಗಳಲ್ಲಿ ಕಟ್ಟಡ, ಚರಂಡಿ, ರಸ್ತೆಗಳು ಯೋಜನಾ ಪ್ರಾಧಿಕಾರದ ನಿಯಮಾನುಸಾರ ನಿರ್ಮಾಣವಾಗಿಲ್ಲ. ಕಿರಿದಾದ ಇಕ್ಕಟ್ಟಿನ ಜಾಗಗಳೇ ಹೆಚ್ಚು. ಒಂದು ಕಡೆ ಪ್ರಾರಂಭವಾದ ಚರಂಡಿಗೆ ಮತ್ತೊಂದು ಕಡೆ ಸಂಪರ್ಕ ಇಲ್ಲ. ಹಲವೆಡೆ ಮುಚ್ಚಿಹೋಗಿವೆ. ಇದರಿಂದ ನೀರು ಸರಾಗವಾಗಿ ಹರಿಯುವುದಿಲ್ಲ. ಕೊಳೆಗೇರಿ ಪ್ರದೇಶಗಳಲ್ಲಿ ಯುಜಿಡಿ ಇಲ. ಬಹುತೇಕ ಮನೆಗಳ ಶೌಚಗೃಹ ತ್ಯಾಜ್ಯ ನೇರವಾಗಿ ಚರಂಡಿಗೆ ಸೇರುತ್ತಿದೆ.

ಇನ್ನು ವಾಪಸಂದ್ರ, ಗಂಗನವಿದೆ, ಸರಎಂವಿ ಬಡಾವಣೆ, ಜೈಭೀಮ್ ಬಡಾವಣೆ, ದಿನ್ನೇ ಹೊಸಹಳ್ಳಿ ರಸ್ತೆ, ಕಾರ್ಖಾನೆ ಪೇಟೆ,


ಉದಯವಾಹಿನಿ ಚಿತ್ರ

> ಕಲುಷಿತ ನೀರು ನೇರ ಕೆರೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ನಗರದ ಯುಜಿಡಿ ನೇರವಾಗಿ ಅಮಾನಿ ಗೋಪಾಲಕೃಷ್ಣ ಕೆರೆಗೆ ಹರಿಯುತ್ತಿರುವುದರ ಬಗ್ಗೆ ಹಲವು ಬಾರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಎಲೆಪೇಟೆಗಳಲ್ಲಿ ಒಳಚರಂಡಿ ಕಟ್ಟಿಕೊಂಡು ಮ್ಯಾನ್‌ಹೋಲ್‌ಗಳಿಂದ ತ್ಯಾಜ್ಯ ನೀರು ರಸ್ತೆಗೆ ಉಕ್ಕಿ ಹರಿಯುತ್ತಿದೆ. ಇದಕ್ಕೆ ಪೈಪ್‌ಲೈನ್ ಅಳವಡಿಕೆ ಮತ್ತು ಚರಂಡಿ ನಿರ್ಮಾಣದಲ್ಲಿನ ಲೋಪವೇ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಆಯಾ ವಾರ್ಡ್‌ಗಳಲ್ಲಿಯೇ

> 'ಕೆಲ ವಾರ್ಡ್‌ಗಳಲ್ಲಿ ಮಳೆ ನೀರು ಮತ್ತು ಯುಜಿಡಿ ನೀರು ಮಿಶ್ರಣವಾಗುತ್ತಿದೆ. ಇದರಿಂದ ಹಲವು ಸಮಸ್ಯೆಗಳು ಉದ್ಭವವಾಗುತ್ತಿವೆ. ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.'
> – ನೇತ್ರಾವತಿ ನಗರಸಭೆ ಸದಸ್ಯೆ, ಚಿಕ್ಕಬಳ್ಳಾಪುರ

ಪರಿಹಾರ ಆಯಾ ವಾರ್ಡ್‌ಗಳಲ್ಲಿ ಸಂಬಂಧಪಟ್ಟ ನಗರಸಭೆ ಸದಸ್ಯರು ಮತ್ತು ವ್ಯಾಪ್ತಿಯ ಉಸ್ತುವಾರಿ ಅಧಿಕಾರಿಗಳು ಸ್ಥಳೀಯ ಸಮಸ್ಯೆಗಳು, ನಿರೀಕ್ಷೆಯ ಪರಿಹಾರ ಕೆಲಸಗಳ ಬಗ್ಗೆ ಯೋಜನೆ ರೂಪಿಸಬಹುದು. ಆದರೆ, ಬಹುತೇಕ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವೆ ಹೊಂದಾಣಿಕೆ ಇಲ್ಲ. ಅವೈಜ್ಞಾನಿಕ ಕೆಲಸಗಳ ಯೋಜನೆ ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದರ ಬಗ್ಗೆ ಆರೋಪ - ಪ್ರತ್ಯಾರೋಪಗಳು ಕೇಳಿ ಬರುತ್ತವೆ. ಕೆಲಸ ಮುಗಿದ ಬಳಿಕ ಲೋಪಗಳು ಗೊತ್ತಾಗುವವರೆಗೂ ಎಚ್ಚೆತ್ತುಕೊಳ್ಳುವುದಿಲ್ಲ. ಇಂತಹ ಸಂದರ್ಭದಲ್ಲಿ ಪರಸ್ಪರ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕೆಲಸವಾಗುತ್ತಿದೆ. ಆದರೆ, ನಿರಂತರವಾಗಿ ಘಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಳಚೆ ನೀರು ಸಂಗ್ರಹ, ಕಾಲಕಾಲಕ್ಕೆ ಸಂಸ್ಕರಣೆ ಯಾಗದಿರುವುದು, ವೈಜ್ಞಾನಿಕ ರೀತಿಯಲ್ಲಿ ಮರುಬಳಕೆಗೆ ಕ್ರಮ ಕೈಗೊಳ್ಳದಿರುವ ಅಸಡ್ಡೆ ಧೋರಣೆಯನ್ನು ತೋರಿದ್ದು ಇದೀಗ

> ಇಲ್ಲಿ ಕಾಮಗಾರಿ ಮುಗಿದು, ಹಾಗೆಯೇ ನಿರ್ವಹಣೆ ಪ್ರಾರಂಭಕ್ಕೆ ಚಾಲನೆ ನೀಡಲು ತಿಂಗಳಾನುಗಟ್ಟಲೇ ಸಮಯ ಬೇಕಾಗುತ್ತದೆ. ಇದರ ನಡುವೆ ಯುಜಿಡಿ ನೀರು ನೇರವಾಗಿ ಕೆರೆಗೆ ಹರಿಯುವುದನ್ನು ತಡೆಯುವ ನಿಟ್ಟಿನಲ್ಲಿ ಗಮನಹರಿಸುತ್ತಿಲ್ಲ. ಇದರಿಂದ ಅನೇಕ ತಲೆಮಾರುಗಳಿಂದ ಸಂರಕ್ಷಣೆ ಮಾಡಿಕೊಂಡು ಬಂದಿದ್ದ ನಗರದ ಪ್ರಮುಖ ಜಲಮೂಲ ಕಲುಷಿತಗೊಳ್ಳುತ್ತಿದ್ದು ಬಳಕೆಗೆ ಯೋಗ್ಯವಲ್ಲ ಎನ್ನುವಂತಹ ದುಸ್ಥಿತಿ ತಲುಪಿದೆ.

ಅಸಹಾಯಕತೆ ತೋರಲಾಗುತ್ತಿದೆ. ತ್ಯಾಜ್ಯ ನೀರಿನ ಸಂಸ್ಕರಣಾ ಘಟಕಕ್ಕೆ ಪರ್ಯಾಯವಾಗಿ ಹೊಸ ಜಾಗದಲ್ಲಿ ಮತ್ತೊಂದು ಘಟಕ ನಿರ್ಮಾಣ, ಯುಜಿಡಿ ಪೈಪ್‌ಲೈನ್ ಅಳವಡಿಕೆ ಸೇರಿ ಇತರ ಕಾಮಗಾರಿಗೆ 30 ಕೋಟಿ ರೂ. ಮಂಜೂರಾಗಿದ್ದು, ಡಿಪಿಆರ್ ತಯಾರಾಗಿದೆ. ವಾಪಸಂದ್ರ ದಿನ್ನೇ ಹೊಸಹಳ್ಳಿ ರಸ್ತೆ, ಕಂದವಾರ, ಪ್ರಶಾಂತ ನಗರದಲ್ಲಿ ಕಾಮಗಾರಿ ಸೇರ್ಪಡೆಯ ಚರ್ಚೆಯಾಗಿದ್ದು, ಸ್ಥಳೀಯ ನಗರಸಭೆ ಸದಸ್ಯರ ಸಲಹೆಯಂತೆ ಘಟಕಕ್ಕೆ ಹೊಸ ಜಾಗ ಗುರುತಿಸಲಾಗುತ್ತಿದೆ.

## ಮಿನಿ ನ್ಯೂಸ್

### 70 ಲಕ್ಷ ವಿದ್ಯುತ್ ಬಿಲ್ ಪಾವತಿಸುವಂತೆ ಕೆಐಎಡಿಬಿ ಪತ್ರ

• ಉದಯವಾಹಿನಿ, ತುಮಕೂರು

ತುಮಕೂರಿನ ಸಿದ್ದಗಂಗಾ ಮಠಕ್ಕೆ ಬರೋಬ್ಬರಿ 70 ಲಕ್ಷ ರೂಪಾಯಿ ವಿದ್ಯುತ್ ಬಿಲ್ ಪಾವತಿಸುವಂತೆ ನೋಟಿಸ್ ನೀಡಲಾಗಿದ್ದು, ಬಿಲ್ ನೋಡಿದ ಮಠದ ಆಡಳಿತ ಮಂಡಳಿಯೇ ಶಾಕ್ ಆಗಿದೆ. ನೀರಾವರಿ ವಿದ್ಯುತ್ ಬಿಲ್ ಪಾವತಿಸುವಂತೆ ಸಿದ್ದಗಂಗಾ ಮಠಕ್ಕೆ ಕೆಐಎಡಿಬಿ-ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಭಿಯಂತರರು ಪತ್ರ ಬರೆದಿದ್ದಾರೆ. 70,31,438 ರೂ ವಿದ್ಯುತ್ ಬಿಲ್ ಪಾವತಿಸುವಂತೆ ಸೂಚಿಸಲಾಗಿದೆ. ಕೆಐಎಡಿಬಿಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿ ಇಲ್ಲದಿರುವುದರಿಂದ ಬಿಲ್ ಭರಿಸಲು ಕೋರಲಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಇಷ್ಟೊಂದು ಪ್ರಮಾಣದ ವಿದ್ಯುತ್ ಬಿಲ್ ಕಂಡು ಮಠದ ಆಡಳಿತ ಮಂಡಳಿ ಶಾಕ್ ಆಗಿದೆ. ಸಿದ್ಧಗಂಗಾ ಮಠಕ್ಕೆ 70 ಲಕ್ಷ ದಷ್ಟು ಬಿಲ್ ಪಾವತಿಸುವಂತೆ ಪತ್ರ ಬಂದಿರುವುದು ನಿಜ. ಆದರೆ ಈ ಬಗ್ಗೆ ಪರಿಶೀಲನೆ ನಡೆಸುವಂತೆ ಮಠದಿಂದ ಕೆಐಎಡಿಬಿಗೆ ಪತ್ರ ಬರೆಯಲಾಗಿದೆ ಎಂದು ಸಿದ್ಧಗಂಗಾ ಮಠದ ಶೀಗಳು ತಿಳಿಸಿದ್ದಾರೆ. ಹೊನ್ನೇನಹಳ್ಳಿ ಕೆರೆಯ ನೀರನ್ನು ಸಿದ್ದಗಂಗಾ ಮಠವೇ ಉಪಯೋಗಿಸಿಕೊಳ್ಳುತ್ತಿರುವುದರಿಂದ 70,31,438 ರೂ ಬಿಲ್ ಬಂದಿದ್ದು, ಹೀಗಾಗಿ ಮಠವೇ ಬಿಲ್ ಪಾವತಿಸಲು ಸೂಚಿಸಲಾಗಿದೆ ಎಂಬುದು ಕೆಐಎಡಿಬಿ ವಾದ. ಒಟ್ಟಾರೆ ಸಿದ್ಧಗಂಗಾ ಮಠಕ್ಕೆ ವಿದ್ಯುತ್ ಬಿಲ್ ಪಾವತಿಗೆ ಕೆಐಎಡಿಬಿ ಸೂಚನೆ ವಿಚಾರ ಹೊಸ ವಿವಾದಕ್ಕೆ ಕಾರಣವಾಗಿದೆ.

### ರಾಗಿ ಕಟಾವು ಯಂತ್ರದ ಬಾಡಿಗೆ ಹಣದ ನಿಯಂತ್ರಣಕ್ಕೆ ಮನವಿ

• ಉದಯವಾಹಿನಿ, ಶಿಡ್ಲಘಟ್ಟ

ರಾಗಿ ಕಟಾವು ಯಂತ್ರದ ಮಾಲೀಕರು ಹಾಗೂ ಮಧ್ಯವರ್ತಿಗಳು ಹೆಚ್ಚು ರಾಗಿ ಕಟಾವು ಯಂತ್ರಕ್ಕೆ ಹೆಚ್ಚಿನ ಪ್ರಮಾಣದ ಬಾಡಿಗೆ ಹಣ ಪಡೆಯುತ್ತಿದ್ದಾರೆ. ಇದು ರೈತರಿಗೆ ಆರ್ಥಿಕ ಹೊರೆಯಾಗಿದೆ. ಈ ಕುರಿತು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ (ಪುಟ್ಟಣ್ಣಯ್ಯ ಬಣ) ಸದಸ್ಯರು ಹಕ್ಕು ದಾಖಲೆ ಶಿರಸ್ತೇದಾರ್ ಆಸೀಯಾ.ಬಿ. ಅವರ ಮೂಲಕ ತಹಶೀಲ್ದಾರ್ ಅವರಿಗೆ ಗುರುವಾರ ಮನವಿ ಸಲ್ಲಿಸಿದರು. ರಾಗಿ ಬೆಳೆ ಕಟಾವು ಮಾಡುವ ಹಂತದಲ್ಲಿದ್ದು, ಕೂಲಿಯಾಳುಗಳ ಸಮಸ್ಯೆ ಮನಗಂಡು ಜಿಲ್ಲಾಧಿಕಾರಿ ಅವರು ಕಟಾವು ಮಾಡುವ ಯಂತ್ರಕ್ಕೆ ಒಂದು ಗಂಟೆಗೆ ?2,700 ಬಾಡಿಗೆ ಪಡೆಯುವಂತೆ ಆದೇಶ ಮಾಡಿದ್ದಾರೆ. ಈ ಆದೇಶ ಉಲ್ಲಂಘಿಸಿದರೆ ಕಟಾವು ಯಂತ್ರದ ಮಾಲೀಕರು ಅಥವಾ ಮಧ್ಯವರ್ತಿಗಳ ಮೇಲೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆಯನ್ನೂ ನೀಡಿದ್ದಾರೆ. 'ಆದಾಗ್ಯೂ, ನಮ್ಮ ತಾಲ್ಲೂಕಿನಲ್ಲಿ ಹಲವು ಕಡೆ ರೈತರಿಂದ ಮನಬಂದಂತೆ ಬಾಡಿಗೆ ವಸೂಲಿ ಮಾಡಲಾಗುತ್ತಿದೆ. ಪ್ರತಿ ಗಂಟೆಗೆ 3,500ರಿಂದ ?5,000ರವರೆಗೆ ಮಧ್ಯವರ್ತಿಗಳ ಮೂಲಕ ವಸೂಲಿ ಮಾಡಲಾಗುತ್ತಿದೆ. ಈ ಬಗ್ಗೆ ಪರಿಶೀಲನೆ ನಡೆಸಬೇಕು. ಹೋಬಳಿವಾರು ರಾಜಸ್ವ ನಿರೀಕ್ಷಕರ ಮೂಲಕ ವರದಿ ಪಡೆದು ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈ ಮೂಲಕ ರೈತರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಬೇಕು ಎಂದು ಮನವಿ ಮಾಡಿದರು.

### ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಿಎಂ ಸಿದ್ದರಾಮಯ್ಯರಿಂದ ಉದ್ಘಾಟನೆ

• ಉದಯವಾಹಿನಿ, ಮಂಡ್ಯ

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಂಡ್ಯ ಸಜ್ಜಾಗಿದ್ದು, ಬೆಳಗ್ಗ 10 : 20 ಕ್ಕೆ ಸಿಎಂ ಸಿದ್ದರಾಮಯ್ಯ ಉದ್ಘಾಟನೆ ಮಾಡಲಿದ್ದಾರೆ. 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಮಂಡ್ಯದಲ್ಲಿ ನಾಳೆಯಿಂದ ಮೂರು ದಿನ ನಡೆಯಲಿದೆ. ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬೆಳಗ್ಗ 10:20 ಕ್ಕೆ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಹಿರಿಯ ಸಾಹಿತಿ ಗೊ.ರು ಚನ್ನಬಸಪ್ಪ ಆಯ್ಕೆಯಾಗಿದ್ದಾರೆ. ಕನ್ನಡ ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ ಸಮ್ಮೇಳನಕ್ಕೆ ಆಗಮಿಸುವ ಸಾಹಿತ್ಯಾಸಕ್ತರು ಹಾಗೂ ನೋಂದಣಿ ಮಾಡಿಕೊಂಡಿರುವ ಪ್ರತಿನಿಧಿಗಳಿಗೆ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ವಸತಿ ವ್ಯವಸ್ಥೆ, ಮೂಲ ಸೌಲಭ್ಯ ಕಲ್ಪಿಸಲು ಉದ್ದೇಶಿರುವುದರಿಂದ ಡಿಸೆಂಬರ್ 20, 21ರಂದು ಎರಡು ದಿನಗಳ ಕಾಲ ರಜೆ ಘೋಷಣೆ ಮಾಡಿ ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ್ ಆದೇಶ ಹೊರಡಿಸಿದ್ದಾರೆ. ಶಾಲಾ, ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು ಸಮ್ಮೇಳನದಲ್ಲಿ ಅನುಕೂಲವಾಗುವಂತೆ ಎರಡು ದಿನಗಳ ಕಾಲ ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ 2 ದಿನ ರಜೆ ಘೋಷಣೆ ಮಾಡಲಾಗಿದೆ. ರಜೆ ಅವಧಿಯನ್ನು ಮುಂದಿನ ಸರ್ಕಾರಿ ರಜಾ ದಿನಗಳಲ್ಲಿ ಪಾಠ ಪ್ರವಚನ ನಡೆಸಿ ಸರಿದೂಗಿಸುವಂತೆ ಆದೇಶದಲ್ಲಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

### ಬೇರ್ಪಡಿಸಲಾಗದ ಕೊಡವ ಪರಂಪರೆಯ ಶ್ರೀಮಂತ ಭಂಡಾರ 'ತೋಕ್'

• ಉದಯವಾಹಿನಿ, ಮಡಿಕೇರಿ

ಬಂದೂಕು ಅಥವಾ ತೋಕ್ ಕೊಡವ ಜನಾಂಗದ ಧಾರ್ಮಿಕ-ಜನಾಂಗೀಯ ಸಂಸ್ಕಾರ ಮಾತ್ರವಲ್ಲ, ಕೊಡವರ ಪ್ರಾಚೀನ ಹೆಮ್ಮೆಯ ಹೆಗ್ಗುರುತೂ ಆಗಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು. ನಾಚಪ್ಪ ಪ್ರತಿಪಾದಿಸಿದರು. ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಮೂರ್ನಾಡಿನ ಬಲಂಬೇರಿಯಲ್ಲಿ ಬುಧವಾರ ಏರ್ಪಡಿಸಿದ್ದ 15ನೇ ವರ್ಷದ 'ಗನ್ ಕಾರ್ನಿವಲ್- ತೋಕ್ ನಮ್ಮ'ಯಲ್ಲಿ ಅವರು ಮಾತನಾಡಿದರು. 'ಭೂಮಿ ತಾಯಿ, ಪ್ರಕೃತಿ ಮಾತೆ, ಪವಿತ್ರ ಕಾವೇರಿ ನದಿ, ದೈವಿಕ ವನಪ್ರದೇಶಗಳು, ಪೂಜನೀಯ ಮಂದ್‌ಗಳು ಅಲಿಖಿತ ಮೌಖಿಕ ಜಾನಪದ-ಕಾನೂನು ವ್ಯವಸ್ಥೆಗಳು ಮತ್ತು ತೋಕ್ ಅಥವಾ ಬಂದೂಕು ಸಂಸ್ಕೃತಿಯೊಂದಿಗೆ ಆಳವಾಗಿ ಹೆಣೆದುಕೊಂಡಿದೆ. ಇವು ಕೊಡವ ಜನಾಂಗದ ಭೂತ, ವರ್ತಮಾನ ಮತ್ತು ಭವಿಷ್ಯದಿಂದ ಬೇರ್ಪಡಿಸಲಾಗದ ಕೊಡವ ಪರಂಪರೆಯ ಶ್ರೀಮಂತ ಭಂಡಾರಗಳಾಗಿವೆ' ಎಂದು ಪ್ರತಿಪಾದಿಸಿದರು.


ಗನ್ ಅಥವಾ ತೋಕ್ ಅನ್ನು ಸಂವಿಧಾನದ 25 ಮತ್ತು 26ನೇ ವಿಧಿಯ ಅಡಿಯಲ್ಲಿ ಸಿಬ್ಬರ ಕಿರ್ಪಾನ್‌ಗೆ ಸಮಾನವಾಗಿ ರಕ್ಷಿಸಬೇಕು. ಸ್ವಯಂ ರಕ್ಷಣೆಗಾಗಿ ಕೊಡವ ಮಹಿಳೆಯರಿಗೆ ವಿಶೇಷ ಗನ್ ಶೂಟಿಂಗ್ ತರಬೇತಿಯನ್ನು ಸರ್ಕಾರ ಪ್ರಾರಂಭಿಸಬೇಕು. ಏಕ ಗವಾಕ್ಷಿ ಯೋಜನ ಮೂಲಕ ತೋಕ್ ವಿನಾಯಿತಿ ಪತ್ರವನ್ನು ವಿಳಂಬವಿಲ್ಲದೇ ಕೊಡವರಿಗೆ ವಿತರಿಸಬೇಕು. ಹಿಂದೆ ನಡೆಯುತ್ತಿದ್ದಂತೆ ಎಲ್ಲಾ ಕೊಡವ ಆಚರಣೆಗಳಲ್ಲಿ ಗುಂಡು ಹಾರಿಸುವ ಪದ್ಧತಿಯನ್ನು ಮುಂದುವರೆಸಬೇಕು' ಎಂದು ಒತ್ತಾಯಿಸಿದರು.

ಅಂತರಾಳದಿಂದ... EDITORIAL

# ಅಂಬೇಡ್ಕರ್‌ಗೆ ಅವಮಾನ ಅಮಿತ್ ಶಾ ಕ್ಷಮೆ ಯಾಚಿಸುತ್ತಾರೆಯೆ?

ಈವರೆಗೆ ಅಂಬೇಡ್ಕರ್ ಬೆನ್ನಿಗೆ ಇರಿಯುತ್ತಾ ಬಂದಿರುವ ಅಮಿತ್ ಶಾ ತಂಡ, ಇದೀಗ ಸಂಸತ್ ನಲ್ಲಿ ಎದೆಗೇ ಇರಿಯಲು ಮುಂದಾಗಿದೆ. ಅಂಬೇಡ್ಕರ್ ಕುರಿತಂತೆ ತಮ್ಮ ಎದೆಯೊಳಗೆ ಬಚ್ಚಿಟ್ಟ ಅಸಹನೆ ಅವರಿಗೇ ಅರಿವಿಲ್ಲದೆ ಸಂಸತ್‌ನಲ್ಲಿ ಸ್ಫೋಟಿಸಿದೆ. ಯಾವಾಗ ನೋಡಿದರೂ ಅಂಬೇಡ್ಕರ್ ಅಂಬೇಡ್ಕರ್ ಎಂದು ಹೇಳುವುದು ಒಂದು ಶೋಕಿಯಾಗಿ ಬಿಟ್ಟಿದೆ. ಅಂಬೇಡ್ಕರ್ ಬದಲಿಗೆ ದೇವರ ಹೆಸರನ್ನು ಜಪಿಸಿದ್ದರೆ ಇಷ್ಟು ಹೊತ್ತಿಗೆ ಸ್ವರ್ಗವಾದರೂ ಪ್ರಾಪ್ತಿಯಾಗಿ ಬಿಡುತ್ತಿತ್ತು ಎಂಬ ಹೇಳಿಕೆಯ ಮೂಲಕ ಅವರು ಹರಿಹಾಯ್ದಿರುವುದು ಅಂಬೇಡ್ಕರ್ ವಾದಿಗಳ ವಿರುದ್ಧ ಮಾತ್ರವಲ್ಲ, ಸ್ವತಃ ಅಂಬೇಡ್ಕರ್ ವಿರುದ್ಧ ಗೋಳ್ವಾಲ್ಕರ್,ಸಾವರ್ಕರ್‌ರನ್ನು ಪ್ರಾತಃಸ್ಮರಣೀಯರಾಗಿ ಸ್ವೀಕರಿಸಿದವರಿಗೆ ಅಂಬೇಡ್ಕರ್ ಸ್ಮರಣೆ ಇರುಸುಮುರುಸನ್ನುಂಟು ಮಾಡುವುದು ಸಹಜವೇ ಆಗಿದೆ. ಗೋಳ್ವಾಲ್ಕರ್ ಕಲ್ಪನೆಯ ಬ್ರಾಹ್ಮಣ್ಯ ಭಾರತವನ್ನು ಕಟ್ಟುವ ಅವರ ಕನಸಿಗೆ ಅತಿ ದೊಡ್ಡ ತಡೆಯಾಗಿರುವುದು ಅಂಬೇಡ್ಕರ್, ಈಗಾಗಲೇ ಅಂಬೇಡ್ಕರ್ನ್ನು ಮುಸ್ಲಿಮ್ ದ್ವೇಷಕ್ಕೆ ಬಳಸಲು ಸಾಕಷ್ಟು ತಿಣುಕಿ ಅದರಲ್ಲಿ ವಿಫಲವಾಗಿರುವ ಆರ್‌ಎಸ್‌ಎಸ್ ಮತ್ತು ಬಿಜೆಪಿ, ತಮ್ಮ ಅಜೆಂಡಾಗಳಿಗೆ ಪೂರಕವಾಗಿ ಅಂಬೇಡ್ಕರ್ ವಿಚಾರಗಳನ್ನು ತಿರುಚುವುದಕ್ಕೂ ಪ್ರಯತ್ನಿಸಿ ಸೋತಿದ್ದಾರೆ. ಆದರೆ ಭಾರತದ ಜಾತಿ ವ್ಯವಸ್ಥೆ ಅಸ್ಪೃಶ್ಯತೆ, ಬ್ರಾಹ್ಮಣ್ಯದ ವಿರುದ್ಧ ಅಂಬೇಡ್ಕರ್ ವಿಚಾರಧಾರೆಗಳು ಕನ್ನಡಿಯಂತೆ ಸ್ಪಷ್ಟವಾಗಿರುವ ಕಾರಣ, ಅದನ್ನು ತಿರುಚುವುದು ಸುಲಭವಿಲ್ಲ. ಹಿಂದೂ ಆಗಿ ನಾನು ಸಾಯುವುದಿಲ್ಲ' ಎಂದು ಅಂಬೇಡ್ಕರ್ ಘೋಷಿಸಿದ್ದು ಮಾತ್ರವಲ್ಲ, ಅದರಂತೆಯೇ ನಡೆದುಕೊಂಡರು. ತನ್ನ ಸಹಸ್ರಾರು ಹಿಂಬಾಲಕರ ಜೊತೆಗೆ ಅವರು ಬೌದ್ಧ ಧರ್ಮವನ್ನು ಸ್ವೀಕರಿಸುವ ಮೂಲಕ ಹಿಂದೂ ಧರ್ಮವನ್ನೇ ಸಾರಾಸಗಟಾಗಿ ತಿರಸ್ಕರಿಸಿದರು. ತಮ್ಮ ಹಿಂದುತ್ವವಾದಿ ರಾಜಕಾರಣಕ್ಕೆ ಅಂಬೇಡ್ಕರ್‌ರನ್ನು ಯಾವ ರೀತಿಯಲ್ಲೂ ಬಳಸಲಾಗುವುದಿಲ್ಲ ಬಳಸಿದರೆ ಅದು ತಿರುಗುಬಾಣವಾಗುತ್ತದೆ. ಎನ್ನುವುದು ಸ್ಪಷ್ಟವಾದ ಕಾರಣಕ್ಕೇ ಇದೀಗ ಅಂಬೇಡ್ಕರವರನ್ನು ಬಹಿರಂಗವಾಗಿ ತಿರಸ್ಕರಿಸುವ ಹಂತಕ್ಕೆ ಹಿಂದುತ್ವವಾದಿಗಳು ಬಂದು ನಿಂತಿದ್ದಾರೆ. ಅದರ ಭಾಗವಾಗಿಯೇ ಅಮಿತ್ ಶಾ ಅವರು ಅಂಬೇಡ್ಕರ್ ಕುರಿತಂತೆ ಸಂಸತ್‌ನಲ್ಲಿ ಅಸಹನೆಯ ಮಾತುಗಳನ್ನಾಡಿದ್ದಾರೆ. ಅಂಬೇಡ್ಕರ್ ಸಂವಿಧಾನ ದುರ್ಬಲರಿಗೆ ನೀಡಿರುವ ಮೀಸಲಾತಿಯನ್ನು ಮೋದಿ ನೇತೃತ್ವದ ಸರಕಾರ ಹಂತ ಹಂತವಾಗಿ ದುರ್ಬಲಗೊಳಿಸುತ್ತಾ ಬಂದಿದೆ. ಇಂದು ಪ್ರಬಲ ಜಾತಿಯವರೇ ಬೀದಿಗಿಳಿದು ಮೀಸಲಾತಿಗಾಗಿ ಒತ್ತಾಯಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದರ ಜೊತೆ ಜೊತೆಗೇ ಬಲಾಢ್ಯ ಜಾತಿಗಳ ಬಡವರಿಗೆ ಶೇ. 10 ಮೀಸಲಾತಿಯನ್ನು ಜಾರಿಗೊಳಿಸಿ ಮೀಸಲಾತಿಯ ಮೂಲ ಉದ್ದೇಶವನ್ನು ವಿಫಲಗೊಳಿಸಲಾಯಿತು. ಇದೀಗ ಅಂಬೇಡ್ಕರ್ ಸಂವಿಧಾನವನ್ನೂ ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ ಜೊತೆಗೆ ಅಂಬೇಡ್ಕರ್ ಹೆಸರನ್ನು ಅಳಿಸುವ ಕೆಲಸ ಕೂಡ ಈ ಕಾರಣದಿಂದ ಅಮಿತ್ ಶಾ ಅವರು ದೇಶಕ್ಕೆ ಅಂಬೇಡ್ಕರ್ ಹೆಸರನ್ನು ಜಪಿಸಬೇಡಿ, ದೇವರ ಹೆಸರನ್ನು ಜಪಿಸಿ ಎಂದು ಕರೆ ನೀಡಿದ್ದಾರೆ. ಅಂಬೇಡ್ಕರ್ ವಿರುದ್ಧ ಸ್ವಾತಂತ್ರ್ಯ ಪೂರ್ವದಲ್ಲೇ ಹಿಂದೂ ಮಹಾಸಭಾದ ನಾಯಕರು ದಾಳಿ ನಡೆಸುತ್ತಾ ಬಂದಿದ್ದಾರೆ. ಬಾಲಗಂಗಾಧರ ತಿಲಕ್‌ರಂತಹ ಹಿಂದುತ್ವವಾದಿಗಳಿಗೆ ಅಂಬೇಡ್ಕರ್ ಅವರ ವಿಚಾರಧಾರೆಗಳ ಬಗ್ಗೆ ತೀವ್ರ ಅಸಹನೆಯಿತ್ತು ತಮ್ಮ ಕೇಸರಿ' ಪತ್ರಿಕೆಯಲ್ಲಿ ಅಂಬೇಡ್ಕರ್ ವಿರುದ್ಧ ಬಹಳಷ್ಟು ಬಾರಿ ಟೀಕೆಗಳನ್ನು ಮಾಡಿದ್ದಾರೆ ಗೋಳ್ವಾಲ್ಕರ್, ಸಾವರ್ಕರ್ ಮೊದಲಾದವರು ಅಂಬೇಡ್ಕರ್ ವಿರೋಧಿಸಿದ ಜಾತಿ ವ್ಯವಸ್ಥೆಯನ್ನು ಎತ್ತಿ ಹಿಡಿದಿದ್ದರು. ಜಾತಿ ವ್ಯವಸ್ಥೆಯನ್ನು ಭಾರತದ ಹೆಗ್ಗಳಿಕೆ ಎಂದು ಅವರು ಬಣ್ಣಿಸಿದ್ದರು. ಅಮಿತ್ ಶಾ. ನರೇಂದ್ರ ಮೋದಿ ಅವರು ಸಾವರ್ಕರ್, ಗೋಳ್ವಾಲ್ಕರ್ ಅವರನ್ನು ಪ್ರಾತಃಸ್ಮರಣೀಯರಾಗಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ಭಾರತವನ್ನು ಕಟ್ಟಲು ಹೊರಟಿರುವುದರಿಂದ, ಅಂಬೇಡ್ಕರ್ ಹೆಸರು ಅವರಿಗೆ ಒಂದು ಸಮಸ್ಯೆಯಾಗಿದೆ. ಸಾವರ್ಕರ್ ವಿರುದ್ಧ ಮಾತನಾಡಿದ ರಾಹುಲ್‌ಗಾಂಧಿಯ ವಿರುದ್ಧ ನ್ಯಾಯಾಲಯದಲ್ಲಿ ಬಿಜೆಪಿ ನಾಯಕರು ಮೊಕದ್ದಮೆ ಹೂಡಿದ್ದರು. ಇದೀಗ ಅಮಿತ್ ಶಾ ಸಂಸತ್ ನೊಳಗೇ ಅಂಬೇಡ್ಕರ್ ವಿರುದ್ಧ ಹೇಳಿಕೆಯನ್ನು ನೀಡುವ ಮೂಲಕ ಸಂವಿಧಾನಕ್ಕೆ ಅವಮಾನಿಸಿದ್ದಾರೆ. ಇದೀಗ ಬಿಜೆಪಿ ಅಮಿತ್ ಶಾ ವಿರುದ್ಧ ದೂರು ದಾಖಲಿಸುತ್ತದೆಯೆ? ಎನ್ನುವ ಪ್ರಶ್ನೆಯೆದ್ದಿದೆ. ಗೃಹ ಸಚಿವರಾಗಿ ಅಮಿತ್ ಶಾ ಹೇಳಿಕೆ ನೀಡಿರುವುದರಿಂದ ಅವರು ದೇಶದ ಕ್ಷಮೆ ಯಾಚಿಸುವುದು ಅತ್ಯಗತ್ಯವಾಗಿದೆ. ಹಿಂದೆ ಕಾಂಗ್ರೆಸ್ ಕೂಡ ಅಂಬೇಡ್ಕರ್‌ರನ್ನು ಅವಮಾನಿಸಿತ್ತು ಎನ್ನುವುದನ್ನು ಮುಂದಿಟ್ಟುಕೊಂಡು ಅಮಿತ್ ಶಾ ಹೇಳಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಯಾವ ಕಾರಣಕ್ಕೂ ಸಮರ್ಥಿಸಲು ಮುಂದಾಗಬಾರದು. ಅಂಬೇಡ್ಕರ್ ಸಂವಿಧಾನ ದುರ್ಬಲರಿಗೆ ನೀಡಿರುವ ಮೀಸಲಾತಿಯನ್ನು ಮೋದಿ ನೇತೃತ್ವದ ಸರಕಾರ ಹಂತ ಹಂತವಾಗಿ ದುರ್ಬಲಗೊಳಿಸುತ್ತಾ ಬಂದಿದೆ. ಇಂದು ಪ್ರಬಲ ಜಾತಿಯವರೇ ಬೀದಿಗಿಳಿದು ಮೀಸಲಾತಿಗಾಗಿ ಒತ್ತಾಯಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದರ ಜೊತೆ ಜೊತೆಗೇ ಬಲಾಢ್ಯ ಜಾತಿಗಳ ಬಡವರಿಗೆ ಶೇ. 10 ಮೀಸಲಾತಿಯನ್ನು ಜಾರಿಗೊಳಿಸಿ ಮೀಸಲಾತಿಯ ಮೂಲ ಉದ್ದೇಶವನ್ನು ವಿಫಲಗೊಳಿಸಲಾಯಿತು. ಇದೀಗ ಅಂಬೇಡ್ಕರ್ ಸಂವಿಧಾನವನ್ನೂ ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ ಜೊತೆಗೆ ಅಂಬೇಡ್ಕರ್ ಹೆಸರನ್ನು ಅಳಿಸುವ ಕೆಲಸ ಕೂಡ ಈ ಕಾರಣದಿಂದ ಅಮಿತ್ ಶಾ ಅವರು ದೇಶಕ್ಕೆ ಅಂಬೇಡ್ಕರ್ ಹೆಸರನ್ನು ಜಪಿಸಬೇಡಿ, ದೇವರ ಹೆಸರನ್ನು ಜಪಿಸಿ ಎಂದು ಕರೆ ನೀಡಿದ್ದಾರೆ. ಅಂಬೇಡ್ಕರ್ ವಿರುದ್ಧ ಸ್ವಾತಂತ್ರ್ಯ ಪೂರ್ವದಲ್ಲೇ ಹಿಂದೂ ಮಹಾಸಭಾದ ನಾಯಕರು ದಾಳಿ ನಡೆಸುತ್ತಾ ಬಂದಿದ್ದಾರೆ. ಬಾಲಗಂಗಾಧರ ತಿಲಕ್‌ರಂತಹ ಹಿಂದುತ್ವವಾದಿಗಳಿಗೆ ಅಂಬೇಡ್ಕರ್ ಅವರ ವಿಚಾರಧಾರೆಗಳ ಬಗ್ಗೆ ತೀವ್ರ ಅಸಹನೆಯಿತ್ತು ತಮ್ಮ ಕೇಸರಿ' ಪತ್ರಿಕೆಯಲ್ಲಿ ಅಂಬೇಡ್ಕರ್ ವಿರುದ್ಧ ಬಹಳಷ್ಟು ಬಾರಿ ಟೀಕೆಗಳನ್ನು ಮಾಡಿದ್ದಾರೆ ಗೋಳ್ವಾಲ್ಕರ್, ಸಾವರ್ಕರ್ ಮೊದಲಾದವರು ಅಂಬೇಡ್ಕರ್ ವಿರೋಧಿಸಿದ ಜಾತಿ ವ್ಯವಸ್ಥೆಯನ್ನು ಎತ್ತಿ ಹಿಡಿದಿದ್ದರು. ಜಾತಿ ವ್ಯವಸ್ಥೆಯನ್ನು ಭಾರತದ ಹೆಗ್ಗಳಿಕೆ ಎಂದು ಅವರು ಬಣ್ಣಿಸಿದ್ದರು. ಅಮಿತ್ ಶಾ. ನರೇಂದ್ರ ಮೋದಿ ಅವರು ಸಾವರ್ಕರ್, ಗೋಳ್ವಾಲ್ಕರ್ ಅವರನ್ನು ಪ್ರಾತಃಸ್ಮರಣೀಯರಾಗಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ಭಾರತವನ್ನು ಕಟ್ಟಲು ಹೊರಟಿರುವುದರಿಂದ, ಅಂಬೇಡ್ಕರ್ ಹೆಸರು ಅವರಿಗೆ ಒಂದು ಸಮಸ್ಯೆಯಾಗಿದೆ.

**ಇದೀಗ ಅಮಿತ್ ಶಾ ಸಂಸತ್ ನೊಳಗೇ ಅಂಬೇಡ್ಕರ್ ವಿರುದ್ಧ ಹೇಳಿಕೆಯನ್ನು ನೀಡುವ ಮೂಲಕ ಸಂವಿಧಾನಕ್ಕೆ ಅವಮಾನಿಸಿದ್ದಾರೆ. ಇದೀಗ ಬಿಜೆಪಿ ಅಮಿತ್ ಶಾ ವಿರುದ್ಧ ದೂರು ದಾಖಲಿಸುತ್ತದೆಯೆ? ಎನ್ನುವ ಪ್ರಶ್ನೆಯೆದ್ದಿದೆ. ಗೃಹ ಸಚಿವರಾಗಿ ಅಮಿತ್ ಶಾ ಹೇಳಿಕೆ**



## ರಾಮಾಯಣ

**ವಿಶ್ವಾಮಿತ್ರನು ತ್ರಿಶಂಕುರಾಜನಿಂದ ಯಾಗಮಾಡಿಸಲು ಉಪಕ್ರಮಿಸಿದುದು**

• ಹಿಂದಿನ ಸಂಚಿಕೆಯಿಂದ 57 ನೆಯ ಅಧ್ಯಾಯ

ನೀನು ಸುಖವಾಗಿ ಯಜ್ಞಕರ್ಮಗಳನ್ನು ಮಾಡಿ ದೇಹಸಹಿತವಾಗಿ ಸ್ವರ್ಗಕ್ಕೆ ಹೋಗು! ತ್ರಿಶಂಕುರಾಜ, ನಿನಗೆ ಸ್ವರ್ಗಪ್ರಾಪ್ತಿಯನ್ನು ಹಸ್ತಗತವಾಗಿ ಮಾಡಿದೆನೆಂದು ನಿಶ್ಚಯಿಸು. ನನ್ನ ಮಾತು ನಿಶ್ಚಯ. ನನ್ನ ಮರೆಹೊಕ್ಕ ಮೇಲೆ ನಾನೇ ನಿನ್ನ ಕಾರ್‍ಯವನ್ನು ಸಾಧ್ಯಮಾಡಿ ಕೊಡುವೆನು' ಎಂದು ನಂಬಿಕೆಯನ್ನು ಕೊಟ್ಟು ಧರ್ಮಿಷ್ಠರೂ ಅತಿತೇಜಸ್ವಿಗಳೂ ಆದ ತನ್ನ ಮಕ್ಕಳನ್ನು ಕರೆದು ಪಟ್ಟಣಕ್ಕೆ ಅಧಿಪತಿಯಾದ ತ್ರಿಶಂಕುರಾಜನೆ, ಶಾಪದಿಂದ ಚಂಡಾಲಕ್ತ್ವವು ಬರಲು ನೀನು ಇಲ್ಲಿಗೆ ಬಂದ ಕಾರಣವೇನು ಎಂದು ಕೇಳಿದನು.

ಚಂಡಾಲಸ್ವರೂಪನಾದ ತ್ರಿಶಂಕುರಾಜನು ಕೈ ಮುಗಿದುಕೊಂಡು ವಿಶ್ವಾಮಿತ್ರನನ್ನು ಕುರಿತು ★ ವಿಶ್ವಾಮಿತ್ರಮುನೀಶ್ವರರೆ, ನಾನು ಯಾಗಮಾಡಿ ಶರೀರಸಹಿತವಾಗಿ ಸ್ವರ್ಗಲೋಕಕ್ಕೆ ಹೋಗಬೇಕೆಂದು ಮನಸ್ಸಿನಲ್ಲೆಣಿಸಿ ನನ್ನ ಗುರುವಾದ ವಸಿಷ್ಠಮುನೀಶ್ವರನೊಡನೆ ಹೇಳಲು ಆತನು ಅದು ಸಾಧ್ಯವಲ್ಲವೆಂದು ನಿರಾಕರಿಸಿದನು. ಆಮೇಲೆ ಆ ಗುರುವಿನ ಮಕ್ಕಳ ಸಮೀಪಕ್ಕೆ ಹೋಗಿ ಕೇಳಲು ಅವರೂ ನಿರಾಕರಿಸಿದರು ಆಮೇಲೆ ನಾನು ಮತ್ತೊಬ್ಬರ ಸಮೀಪಕ್ಕೆ ಹೋಗಿ ನನ್ನ ಗತಿಯನ್ನು ಕಂಡುಕೊಳ್ಳುವೆನೆಂದು ನುಡಿಯಲು ಆ ಗುರುಪುತ್ರರು ಕೋಪಿಸಿಕೊಂಡು ನಾನು ಚಂಡಾಲನಾಗ ಬೇಕೆಂದು ಶಾಪವನ್ನು ಕೊಟ್ಟರು. ಆದ್ದರಿಂದ ನನಗೆ ಈ ವಿಪತ್ತು ಬಂದಿತು ವಿಶ್ವಾಮಿತ್ರ ಮುನೀಶ್ವರರೆ, ನಿಮ್ಮ ದರ್ಶನದಿಂದಲೇ ನಾನು ಶರೀರಸಹಿತ ಸ್ವರ್ಗಲೋಕವನ್ನೈದುವೆನು. ನಾನು ಮೊದಲು ನೂರು ಯಾಗಗಳನ್ನು ಮಾಡಿದೆನು ಹಾಗಾದರೂ ನನಗೆ ಸ್ವರ್ಗ ಪ್ರಾಪ್ತಿಯೆಂಬ ಫಲವಿಲ್ಲದಿದೆ. ನಾನು ಒಂದುಸಾರಿಯಾದರೂ ಅಸತ್ಯವನ್ನು ಆಡಿದವನಲ್ಲ, ಎಂಥ ಆಪತ್ತು ಬಂದ ಸಮಯದಲ್ಲಿಯಾದರೂ ಕ್ಷತ್ರಿಯ ಧರ್ಮವನ್ನು ಬಿಟ್ಟಿರಲಿಲ್ಲ. ಇದಕ್ಕೆ ನಿಮ್ಮ ಪಾದಗಳೇ ಸಾಕ್ಷಿ. ನಾನು ಅನೇಕ ಯಜ್ಞಗಳನ್ನು ಮಾಡಿದೆನು ಸಮಸ್ತ ಪ್ರಜೆಗಳನ್ನೂ ಧರ್ಮದಿಂದ ಪರಿಪಾಲಿಸಿದೆನು. ನನ್ನ ಸದ್ವರ್ತನೆಗಳಿಂದ ಗುರುಗಳನ್ನು ಸಂತೋಷಪಡಿಸಿದೆನು. ನಾನು ಧರ್ಮದಲ್ಲಿ ಪ್ರವರ್ತಿಸಿ ಯಾಗವನ್ನು ಮಾಡಬೇಕೆಂದು ಯತ್ನ ಮಾಡಿದರೆ ನನ್ನ ಗುರುಗಳು ಅಂಗೀಕರಿಸಲಿಲ್ಲ. ದೈವವೇ ಪ್ರಬಲವಾದುದು. ಮನುಷ್ಯಯತ್ನವು ಅಪ್ರಯೋಜಕವು. ಲೋಕದಲ್ಲಿ ಸಮಸ್ತವೂ ದೈವಾಧೀನವಾಗಿಯೇ ಇರುವುದು. ದೈವವೇ ಪರಮಗತಿಯಲ್ಲದೆ ಮತ್ತೊಂದಿಲ್ಲ. ನಾನು ಈ ರೀತಿಯಲ್ಲಿ ದೈವದಿಂದ ಕೆಡಿಸಲ್ಪಟ್ಟವನಾಗಿ ಮಹಾದುಃಖಾಕ್ರಾಂತನಾಗಿ ನಿಮ್ಮ ಕೃಪೆಯನ್ನು ಬಯಸಿ ನಿಮ್ಮ ಸಮೀಪಕ್ಕೆ ಬಂದೆನು. ನೀವೇ ನನ್ನನ್ನು ಅನುಗ್ರಹಿಸಿ ರಕ್ಷಿಸಬೇಕಲ್ಲದೆ ನನಗೆ ಬೇರೆ ಗತಿಯಿಲ್ಲ. ನನಗೆ ಬಂದಿರುವ ಈ ಶಾಪವನ್ನು ನಿಮ್ಮ ಸಾಮರ್ಥ್ಯದಿಂದ ತೊಲಗಿಸಿ ರಕ್ಷಿಸಬೇಕು? ಎಂದು ಪ್ರಾರ್ಥಿಸಿದನು.

ಮುಂದುವರಿಯುವುದು...

# ಒಂದು ಸಾವಿರ ಅನ್ನದಾತರಿಗೆ ಉದ್ಯೋಗ ವ್ಯವಸ್ಥೆ, ಘೋಷಣೆ



☛ ಚನ್ನೇಗೌಡ ಉಜ್ಜನಿ ಚಲುವಯ್ಯ
• ಉದಯವಾಹಿನಿ, ವಿಶೇಷ

ಈ ವರ್ಷದ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಕ್ಕರೆ ನಗರಿ ಮಂಡ್ಯದಲ್ಲಿ ಉದ್ಘಾಟನೆ ಮಾಡಲಿರುವ ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯನವರೇ,

ಸಕ್ಕರೆ ನಾಡು ಗೌರವಿಸುವ ಒಕ್ಕಲಿಗ ಜನಾಂಗದ ಮುಖಂಡರು, ಉಪ ಮುಖ್ಯ ಮಂತ್ರಿಗಳಾದ ಮಾನ್ಯ ಡಿ ಕೆ ಶಿವಕುಮಾರ್ ರವರೇ ಈ ನೆಲದಲ್ಲಿ ಕನ್ನಡದಲ್ಲಿ ಪದವಿ ಪಡೆದಿರುವ ಲಕ್ಷಾಂತರ ವಿದ್ಯಾವಂತರು ಕೆಲಸವಿಲ್ಲದೇ ಕಂಗಾಲಾಗಿದ್ದಾರೆ.

ವಿಶೇಷವಾಗಿ ಈ ಜಿಲ್ಲೆಯ ಸಾವಿರಾರು ಅನ್ನದಾತ ರೈತ ಗಂಡು ಮಕ್ಕಳಿಗೆ ಮದುವೆಯಾಗಲು ಹೆಣ್ಣು ಮಕ್ಕಳು ಸಿಗುತ್ತಿಲ್ಲ. ಅಂತಹ ಮಕ್ಕಳನ್ನು ಗುರುತಿಸಿ ಕನ್ನಡದಲ್ಲಿ ಪದವಿ ಪಡೆದ ಮಂಡ್ಯ ರೈತ ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ಸಾವಿರ ಪದವೀಧರ ಮಕ್ಕಳಿಗೆ ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗ ವ್ಯವಸ್ಥೆಯನ್ನು ಕೂಡಲೇ ಘೋಷಣೆ ಮಾಡಲೇಬೇಕಾಗಿದ್ದು ಇಲ್ಲಿಯ ಅನ್ನದಾತರಿಗೆ ಬದುಕಲು ಸೂಕ್ತ ವ್ಯವಸ್ಥೆ ಮಾಡಿ ಕೊಡಲೇಬೇಕಿದೆ. ಇಡೀ ವಿಶ್ವವೇ ನೋಡುತ್ತಿರುವ ಹೆಮ್ಮೆಯ ಮಾತೃ ಭಾಷೆ ಕನ್ನಡಿಗರ ಹಬ್ಬವಾದ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯದಲ್ಲಿ ಉದ್ಘಾಟನೆ ಮಾಡಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಈ ನೆಲದ ಕನ್ನಡಿಗರಿಗೆ ಸರ್ಕಾರಿ, ಅರೆಸರ್ಕಾರಿ, ಖಾಸಗಿ ಕಂಪನಿಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವ ಕಾನೂನನ್ನು ಜಾರಿಗೆ ತರುವ ಘೋಷಣೆ ಮಾಡಲು ನಿಮಗೇಕೆ ಸಾಧ್ಯವಾಗುತ್ತಿಲ್ಲ, ಇತ್ತಾ ಖಾಸಗಿ ಕಂಪನಿಗಳ ಮಾಲೀಕರ ಒತ್ತಡಕ್ಕೆ ಮಣಿದು ಸ್ಥಳೀಯರಿಗೆ ಉದ್ಯೋಗ ನೀಡುವ ಕಾನೂನನ್ನು ರೂಪಿಸುವುದಾಗಿ ಘೋಷಿಸಿ,ಇದ್ದಕಿದ್ದಂತೆ ಹಿಂದೆ ಸರಿದಿರುವ ನೀವು ಈ ನೆಲದ ಕನ್ನಡಿಗರಿಗೆ ಮಾಡಿರುವ ಅನ್ಯಾಯ ಅಲ್ಲವೇ ? ಕನ್ನಡಿಗರ ಮುಖ್ಯಮಂತ್ರಿಗಳಾಗಿ ಈಗಲಾದರೂ ಈ ಮಣ್ಣಿನ ಮಕ್ಕಳಿಗೆ ಉದ್ಯೋಗ ನೀಡುವ ಘೋಷಣೆ ಮಾಡುವಲ್ಲಿ ವಿಳಂಬ ಮಾಡಬೇಡಿ, ಆಗ ಮಾತ್ರ ನಿಮ್ಮ ನಿಜವಾದ ಕನ್ನಡ ಪ್ರೇಮ ನಾಡಿನ ಜನತೆಯ ಮೇಲೆ ಇಟ್ಟಿರುವ ಅಭಿಮಾನ ಏನೆಂದು ತಿಳಿಯುತ್ತದೆ.

**ಸಕ್ಕರೆ ನಗರಿ ಮಂಡ್ಯದಲ್ಲಿ ಉದ್ಘಾಟನೆ**



ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೇವಲ ಹಣ ನೀಡಿದರೆ ಸಾಲದು, ಕನ್ನಡದ ಮಕ್ಕಳು ಉದ್ಯೋಗಕ್ಕಾಗಿ ಅಲೆಯುತ್ತಿರುವ ಈ ಕಾಲಘಟ್ಟದಲ್ಲಿ ಅವರಿಗೆ ಅನ್ನ ನೀಡುವ ಕಾನೂನು ಹಾಗೂ ಇಲ್ಲಿಯ ಕನ್ನಡಿಗರಿಗೆ ರೈತ ವರ್ಗದ ಅನ್ನದಾತರಿಗೆ ಭದ್ರತೆ ನೀಡುವ ಕಾಯಕ ಮುಂದುವರಿಯಲಿ.

ಭೂಮಿತಾಯಿಯನ್ನು ನಂಬಿ ಬದುಕುತ್ತಿರುವ ಅನ್ನದಾತರನ್ನು ಗೌರವಿಸಿ, ಪ್ರೋತ್ಸಾಹಿಸಿ, ಅನ್ನದಾತರನ್ನು ಉಳಿಸಿ, ಅನ್ನವಿಲ್ಲದೇ ಬದುಕಿಲ್ಲ, ಪ್ರತೀ ಜಿಲ್ಲೆಯಲ್ಲಿ ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡಿರುವ ಪದವಿ ಮಕ್ಕಳಿಗೆ ಜಿಲ್ಲೆಯ ಪ್ರತೀ ತಾಲ್ಲೋಕು ಮಟ್ಟದಲ್ಲಿ ಕನ್ನಡ ಕಟ್ಟುವ ಕೆಲಸ ಹಾಗೂ ಸ್ಥಳೀಯವಾಗಿ ಖಾಲಿ ಇರುವ ಸ್ಥಳಗಳಲ್ಲಿ ಮೂಲ ಕನ್ನಡಿಗರಿಗೆ ಸರ್ಕಾರಿ ಕಂಪನಿಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಕೆಲಸ ನೀಡುವ ಮೂಲಕ ಈಗಲಾದರೂ ಈ ಮಣ್ಣಿನ ಮಕ್ಕಳಿಗೆ ಉದ್ಯೋಗ ನೀಡುವ ಘೋಷಣೆ ಆಗಲಿ.

ಪ್ರತೀ ವರ್ಷ ಸಾಹಿತ್ಯ ಸಮ್ಮೇಳನಕ್ಕೆ ಕೇವಲ ಹಣ ನೀಡಿದರೆ ಸಾಲದು ಕನ್ನಡದ ಮಕ್ಕಳು ಉದ್ಯೋಗಕ್ಕಾಗಿ ಅಲೆಯುತ್ತಿರುವ ಈ ನೆಲದ ಮಕ್ಕಳಿಗೆ ಅನ್ನ, ನೀರು, ನೆರಳು ನೀಡುವ ಮಹತ್ಕಾರ್ಯದ ಬಗ್ಗೆ ಒಂದಷ್ಟು ಆರೋಗ್ಯಯುತ ಕಾನೂನು ಬಹಳ ಮುಖ್ಯ.

ಈ ನೆಲದಲ್ಲಿ ಕನ್ನಡಿಗರು ಬದುಕಲು ಅವಕಾಶ ನೀಡಿ, ಹೊರಗಿನಿಂದ ಇಲ್ಲಿ ಬಂದು ಈ ನೆಲಕ್ಕೆ, ಇಲ್ಲಿಯ ಸಂಸ್ಕೃತಿಗೆ, ಗೌರವ ನೀಡದವರಿಗೆ ಮುಲಾಜಿಲ್ಲದೆ ಕಠಿಣ ಕ್ರಮ ತೆಗೆದುಕೊಳ್ಳುವ ಕಾನೂನು ಬರಲಿ.

ಈ ನೆಲದ ಮುಗ್ದ ಕನ್ನಡಿಗರ ಮನದ ನೋವು ನಿಮಗೆ ಅರ್ಥವಾಗಿದೆ ಎಂದುಕೊಂಡಿದ್ದೇವೆ. ಇಲ್ಲಿಯ ಕನ್ನಡಿಗರು ನೋವಿನಲ್ಲಿರುವಾಗ ಬರೀ ಬಣ್ಣದ ಕನ್ನಡಾಭಿಮಾನದ ಮಾತುಗಳಿಂದ ಏನೂ ಪ್ರಯೋಜನವಾಗುವುದಿಲ್ಲ ಮುಖ್ಯವಾಗಿ ಅನ್ನದಾತರಿಗೆ ನೇರವಾಗಿ ಕನ್ನಡದ ಕೃಷಿಯ ಸಂಭ್ರಮ ಬೆಳಕು ಎಲ್ಲರ ಮನ ಮನೆಯಲ್ಲಿಯೂ ಪ್ರಸರಿಸಲಿ.

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ

**ಪ್ರತೀ ವರ್ಷ ಭರ್ಜರಿ ಸಮ್ಮೇಳನ, ಭರ್ಜರಿ ಊಟ, ಸಂಭ್ರಮದ ಮೇಳ, ಇವಿಷ್ಟೇ ಆಗಬಾರದು ಆಯಾ ಜಿಲ್ಲೆಯ ಪರಿಸ್ಥಿತಿ, ಅಲ್ಲಿಯ ಮುಗ್ದ ಮಕ್ಕಳಿಗೆ ಒಂದಷ್ಟು ಭರವಸೆಯ ಬೆಳಕಾಗಿ, ಮಾನ್ಯ ಮುಖ್ಯಮಂತ್ರಿಗಳೇ ದಯವಿಟ್ಟು ಈ ಸಮ್ಮೇಳನದಲ್ಲಿ ಮೇಲ್ಕಂಡ ಮನವಿಯನ್ನು ಒಪ್ಪಿ ಈ ನೆಲದ ಮುಗ್ದ ಮಕ್ಕಳಿಗೆ ಗೌರವ ಸೂಚಿಸಲೇ ಬೇಕು.**

# ಉದಯೋನ್ಮುಖ ನೃತ್ಯಕಲಾವಿದೆ ಅಮೃತಾ ವಿಭಾಳ ರಂಗಪ್ರವೇಶ



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

• ಉದಯವಾಹಿನಿ, ವಿಶೇಷ

ಖ್ಯಾತ 'ನೃತ್ಯದೇಗುಲ ಸ್ಕೂಲ್ ಆಫ್ ಡ್ಯಾನ್ಸ್' ನೃತ್ಯಶಾಲೆಯ ಸಂಸ್ಥಾಪಕಿ ಮತ್ತು ನಿರ್ದೇಶಕಿಯಾದ ನಾಟ್ಯಗುರು ವಿದುಷಿ ಕಾಮಾಕ್ಷಿ ಉತ್ತಮ ನೃತ್ಯ ಕಲಾವಿದೆ ಹಾಗೂ ಬದ್ಧತೆಯ ನೃತ್ಯಗುರುವಾಗಿ ನೂರಾರು ಮಕ್ಕಳಿಗೆ ನೃತ್ಯಶಿಕ್ಷಣವನ್ನು ನೀಡುತ್ತಿದ್ದಾರೆ. ಇವರ ಕಾಳಜಿಪೂರ್ಣ ಬದ್ಧತೆಯ ಭರತನಾಟ್ಯ ನೃತ್ಯ ಮಾರ್ಗದರ್ಶನದಲ್ಲಿ ರೂಪು ತಳೆದ ನೃತ್ಯಶಿಲ್ಪ ಶ್ರೀಮತಿ ಅಮೃತಾ ವಿಭಾ ಕೌಶಿಕ್ ಬಹು ಆಸಕ್ತಿಯಿಂದ ವಿದ್ಯಾರ್ಜಿಸುತ್ತಿರುವ ನಿಷ್ಠ ನೃತ್ಯಕಲಾವಿದೆ.

ಶ್ರೀ ಗಣಪತಿ ರಾಜ ಮತ್ತು ಎಂ.ಜಿ. ಕಲ್ಪನಾ ಅವರ ಪುತ್ರಿಯಾದ ಅಮೃತಾ, ಜ್ಯೂನಿಯರ್ ಮತ್ತು ಸೀನಿಯರ್ ನೃತ್ಯಪರೀಕ್ಷೆಗಳಲ್ಲಿ ಅತ್ಯುಚ್ಚ ಅಂಕಗಳನ್ನು ಗಳಿಸಿದ ವೈಶಿಷ್ಟ್ಯ ಅವಳದು. ನಾಡಿನ ಅನೇಕ ಮುಖ್ಯ ವೇದಿಕೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ ಅನುಭವ ಹೊಂದಿರುವ ಅಮೃತಾ, ಎಂ.ಎಸ್ಸಿ. ಪದವೀಧರೆ. ಇವಳು, ತನ್ನ ದಶಕಗಳ ಶಿಕ್ಷಣ ಮತ್ತು ನೃತ್ಯ ಪ್ರತಿಭಾ ಪ್ರದರ್ಶನಕ್ಕಾಗಿ ಇದೀಗ ದಿ. 21 ಶನಿವಾರ ಸಂಜೆ 5 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ವಿದ್ಯುಕ್ತವಾಗಿ ರಂಗಪ್ರವೇಶ ಮಾಡಲಿದ್ದಾಳೆ. ಇವಳ ಸುಮನೋಹರ ನೃತ್ಯವಲ್ಲರಿಯನ್ನು ಕಣ್ತುಂಬಿಕೊಳ್ಳಲು ಎಲ್ಲಾ ಕಲಾರಸಿಕರಿಗೂ ಆದರದ ಸುಸ್ವಾಗತ.

ಅಮೃತಾಗೆ ಚಿಕ್ಕಂದಿನಿಂದ ನೃತ್ಯದ ಬಗ್ಗೆ ಅತೀವ ಆಸಕ್ತಿ. ಬಾಲ್ಯದ 9 ರ ಎಳವೆಯಿಂದಲೇ ತನ್ನ ಸೋದರಿ ಸಾಯಿ ಪ್ರಿಯಾಂಕ ಜೊತೆ ಗುರು ಶ್ರೀಮತಿ ಪದ್ಮಾ ತಂಗವೇಲು ಅವರ ಬಳಿ ನೃತ್ಯ ಕಲಿಯಲು ಸೇರಿ ಶ್ರದ್ಧೆಯಿಂದ ಅಭ್ಯಾಸ ಮಾಡಿ, ಜ್ಯೂನಿಯರ್ ಮತ್ತು ಸೀನಿಯರ್ ನೃತ್ಯ ಪರೀಕ್ಷೆಗಳನ್ನು ಪೂರ್ಣಗೊಳಿಸಿಕೊಂಡಳು. ಓದಿನಲ್ಲೂ ಅಮೃತಾ ಚುರುಕು. ಶಾಲೆಯ ಎಲ್ಲ ನೃತ್ಯಸ್ಪರ್ಧೆಗಳಲ್ಲೂ ಭಾಗವಹಿಸಿ ಬಹುಮಾನ ಗಳಿಸಿದ ಹೆಮ್ಮೆ ಅವಳದು.

ಮೌಂಟ್ ಕಾರ್ಮಲ್ ಕಾಲೇಜಿನಿಂದ ಹೆಚ್ಚಿನ ಅಂಕ ಗಳಿಸಿ ಎಂ.ಎಸ್ಸಿ. ( ಹ್ಯುಮನ್ ಡೆವೆಲಪ್ಮೆಂಟ್) ಪದವೀಧರೆಯಾದರೂ ನೃತ್ಯದತ್ತಲೇ ಸೆಳೆತ. ಹೀಗಾಗಿ ಕೆಲ ಕಾಲ ಕೆಂಬ್ರಿಡ್ಜ್ ಶಾಲೆಯಲ್ಲಿ ಪ್ರೈಮರಿ ಸ್ಕೂಲ್ ವಿಜ್ಞಾನ ಮತ್ತು ನೃತ್ಯದ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ತೃಪ್ತಿ ಅವಳದು. ಪ್ರಸ್ತುತ, ಹೆಚ್.ಟಿ.ಸಿ. ಗ್ಲೋಬಲ್ ಸರ್ವಿಸಸ್ ನಲ್ಲಿ ಆಪರೇಷನ್ ಟೀಮ್ ನಲ್ಲಿ ಉದ್ಯೋಗ.


ನಾಡಿನಾದ್ಯಂತ ನೃತ್ಯ ಪ್ರದರ್ಶನಗಳನ್ನು ನೀಡಿ ತನ್ನ ಪ್ರತಿಭೆಯನ್ನು ಪ್ರದರ್ಶನ ಮಾಡಿದ್ದು, ಗುರು ಕಾಮಾಕ್ಷಿ ಅವರ ಮಾರ್ಗದರ್ಶನದಲ್ಲಿ ಚಿದಂಬರದಲ್ಲಿ 4000 ನೃತ್ಯ ಕಲಾವಿದರ ಜೊತೆ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ನಲ್ಲಿ ಭಾಗವಹಿಸಿ ನರ್ತಿಸಿದ ಹೆಮ್ಮೆ ಅವಳದು. ನಾಟ್ಯಗುರು ಬಿ.ಎಸ್. ಮೀರಾ ಅವರಲ್ಲೂ ಹೆಚ್ಚಿನ ಕಲಿಕೆ.

ಕಾಮಾಕ್ಷಿ ಅವರ ವಿಶೇಷ ತರಬೇತಿಯಲ್ಲಿ, ತಂಜಾವೂರಿನಲ್ಲಿ ನಡೆದ 'ಆರುದ್ರ ನೃತ್ಯೋತ್ಸವದಲ್ಲಿ ನರ್ತಿಸಿ, ಅಲ್ಲಿನ ಮೇಯರ್ ಅವರಿಂದ 'ಆರುದ್ರ ನಾಟ್ಯ ಮಯಿಲ್' ಎಂಬ ಪ್ರತಿಷ್ಠಿತ ಬಿರುದನ್ನೂ ಪಡೆದುಕೊಂಡ ವಿಶೇಷ ಅಮೃತಳದು.

ಈ ಸಾಧನೆಯ ಪಯಣದಲ್ಲಿ ಉತ್ತಮ ನೃತ್ಯ ಕಲಾವಿದೆಯಾಗಿ ಹೆಜ್ಜೆ ಹಾಕುವ ಕನಸು ಹೊಂದಿದ್ದಾಳೆ ಅಮೃತಾ.



**'ಆರುದ್ರ ನಾಟ್ಯ ಮಯಿಲ್' ಎಂಬ ಪ್ರತಿಷ್ಠಿತ**



ಸಾಮಾಜಿಕ ಕಳಕಳಿ
ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

## ದಿನಕ್ಕೊಂದು ಮುಕ್ತಕ -57

• ಉದಯವಾಹಿನಿ, ವಿಶೇಷ

ಸರದಿಯಲಿ ಬರುತಿರಲು ಕಷ್ಟಗಳ ಸಹಿಸುತಲಿ
ಸರಿ ಸಹನೆಯಲಿ ಬಾಳು ನಡೆಸುತಿರುವ
ಪೊರೆಯುತಿಹ ರೈತನಿಗೆ ನಿಜದನ್ನದಾತನಿಗೆ
ಕೊರತೆಗಳು ಬರದಿರಲಿ ಲಕ್ಷ್ಮಿ ದೇವಿ....



☛ ಉದಯವಾಹಿನಿ ಚಿತ್ರ

**ಭಾವಾರ್ಥ :** ನಾವು ಜೀವನದಲ್ಲಿ ದಿನ ದಿನ ಹಂತವಾಗಿ ಸಾಗುತ್ತಾ ಹೋಗುತ್ತೇವೆ. ದಿನೇ ದಿನೇ ವಯಸ್ಸು ಏರುತ್ತಾ ಹೋಗುತ್ತದೆ ಹೊರತು ಇಳಿಯುವುದಿಲ್ಲ. ಅಂತಹ ಜೀವನದಲ್ಲಿ ನಾವು ಸರದಿಯ ಸಾಲಿನಲ್ಲಿ ಸಾಗುತ್ತಿರುತ್ತೇವೆ. ಎಲ್ಲರ ಜೀವನದಲ್ಲಿ ಸಂತೋಷವಾಗಿ ಬಾಳುವುದು ಮುಖ್ಯ. ಹಾಗೆಯೇ ನೋಡಿದರೆ ರೈತನು ಬೆಳೆಯನ್ನು ಪೊರೆಯುತ್ತಾ ಸಾಗುತ್ತಾನೆ. ಉತ್ತಮ ಬೆಳೆಯನ್ನು ಬೆಳೆಯಲು ಸತತ ಪ್ರಯತ್ನವನ್ನು ಪಡುತ್ತಾನೆ. ಅಂತಹ ರೈತನಿಗೆ ಯಾವುದೇ ರೀತಿಯ ಕೊರತೆಗಳು ಬಾರದಂತೆ ಆಗಲಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಬೆಳೆಯು ಬೆಳೆಯದಿದ್ದರೆ ಜೀವನದಲ್ಲಿ ಏನು ಮಾಡಲು ಸಾಧ್ಯವಿಲ್ಲ ರೈತನಿಲ್ಲದ ಬದುಕು . ಜೀವನ ಮಾಡಲು ಆಹಾರ ಬೇಕು ಅಂತಹ ಅನ್ನದಾತನೇ ರೈತ.


# ನ್ಯಾಯಾಲಯದ ಮಹತ್ವದ ಆದೇಶ

• ಉದಯವಾಹಿನಿ, ಬೆಂಗಳೂರು

ನವದೆಹಲಿ ಹಿಂದೂದ್ವೇಷಿ ಚಿತ್ರಕಾರ ಎಂ. ಎಫ್ ಹುಸೇನ್ ಇವರ ಹಿಂದೂ ದೇವಿ-ದೇವತೆಗಳ ಆಕ್ಷೇಪಾರ್ಹ ಚಿತ್ರಗಳನ್ನು ಪ್ರದರ್ಶನಕ್ಕೆ ಇರಿಸಿದ್ದ ಪ್ರಕರಣದಲ್ಲಿ ಹಿಂದೂ ಜನಜಾಗೃತಿ ಸಮಿತಿ ಮತ್ತು ಇತರ ಹಿಂದುತ್ವನಿಷ್ಠ ಸಂಘಟನೆಗಳಿಂದ ನೀಡಲಾದ ದೂರಿನ ನಂತರ ಮಹತ್ವಪೂರ್ಣ ತೀರ್ಪು ಬಂದಿದೆ.

ಪಟಿಯಾಲ ಹೌಸ್ ನ್ಯಾಯಾಲಯದಲ್ಲಿ ಮಹಾನಗರ ದಂಡಾಧಿಕಾರಿ ಸಾಹಿಲ ಮೋಂಗ ಇವರು ಡಿಸೆಂಬರ್ 4 ರಿಂದ ಡಿಸೆಂಬರ್ 10, 2024 ವರೆಗಿನ ಸಿಸಿಟಿವಿ ಫೂಟೇಜ್ ಗಳನ್ನು ಸುರಕ್ಷಿತವಾಗಿರಿಸಲು ಪೊಲೀಸರಿಗೆ ಆದೇಶ ನೀಡಿದೆ.

ಇದರಲ್ಲಿ ಹಿಂದೂ ಜನಜಾಗೃತಿ ಸಮಿತಿಯ ವಕ್ತಾರ ಶ್ರೀ. ನರೇಂದ್ರ ಸುರ್ವೆ ಇವರು, ಈ ಆದೇಶ ಹಿಂದೂ ಧರ್ಮ ರಕ್ಷಣೆಗಾಗಿ ಹೋರಾಡುವ ಯೋಧರ ಮತ್ತು ಹಿಂದೂ ಸಂಘಟನೆಗಳ ದೊಡ್ಡ ಗೆಲುವಾಗಿದೆ. ಈ ಆದೇಶದಿಂದ ಸತ್ಯ ಬೆಳಕಿಗೆ ತರಲು ಸಹಾಯವಾಗಲಿದೆ. ನಾವು ಸರಕಾರಕ್ಕೆ ಅಪರಾಧ ಮರೆಮಾಚಲು ಸಾಕ್ಷಿ ನಾಶ ಮಾಡುವವರ ಮೇಲೆ ಕಾನೂನು ರೀತಿಯಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತೇವೆ ಎಂದರು. ದೂರಿನ ನಂತರ ಗ್ಯಾಲರಿ ವ್ಯವಸ್ಥಾಪಕರಿಂದ ವಿವಾದಿತ ಚಿತ್ರಗಳು ಗೌಪ್ಯವಾಗಿ ತೆಗೆಯಲಾದವು; ಆದರೆ ಪೊಲೀಸ್ ವಿಚಾರಣೆಯಲ್ಲಿ ಈ ಚಿತ್ರಗಳು ಪ್ರದರ್ಶನಗೊಂಡಿರುವುದರ ಕುರಿತು ನಿರಾಕರಿಸಿದರು. ಸಮಿತಿಯ ನ್ಯಾಯವಾದಿ ಅಮಿತಾ ಸಚದೇವ್ ಮತ್ತು ಇತರರು ಪಟಿಯಾಲ ನ್ಯಾಯಾಲಯದಲ್ಲಿ ಸುರಕ್ಷಿತ ಇರಿಸಲು ಮತ್ತು ಪ್ರಥಮ ಮಾಹಿತಿ ವರದಿ (ಎಫ್.ಐ.ಆರ್) ದಾಖಲಿಸಲು ಆಗ್ರಹಿಸಿದ್ದಾರೆ. ಸನ್ಮಾನ್ಯ ನ್ಯಾಯಾಲಯವು ಈ ಬೇಡಿಕೆ ಒಪ್ಪಿಕೊಂಡು ದೆಹಲಿ ಪೊಲೀಸರಿಗೆ ಆದೇಶ ನೀಡಿರುವುದು, ಸಂಬಂಧಿತ ಕಾಲಾವಧಿಯಲ್ಲಿನ ಫೂಟೇಜ್ ಸುರಕ್ಷಿತ ಇರಿಸಬೇಕು ಮತ್ತು ವರದಿ ಪ್ರಸ್ತುತಪಡಿಸಬೇಕು. ಮುಂದಿನ ವಿಚಾರಣೆ ಜನವರಿ 4, 2025 ರಂದು ನಡೆಯುವುದು ಎಂದು ಹೇಳಿದೆ.



☛ ಉದಯವಾಹಿನಿ ಚಿತ್ರ

### ದಿಲ್ಲಿ ಆರ್ಟ್ ಗ್ಯಾಲರಿಯಲ್ಲಿನ 'ಹುಸೇನ್

**ದ ಟೈಮಲೇಸ್ ಮಾಡರ್ನಿಸ್ಟ್' ಈ ಪ್ರದರ್ಶನದಲ್ಲಿ ಹಿಂದೂ ದೇವಿ ದೇವತೆಯರ ನಗ್ನ ಮತ್ತು ಆಕ್ಷೇಪಾರ್ಹ ಚಿತ್ರಗಳ ಸಮಾವೇಶವಿತ್ತು. ಇದರಲ್ಲಿ ಒಂದು ಚಿತ್ರದಲ್ಲಿ ಭಗವಂತ ಗಣೇಶನ ತೊಡೆಯ ಮೇಲೆ ನಗ್ನ ಸ್ತ್ರೀ (ಬಹುತೇಕ ರೀದ್ಧಿ/ಸಿದ್ಧಿ) ತೋರಿಸಲಾಗಿದೆ. ಇನ್ನೊಂದು ಚಿತ್ರದಲ್ಲಿ ಭಗವಂತ ಹನುಮಂತ ಓರ್ವ ನಗ್ನ ಸ್ತ್ರೀಗೆ (ಬಹುಶಃ ಸೀತಾ ಮಾತೆ) ಕೈಯಲ್ಲಿ ಹಿಡಿದು ಹಾರುತ್ತಿರುವುದು ಕಾಣುತ್ತಿದೆ. ಇನ್ನೊಂದು ಚಿತ್ರದಲ್ಲಿ ಶಂಕರನ ತೊಡೆಯ ಮೇಲೆ ಅತ್ಯಂತ ಆಕ್ಷೇಪಾರ್ಹ ರೀತಿಯಲ್ಲಿ ತೋರಿಸಲಾಗಿದೆ. ಈ ಚಿತ್ರಗಳಿಂದ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಪ್ರಯತ್ನಪೂರ್ವಕವಾಗಿ ನೋವುಂಟು ಮಾಡುವುದಕ್ಕಾಗಿ ರೂಪಗೊಂಡಿವೆ ಎಂದು ಸ್ಪಷ್ಟವಾಗುತ್ತದೆ. ಸಮಿತಿಯು ಭಾರತೀಯ ದಂಡ ವಿಧಾನ ಕಲಂ 295 (ಅ) ಮತ್ತು ನ್ಯಾಯ ಸಂಹಿತೆ ಕಲಂ 299 ಅಂತರ್ಗತ ಆಯೋಜಕರ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಆಗ್ರಹಿಸಲಾಗಿತ್ತು.**

ಈ ಹೋರಾಟದಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಮಕರಂದ ಆಡಕರ, ನ್ಯಾಯವಾದಿ ಶಾಂತನು, ನ್ಯಾಯವಾದಿ ಕೇಸರಿ, ನ್ಯಾಯವಾದಿ ವಿಕ್ರಂ, ನ್ಯಾಯವಾದಿ ಯಾದವೇಂದ್ರ, ಸನಾತನ ಸ್ವಾಭಿಮಾನ ಸಭೆಯ ಅಧ್ಯಕ್ಷ ಬ್ರಿಜೇಶ್ ಶರ್ಮಾ ಮತ್ತು ಸಮಿತಿಯ ವಕ್ತಾರರು ಶ್ರೀ. ನರೇಂದ್ರ ಸುರ್ವೆ ಇವರು ಸಹಭಾಗಿಯಿದ್ದರು.

# ಸರ್ಕಾರದಿಂದ 3 ಭರ್ಜರಿ ಟೂರ್ ಪ್ಯಾಕೇಜ್ ಘೋಷಣೆ

• ಉದಯವಾಹಿನಿ, ಬೆಂಗಳೂರು

ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಗುಡ್ ನ್ಯೂಸ್‌ವೊಂದನ್ನು ನೀಡಿದೆ. ರಾಜ್ಯ ಸರ್ಕಾರವು ಮೂರು ಟೂರ್ ಪ್ಯಾಕೇಜ್ ಗಳಿಗೆ ಭರ್ಜರಿ ಸಬ್ಸಿಡಿ ಘೋಷಣೆ ಮಾಡಿದೆ.

ಹಾಗಾದರೆ ಎಲ್ಲೆಲ್ಲಿಗೆ ಪ್ರವಾಸ ಎಲ್ಲಿಂದ ಆರಂಭವಾಗಲಿದೆ ಹಾಗೂ ಸಮಯ, ದಿನಾಂಗಳ ಸಂಪೂರ್ಣ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ ಗಮನಿಸಿ. ಕರ್ನಾಟಕದ ಸರ್ಕಾರವು ಯಾತ್ರೆ ಭಾಗ್ಯ ಯೋಜನೆಯಡಿ ಒಟ್ಟು ಮೂರು ಟೂರ್ ಪ್ಯಾಕೇಜ್‌ಗಳಿಗೆ ಸಬ್ಸಿಡಿ ಘೋಷಿಸಿದೆ. ಮೊದಲ ಬಾರಿ ದಕ್ಷಿಣ ಕ್ಷೇತ್ರಗಳ ಯಾತ್ರಾ, ದ್ವಾರಕ ಯಾತ್ರಾ, ಪುರಿ ಜಗನ್ನಾಥ್ ದರ್ಶನಕ್ಕೆ ಸಹಾಯಧನ ಘೋಷಿಸಿದೆ. ಈ ಮೂಲಕ ಧಾರ್ಮಿಕ ದತ್ತಿ ಇಲಾಖೆಯಿಂದ ಪುಣ್ಯ ಕ್ಷೇತ್ರಗಳ ದರ್ಶನ ಭಾಗ್ಯವನ್ನು ಕರುಣಿಸಲಿದೆ. ರಾಮೇಶ್ವರ-ಕನ್ಯಕುಮಾರಿ-ಮಧುರೈ, ತಿರುವನಂತಪುರಂ ಇದು ಒಟ್ಟು ಆರು ದಿನಗಳ ತೀರ್ಥಯಾತ್ರ ಪ್ಯಾಕೇಜ್ ಆಗಿದೆ. ಅದಕ್ಕಾಗಿ 25 ಸಾವಿರ ರೂಪಾಯಿ ವೆಚ್ಚ ಆಗಲಿದೆ. ಇದಕ್ಕೆ ಸರ್ಕಾರ 10,000 ರುಪಾಯಿ ಸಬ್ಸಿಡಿ ನೀಡಲಿದೆ. ವೈದ್ಯಕೀಯ ವೆಚ್ಚ ಸೇರಿದಂತೆ ಇತರೆ ವೆಚ್ಚ ಸೇರಿದಂತೆ 5,000 ಸಾವಿರ ಸಹಾಯಧನ ಸೇರಿ 15,000 ರೂಪಾಯಿ ಹಣವನ್ನು ಸರ್ಕಾರ ನೀಡಲಿದೆ. ಇನ್ನು ಯಾತ್ರಿಗಳು 10,000 ರೂಪಾಯಿ ಮಾತ್ರ ಪಾವತಿಸಬೇಕಾಗುತ್ತದೆ.



☛ ಉದಯವಾಹಿನಿ ಚಿತ್ರ

**ದ್ವಾರಕಾ ಮತ್ತು ಪುರಿ ಜಗಾನ್ನಾಥ್ ಯಾತ್ರೆ:** ದ್ವಾರಕಾ-ನಾಗೇಶ್ವರ ಸೋಮನಾಥ್‌ತ್ರಯಂಬಕೇಶ್ವರ ಕ್ಷೇತ್ರಗಳನ್ನಯ ಒಳಗೊಂಡಂತೆ 8 ದಿನಗಳ ಯಾತ್ರಾ ಪ್ಯಾಕೇಜ್ ಇದಾಗಿದೆ. ಈ ಯಾತ್ರೆಯ ಪ್ಯಾಕೇಜ್‌ನ ಒಟ್ಟು ಮೊತ್ತ 32,500 ರೂಪಾಯಿ ಆಗಿದ್ದು, ಇದರಲ್ಲಿ ಸರ್ಕಾರ 17,500 ರೂಪಾಯಿ ಹಣ ನೀಡಲಿದೆ. ಉಳಿದ 15,000 ರೂಪಾಯಿ ಹಣವನ್ನು ಮಾತ್ರ ಯಾತ್ರಾರ್ಥಿಗಳು ನೀಡಬೇಕಾಗುತ್ತದೆ. ಪ್ರಯಾಣಿಕರು ಪ್ರಯಾಣ ಮಾಡುವಾಗ ಟ್ರೈನ್ ಪ್ಯಾಂಟ್ರಿ ಕಾರಿನಲ್ಲಿ ಉತ್ತಮ ಆಹಾರ ತಯಾರಿಸಿ ನೀಡಲಾಗುತ್ತದೆ. ಈ ಪ್ಯಾಕೇಜ್‌ನಲ್ಲಿ 3 ಟೈರ್ ಎಸಿ ರೈಲಿನಲ್ಲಿ ಪ್ರಯಾಣ, ಊಟ, ವಸತಿ, ಸ್ಥಳೀಯ ಸಾರಿಗೆ ಮತ್ತು ದರ್ಶನ ವ್ಯವಸ್ಥೆ ಇರುತ್ತದೆ. ಯಾತ್ರಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ರೈಲಿನಲ್ಲಿ ವೈದ್ಯಕೀಯ ಸೇವೆಯ ವ್ಯವಸ್ಥೆ ಮಾಡಲಾಗುತ್ತದೆ. ದಕ್ಷಿಣ ಕ್ಷೇತ್ರಗಳ ಯಾತ್ರಾ ರೈಲು ಹತ್ತುವ , ಇಳಿಯುವ ಸ್ಥಳಗಳನ್ನು ಇಲ್ಲಿ ನೀಡಲಾಗಿದೆ. ಈ ರೈಲು ಬೆಳಗಾವಿ, ಹುಬ್ಬಳ್ಳಿ, ಹಾವೇರಿ, ದಾವಣಗೆರೆ, ಬೀರೂರು, ತುಮಕೂರು, ಬೆಂಗಳೂರು ಸರ್.ಎಂ.ವಿಶ್ವೇಶ್ವರಯ್ಯ ರೈಲು ನಿಲ್ದಾಣ ಮೂಲಕ ಮೂಲಕ ಸಾಗಲಿದೆ.

# 2025ಕ್ಯಾಲೆಂಡರ್ ಬದಲಾಯಿಸುವ ಸಮಯ, ದಿಕ್ಕು, ಪ್ರಯೋಜನ

• ಉದಯವಾಹಿನಿ, ಬೆಂಗಳೂರು

2024 ವರ್ಷ ಈಗ ಅಂತಿಮ ಹಂತದಲ್ಲಿದೆ. ಶೀಘ್ರದಲ್ಲೇ ಹೊಸ ವರ್ಷ ಬರಲಿದೆ. ಹೊಸ ವರ್ಷದ ಆರಂಭದೊಂದಿಗೆ ಹಳೆಯ ಪಂಚಾಂಗವನ್ನು ತೆಗೆದು ಮನೆಯಲ್ಲಿ ಹೊಸ ಪಂಚಾಂಗವನ್ನು ಹಾಕುವುದು ಸಾಮಾನ್ಯ ಸಂಪ್ರದಾಯ. ಆದರೆ ಜ್ಯೋತಿಷ್ಯ ಮತ್ತು ವಾಸ್ತು ಶಾಸ್ತ್ರದ ಪ್ರಕಾರ, ಅದನ್ನು ಸರಿಯಾದ ಸಮಯ ಮತ್ತು ದಿಕ್ಕಿನಲ್ಲಿ ಇಡುವುದು ಮಂಗಳಕರ ಮತ್ತು ಧನಾತ್ಮಕ ಶಕ್ತಿಯನ್ನು ತರಲು ಸಹಕಾರಿಯಾಗುತ್ತದೆ.

ಹಾಗಾದರೆ ಮನೆಯ ಕ್ಯಾಲೆಂಡರ್ ಅನ್ನು ಬದಲಾಯಿಸಲು ಸರಿಯಾದ ಸಮಯ ಮತ್ತು ಅದನ್ನು ಇರಿಸಿಕೊಳ್ಳಲು ಸರಿಯಾದ ದಿಕ್ಕು ಯಾವುದು? ಕ್ಯಾಲೆಂಡರ್ ಹಿಂದೂ ಧರ್ಮದಲ್ಲಿ ಹೊಸ ವರ್ಷದ ಆಗಮನದ ಸಮಯದಲ್ಲಿ ಕ್ಯಾಲೆಂಡರ್ ಅನ್ನು ಬದಲಾಯಿಸುವುದು ಕೇವಲ ಸಂಪ್ರದಾಯವಲ್ಲ ಅದು ವೈಯಕ್ತಿಕ, ಸಾಂಸ್ಕೃತಿಕ ಮತ್ತು ಜ್ಯೋತಿಷ್ಯ ಮಹತ್ವವನ್ನು ಹೊಂದಿದೆ. ಪಂಚಾಂಗವನ್ನು ಮನೆಯ ಒಂದು ಭಾಗವೆಂದು ಪರಿಗಣಿಸಲಾಗುತ್ತದೆ. ಹೊಸ ಕ್ಯಾಲೆಂಡರ್ ಜೀವನದಲ್ಲಿ ಹೊಸ ಆರಂಭ ಮತ್ತು ಹೊಸ ಸಾಧ್ಯತೆಗಳನ್ನು ಸೂಚಿಸುತ್ತದೆ. ಕ್ಯಾಲೆಂಡರ್ ಅನ್ನು ಬದಲಾಯಿಸುವುದು ಹಳೆಯ ಬಾಕಿಯಿರುವ ಕಾರ್ಯಗಳನ್ನು ಪೂರ್ಣಗೊಳಿಸಲು ಒಂದು ಅವಕಾಶವೆಂದು ಪರಿಗಣಿಸಲಾಗುತ್ತದೆ.

ಹೊಸ ಕ್ಯಾಲೆಂಡರ್ ಅನ್ನು ಸರಿಯಾದ ದಿಕ್ಕಿನಲ್ಲಿ ಇರಿಸುವುದರಿಂದ ಕುಟುಂಬ ಮತ್ತು ಮನೆಯಲ್ಲಿ ಧನಾತ್ಮಕ ಶಕ್ತಿಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಹಿಂದೂ ಧರ್ಮದಲ್ಲಿ ಜನವರಿ 1 ಹೊಸ ವರ್ಷದ ಮೊದಲ ದಿನದಂದು ಕ್ಯಾಲೆಂಡರ್ ಅನ್ನು ಬದಲಾಯಿಸುವುದು ಒಳ್ಳೆಯದು ಮತ್ತು ಮಂಗಳಕರವೆಂದು ಪರಿಗಣಿಸಲಾಗುತ್ತದೆ. ಹೌದು ಜನವರಿ 1 ಜನಪ್ರಿಯ ಸಂಪ್ರದಾಯ ಮತ್ತು ಪದ್ಧತಿಯ ಪ್ರಕಾರ, ಇಂಗ್ಲಿಷ್ ಹೊಸ ವರ್ಷದ ಆರಂಭದ ಮೊದಲ ದಿನದಂದು ಕ್ಯಾಲೆಂಡರ್ ಅನ್ನು ಬದಲಾಯಿಸುವುದು ಮಂಗಳಕರವೆಂದು ಪರಿಗಣಿಸಲಾಗುತ್ತದೆ.

ವಾಸ್ತು ಶಾಸ್ತ್ರದ ಪ್ರಕಾರ ಸೂರ್ಯನು ತನ್ನ ಮೊದಲ ಕಿರಣಗಳನ್ನು ಹರಡಿದಾಗ ಬೆಳಿಗ್ಗೆ ಕ್ಯಾಲೆಂಡರ್ ಅನ್ನು ಬದಲಾಯಿಸುವುದು ಉತ್ತಮ. ಮಧ್ಯಾಹ್ನದ ನಂತರ ಕ್ಯಾಲೆಂಡರ್ ಅನ್ನು ಬದಲಾಯಿಸಬಾರದು. ಜನವರಿ 1 ಅಶುಭ ದಿನದಂದು ಬಂದರೆ, ಬುಧವಾರ, ಶುಕ್ರವಾರ ಅಥವಾ ಭಾನುವಾರದಂತಹ ಮಂಗಳಕರ ದಿನದಂದು ಹೊಸ ಕ್ಯಾಲೆಂಡರ್ ಅನ್ನು ಹಾಕುವುದು ಉತ್ತಮ ಎಂದು ಪರಿಗಣಿಸಲಾಗುತ್ತದೆ. ಈ ಬಾರಿ 2025 ರ ಮೊದಲ ದಿನ ಬುಧವಾರ ಬಂದಿದೆ. ಇದು ಕ್ಯಾಲೆಂಡರ್ ಅನ್ನು ಬದಲಾಯಿಸಲು ಉತ್ತಮ ದಿನವಾಗಿದೆ.

**ಉತ್ತರ ಅಥವಾ ಪೂರ್ವ ದಿಕ್ಕು:** ಮನೆ ಅಥವಾ ಕಛೇರಿಯ ಉತ್ತರ ಅಥವಾ ಪೂರ್ವ ದಿಕ್ಕಿನಲ್ಲಿ ಕ್ಯಾಲೆಂಡರ್ ಅನ್ನು ಹಾಕುವುದು ಮಂಗಳಕರವಾಗಿದೆ. ಈ ನಿರ್ದೇಶನಗಳು ಸಕಾರಾತ್ಮಕತೆ ಮತ್ತು ಸಮೃದ್ಧಿಯ ಕಡೆಗೆ ಸೂಚಿಸುತ್ತವೆ. ಹಳೆಯ ಕ್ಯಾಲೆಂಡರ್‌ಗಳನ್ನು ಮನೆಯ ಗೋಡೆಗಳ ಮೇಲೆ ಹೆಚ್ಚು ಕಾಲ ಇಡಬಾರದು.

ಹಳ ಕ್ಯಾಲೆಂಡರ್‌ಗಳನ್ನು ಮನೆಯಲ್ಲಿ ಇಟ್ಟುಕೊಂಡರೆ ಭವಿಷ್ಯದಲ್ಲಿ ಅಡೆತಡೆಗಳು ಎದುರಾಗಬಹುದು ಎಂದು ಹೇಳಲಾಗುತ್ತದೆ. ಕ್ಯಾಲೆಂಡರ್ ಹರಿದಿದ್ದರೆ ಅಥವಾ ಹಾನಿಗೊಳಗಾದರೆ, ತಕ್ಷಣವೇ ಕ್ಯಾಲೆಂಡರ್ ಅನ್ನು ತೆಗೆಯಬೇಕು. ಹಳೆಯ ಕ್ಯಾಲೆಂಡರ್ ಅನ್ನು ತೆಗೆದುಹಾಕುವುದು ಹಳೆಯ ಅಡೆತಡೆಗಳು ಮತ್ತು ಸಮಸ್ಯೆಗಳನ್ನು ಬಿಟ್ಟು ಮುಂದೆ ಸಾಗುವುದು ಎಂದರ್ಥ.

**ಜನಪ್ರಿಯ ನಂಬಿಕೆಯ ಪ್ರಕಾರ ಹರಿದ ಕ್ಯಾಲೆಂಡರ್‌ಗಳನ್ನು ಮನೆಯಲ್ಲಿ ಇಡುವುದರಿಂದ ನಕಾರಾತ್ಮಕ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಅಶುಭವನ್ನು ಆಕರ್ಷಿಸುತ್ತದೆ. ಮನೆಯಲ್ಲಿ ಇರಿಸಲಾಗಿರುವ ಕ್ಯಾಲೆಂಡರ್ ಧನಾತ್ಮಕ ಚಿತ್ರಗಳು ಮತ್ತು ಸಂದೇಶಗಳನ್ನು ಹೊಂದಿರಬೇಕು ಎಂಬುದನ್ನು ನೆನಪಿನಲ್ಲಿಡಿ. ಮನೆಯಲ್ಲಿ ಹೂವುಗಳು, ಹಸಿರು, ಪರ್ವತಗಳು, ದೇವರುಗಳು ಅಥವಾ ಮಂಗಳಕರ ಚಿಹ್ನೆಗಳು ಅಥವಾ ಧನಾತ್ಮಕ ಸಂದೇಶಗಳನ್ನು ಹೊಂದಿರುವ ಕ್ಯಾಲೆಂಡರ್ಗಳನ್ನು ಇರಿಸುವುದು ಮಂಗಳಕರವಾಗಿದೆ.**



☛ ಉದಯವಾಹಿನಿ ಚಿತ್ರ

**ಕ್ಯಾಲೆಂಡರ್ ಅನ್ನು ಸ್ವಚ್ಛ ಮತ್ತು ವ್ಯವಸ್ಥಿತವಾದ ಗೋಡೆಯ ಮೇಲೆ ಹಾಕಿ. ಕೊಳಕು ಅಥವಾ ಮುರಿದ ಗೋಡೆಗಳ ಮೇಲೆ ಕ್ಯಾಲೆಂಡರ್ಗಳನ್ನು ಹಾಕುವುದು ಅಶುಭವೆಂದು ಪರಿಗಣಿಸಲಾಗುತ್ತದೆ.**

**ಗಡಿಯಾರ ಮತ್ತು ಕ್ಯಾಲೆಂಡರ್:** **ಕ್ಯಾಲೆಂಡರ್ ಮತ್ತು ಗೋಡೆ ಗಡಿಯಾರವನ್ನು ಒಟ್ಟಿಗೆ ಹಾಕಬಾರದು. ಯಾಕೆಂದರೆ ಇದು ಸಮಯ ಮತ್ತು ಹಣದ ಅಡಚಣೆಯನ್ನು ಸೂಚಿಸುತ್ತದೆ.**

# ಕಾರಂಜಾ ಸಂತ್ರಸ್ತರ ಸಮಸ್ಯೆ ಅಧ್ಯಯನಕ್ಕೆ ತಾಂತ್ರಿಕ ಸಮಿತಿ ರಚನೆ: ಸಿದ್ದರಾಮಯ್ಯ

## • ಮುಳುಗಡೆ ಸಂತ್ರಸ್ತರಿಗೆ ಮಾನವೀಯತೆಯ ನೆಲೆಗಟ್ಟಿನಲ್ಲಿ ಒಂದು ಬಾರಿಯ ವಿಶೇಷ ಪ್ಯಾಕೇಜ್ ನೀಡಬೇಕು

**• ಉದಯವಾಹಿನಿ ಬೀದರ್**

ಜಿಲ್ಲೆಯ ಕಾರಂಜಾ ಯೋಜನೆಗಾಗಿ ಭೂಮಿ ಕಳೆದುಕೊಂಡು ನ್ಯಾಯಯುತ ಪರಿಹಾರಕ್ಕಾಗಿ ಹೋರಾಟ ನಡೆಸುತ್ತಿರುವ ಸಂತ್ರಸ್ತರ ಸಮಸ್ಯೆ ಅಧ್ಯಯನಕ್ಕೆ ತಾಂತ್ರಿಕ ಸಮಿತಿ ರಚಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಬೆಳಗಾವಿ ಸುವರ್ಣಸೌಧದ ಸಮಿತಿ ಕೊಠಡಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ ಖಂಡ್ರೆ, ಪೌರಾಡಳಿತ ಸಚಿವ ರಹೀಂಖಾನ್, ಜಿಲ್ಲೆಯ ಶಾಸಕರ ಉಪಸ್ಥಿತಿಯಲ್ಲಿ ಸಂತ್ರಸ್ತರ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಇದು ಹಲವು ವರ್ಷಗಳ ಹಿಂದಿನ ಸಮಸ್ಯೆಯಾಗಿದ್ದು, ಈ ಬಗ್ಗೆ ಅಧ್ಯಯನ ನಡೆಸಲು ಸಮಿತಿ ರಚಿಸುವುದಾಗಿ' ತಿಳಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ, 'ಬೀದರ್ ಜಿಲ್ಲೆಯ 29,227 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು 1970ರ ದಶಕದಲ್ಲಿ ಕಾರಂಜಾ ಜಲಾಶಯ ನಿರ್ಮಾಣಕ್ಕಾಗಿ ಭೂಸ್ವಾಧೀನ ಮಾಡಲಾಗಿದ್ದು, ಬೆಲೆ ಕಟ್ಟಲೂ ಸಾಧ್ಯವಾಗದ ಭೂಮಿ ಕಳೆದುಕೊಂಡಿರುವ ಸಂತ್ರಸ್ತರಿಗೆ ಇಂದಿಗೂ ಸೂಕ್ತ ಪರಿಹಾರ ಲಭಿಸಿಲ್ಲ. ಭೂಮಿ ಕಳೆದುಕೊಂಡ ಕೆಲವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರತಿ ಎಕರೆಗೆ 88 ಸಾವಿರ ಪರಿಹಾರ ನೀಡುವಂತೆ ಒಂದು ಪ್ರಕರಣದಲ್ಲಿ ನ್ಯಾಯಾಲಯ ಆದೇಶಿಸಿದೆ. ಹೀಗಾಗಿ ಒಂದು ಬಾರಿಯ ವಿಶೇಷ ಪ್ಯಾಕೇಜ್ (ಕೃಪಾಧನ) ಪ್ರಕಟಿಸಬೇಕು' ಎಂದು ಮನವಿ ಮಾಡಿದರು. ಈ ಹಿಂದೆ ಧರ್ಮಸಿಂಗ್ ಮುಖ್ಯಮಂತ್ರಿಗಳಾಗಿದ್ದಾಗ 2005ರಲ್ಲಿ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಗಿತ್ತು. ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಸಮಿತಿ 2012ರಲ್ಲಿ ತನ್ನ ವರದಿ ನೀಡಿ ಸಂತ್ರಸ್ತರ ಪುನರ್ವಸತಿಗಾಗಿ ವಿಶೇಷ ಪ್ಯಾಕೇಜ್ ನೀಡುವಂತೆ ಶಿಫಾರಸ್ಸು ಮಾಡಿತ್ತು.

ಆದರೆ ಸಚಿವ ಸಂಪುಟ ಈ ಶಿಫಾರಸ್ಸನ್ನು ತಿರಸ್ಕರಿಸಿದೆ' ಎಂದೂ ಅವರು ವಿವರಿಸಿದರು. ಇತ್ತೀಚೆಗೆ ಸುಪ್ರೀಂಕೋರ್ಟ್ ಸಿವಿಲ್ ಮೇಲ್ಮನವಿ ಸಂಖ್ಯೆ 1943/2022ರಲ್ಲಿ ಒಂದೇ ಸ್ವರೂಪದ ಪ್ರಕರಣಗಳಲ್ಲಿ ಒಂದು ಪ್ರಕರಣಕ್ಕೆ ನೀಡಲಾದ ತೀರ್ಪು ಇತರರಿಗೂ ಅನ್ವಯಿಸುತ್ತದೆ' ಎಂದು ಹೇಳಿದೆ. ರಾಜ್ಯ ಹೈಕೋರ್ಟ್ ಚಂದ್ರಕಾಂತ್ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿ, ಕರ್ನಾಟಕ ಸರ್ಕಾರ ಪ್ರಕರಣದಲ್ಲಿ ಒಂದೇ ಅಧಿಸೂಚನೆಯಡಿ ಭೂಸ್ವಾಧೀನವಾದ ಎಲ್ಲರಿಗೂ ಸಮಾನವಾದ ಪರಿಹಾರ ನೀಡಬೇಕು ಎಂದು ತಿಳಿಸಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಸ್ವಾಭಾವಿಕ ನ್ಯಾಯದ ತತ್ವದಡಿ ಮತ್ತು ನ್ಯಾಯ ಸಮಾನತೆ ಕಾಪಾಡಲು ಹೆಚ್ಚಿನ ಪರಿಹಾರ ನೀಡುವುದು ಉಚಿತವಾಗಿದೆ' ಎಂದು ಸಭೆಗೆ ಈಶ್ವರ ಖಂಡ್ರೆ ತಿಳಿಸಿದರು. ಲಕ್ಷ್ಮಣ ದಸ್ತಿ, ಸಂಸ್ಥಾಪಕ ಅಧ್ಯಕ್ಷ, ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಬೀದರ್ ಜಿಲ್ಲೆಯ ಕಾರಂಜಾ ಸಂತ್ರಸ್ತರ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಸೇರಿದಂತೆ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಪಕ್ಷಭೇದ ಮರೆತು ಕಾರಂಜಾ ಸಂತ್ರಸ್ತರ ಪರವಾಗಿ ಮಾತನಾಡಿದರು. ಸಿಎಂ ಸ್ಪಂದಿಸಿ, ಬೇಡಿಕೆಗಳ ಅಧ್ಯಯನಕ್ಕೆ ತಾಂತ್ರಿಕ ಸಮಿತಿ ರಚಿಸಿ ಅದನ್ನು ಆಧರಿಸಿ ಪರಿಹಾರ ಒದಗಿಸುವ ಭರವಸೆ ನೀಡಿರುವುದು ಖುಷಿ ತಂದಿದೆ. ಸರ್ಕಾರದ ಕ್ರಮವನ್ನು ಸ್ವಾಗತಿಸುವೆ.

### ಬದುಕಿಗೆ ಆಸರೆ ಆಗಬೇಕು

**ಮುಳುಗಡೆ ಸಂತ್ರಸ್ತರಿಗೆ ಮಾನವೀಯತೆಯ ನೆಲೆಗಟ್ಟಿನಲ್ಲಿ ಒಂದು ಬಾರಿಯ ವಿಶೇಷ ಪ್ಯಾಕೇಜ್ (ಕೃಪಾಧನ -ಎಕ್ಸ್‌ಗ್ರೇಷಿಯಾ) ಮೊತ್ತ ನೀಡಿ ಅವರ ಬದುಕಿಗೆ ತಾವು ಆಸರೆ ಆಗಬೇಕು' ಎಂದು ಕೋರಿದರು. ಶಾಸಕರಾದ ಶೈಲೇಂದ್ರ ಬೆಲ್ದಾಳೆ, ಪ್ರಭು ಚವಾಣ್, ಮಾಜಿ ಸಚಿವ ರಾಜಶೇಖರ ಪಾಟೀಲ್ ಮತ್ತಿತರರೂ ಕಾರಂಜಾ ಸಂತ್ರಸ್ತರ ಸಮಸ್ಯೆಯನ್ನು ಮಾನವೀಯತೆಯಿಂದ ಪರಿಗಣಿಸಬೇಕು, ಕಾನೂನಾತ್ಮಕವಾಗಿ ಪರಿಗಣಿಸಬಾರದು ಎಂದು ಮನವಿ ಮಾಡಿದರು. ಎಂದೂ ಅವರು ವಿವರಿಸಿದರು.**


ಉದಯವಾಹಿನಿ ಚಿತ್ರ

**ಇತ್ತೀಚೆಗೆ ಸುಪ್ರೀಂಕೋರ್ಟ್ ಸಿವಿಲ್ ಮೇಲ್ಮನವಿ ಸಂಖ್ಯೆ 1943/2022ರಲ್ಲಿ ಒಂದೇ ಸ್ವರೂಪದ ಪ್ರಕರಣಗಳಲ್ಲಿ ಒಂದು ಪ್ರಕರಣಕ್ಕೆ ನೀಡಲಾದ ತೀರ್ಪು ಇತರರಿಗೂ ಅನ್ವಯಿಸುತ್ತದೆ' ಎಂದು ಹೇಳಿದೆ. ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿ, ತಾಂತ್ರಿಕ ಸಮಿತಿ ಅಧ್ಯಯನ ವರದಿ ಬಂದ ಬಳಿಕ ಕ್ರಮ ವಹಿಸುವುದಾಗಿ ತಿಳಿಸಿದರು**

**-ಮುಖ್ಯಮಂತ್ರಿ ಸಿದ್ದರಾಮಯ್ಯ**

**ಹಲವು ವರ್ಷಗಳ ಹಿಂದಿನ ಸಮಸ್ಯೆ**

# ಡಿ.21ಕ್ಕೆ ವಿಶ್ವಧ್ಯಾನ ದಿನಾಚರಣೆ ಕಾರ್ಯಕ್ರಮ

**• ಉದಯವಾಹಿನಿ ಚಿತ್ರದುರ್ಗ**

ಚಿತ್ರದುರ್ಗ ನಗರದ ಸಮಸ್ತ ಧ್ಯಾನಾಸಕ್ತರಿಗೆ ಈ ಮೂಲಕ ತಿಳಿಯಪಡಿಸುದೇನೆದರೆ ದಿನಾಂಕ:21-12-2024 ರಂದು ವಿಶ್ವಸಂಸ್ಥೆಯು ''ವಿಶ್ವಧ್ಯಾನ ದಿನ'' ಎಂದು ಘೋಶಿಸಿರುವುದರಿಂದ ರಾಷ್ಟ್ರಕ್ಕೆ ಒಂದು ಮಹತ್ವದ ಸಂದರ್ಭವಾಗಿದೆ ಯುಎನ್ ಜನರಲ್ ಅಸೆಂಬ್ಲಿ ಯೋಗ ಮತ್ತು ಧ್ಯಾನದ ನಡುವಿನ ಸಂಬಂಧವನ್ನು ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಪೂರಕ ವಿಧಾನಗಳಾಗಿ ಅಂಗೀಕರಿಸಿದೆ, ದೈಹಿಕ ಮತ್ತು ಮಾನಸಿಕ ಆರೋಗ್ಯದ ಅತ್ಯುನ್ನತ ಗುಣಮಟ್ಟದ ಆನಂದವನ್ನು ಅನಭವಿಸುವ ಪ್ರತಿಯೊಬ್ಬರ ಹಕ್ಕನ್ನು ನೆನಪಿಸುತ್ತದೆ, ಧ್ಯಾನವು ಭಾರತದ ಅದ್ಭುತ ಆಧ್ಯಾತ್ಮಿಕತೆಯ ಅವಿಭಾಜ್ಯಂಗವಾಗಿದೆ.




ಆದ್ದರಿಂದ ಈ ದಿನವನ್ನು ಸ್ಮರಿಸುತ್ತಾ ಭಾರತೀಯ ಯೋಗ ಶಿಕ್ಷಣ ಸಂಸ್ಥೆ, ಚಿತ್ರದುರ್ಗ ಇವರು ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆ, ಚಿತ್ರದುರ್ಗ, ಹಾರ್ಟ್ ಫುಲ್ ನೆಸ್ ಧ್ಯಾನ ಕೇಂದ್ರ ಚಿತ್ರದುರ್ಗ ಇವರುಗಳ ಸಹಭಾಗಿತ್ವದಲ್ಲಿ ಅಂತರಾಷ್ಟ್ರೀಯ ಧ್ಯಾನ ದಿನಾಚರಣೆ ಅಂಗವಾಗಿ ದಿನಾಂಕ 21/12/2024ರ ಶನಿವಾರ ಮುಂಜಾನೆ ಸಮಯ 5-30ರಿಂದ 7ಗಂಟೆಯವರೆಗೆ ನಗರದ ತುರುವನೂರು ರಸ್ತೆಯ ರೆಡ್ಡಿ ಕಲ್ಯಾಣ ಮಂಟಪದ ಎದುರಿನ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿ ದೇವಾಲಯ ಆವರಣದಲ್ಲಿ ಸಾಮೂಹಿಕ ಧ್ಯಾನ ಕಾರ್ಯಕ್ರಮ ಆಯೋಜಿಸಲಾಗಿದ್ದು ಜಿಲ್ಲಾ ಆಯುಷ್ ಇಲಾಖೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾ|| ಶಿವಕುಮಾರ್, ಡಾ|| ವಿಜಯಲಕ್ಷ್ಮಿ ಪಿ., ಶ್ರೀ ಪತಂಜಲಿ ಯೋಗ ಕೇಂದ್ರದ ಯೋಗ ಶಿಕ್ಷಕ ಮಹಲಿಂಗಪ್ಪ ಉಪಸ್ಥಿತರಿರುವರು ಚಿತ್ರದುರ್ಗ ನಗರದ ಧ್ಯಾನಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಲಾಭವನ್ನು ಪಡೆಯಬೇಕೆಂದು ಸಂಘಟಕರು ತಿಳಿಸಿದ್ದಾರೆ.

# ಶಕ್ತಿಸೌಧದ ಬಳಿ ಕೊನೇ ದಿನವೂ ಪ್ರತಿಭಟನೆಗಳ ಸದ್ದು

**• ಉದಯವಾಹಿನಿ, ಬೆಳಗಾವಿ**

ಇಲ್ಲಿನ ಸುವರ್ಣ ವಿಧಾನಸೌಧ ಬಳಿ ಇರುವ ವೇದಿಕೆಗಳು, ವಿಧಾನಮಂಡಲ ಚಳಿಗಾಲದ ಅಧಿವೇಶನ ಕೊನೇ ದಿನವಾದ ಗುರುವಾರವೂ ಸರಣಿ ಪ್ರತಿಭಟನೆಗಳಿಗೆ ಸಾಕ್ಷಿಯಾದವು.

ಸರ್ಕಾರಿ ನೌಕರರ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಯಲ್ಲೇ ಶಿಕ್ಷಣ ಪಡೆಯುವಂಥ ನಿಯಮವನ್ನು ಸರ್ಕಾರ ರೂಪಿಸಬೇಕು ಎಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆಯವರು ಪ್ರತಿಭಟನೆ ಮಾಡಿದರು.


ಉದಯವಾಹಿನಿ ಚಿತ್ರ

**ಯುವಜನಾಂಗಕ್ಕೆ ಹೆಚ್ಚಿನ ಉದ್ಯೋಗ ಸೃಷ್ಟಿಸಬೇಕು**

ರಾಜ್ಯದಲ್ಲಿ ಯುವಜನಾಂಗಕ್ಕೆ ಹೆಚ್ಚಿನ ಉದ್ಯೋಗ ಸೃಷ್ಟಿಸಬೇಕು. ರೈತರಿಗೆ ಮಾರಕವಾದ ಆದೇಶಗಳನ್ನು ಹಿಂಪಡೆಯಬೇಕು. ರಾಜ್ಯದ ರೈತರಿಗೆ ನೀರಾವರಿ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮುಖಂಡರಾದ ಬಿ.ಟಿ.ಚಂದ್ರಶೇಖರ, ಬಸವರಾಜ ಪಾಟೀಲ, ಸಂಗೀತಾ ಕಾಂಬಳೆ, ಲಕ್ಷ್ಮಿ ಗೋಟೂರ, ಮಹಾದೇವಿ ಕೋಳಿ, ದೇವೇಗೌಡ ಪಾಟೀಲ, ಗೋವಿಂದರಾಜ ಇದ್ದರು.

'ಅಕ್ಷರ ದಾಸೋಹ ನೌಕರರ ಮಾಸಿಕ ಗೌರವಧನ 26 ಸಾವಿರಕ್ಕೆ ಹೆಚ್ಚಿಸಿ' ಅಕ್ಷರ ದಾಸೋಹ ನೌಕರರ ಮಾಸಿಕ ಗೌರವಧನವನ್ನು 26 ಸಾವಿರಕ್ಕೆ ಹೆಚ್ಚಿಸಬೇಕು. ಅಲ್ಲಿಯವರೆಗೆ ಕೇರಳ, ಪುದುಚೇರಿ, ತಮಿಳುನಾಡು ಮತ್ತು ಹರಿಯಾಣ ಮಾದರಿಯಲ್ಲಿ 7 ಸಾವಿರದಿಂದ 12 ಸಾವಿರ ಗೌರವಧನ ಕೊಡಬೇಕು ಎಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದವರು ಪ್ರತಿಭಟಿಸಿದರು.

ಸೇವಾ ನಿವೃತ್ತಿ ಹೊಂದಿದವರಿಗೆ ಇಡಿಗಂಟು ನೀಡಬೇಕು. ಪ್ರತಿ ಜಿಲ್ಲೆಯಲ್ಲಿ ಕಡ್ಡಾಯವಾಗಿ ಕ್ಲಸ್ಟರ್ ಮಟ್ಟದ ಸಭೆಗಳನ್ನು ಮಾಡಬೇಕು. ಶಿಕ್ಷಣ ಇಲಾಖೆ ಅಡಿಯೇ ಅಕ್ಷರ ದಾಸೋಹ ಯೋಜನೆ ಮುನ್ನಡೆಸಬೇಕು.

**ಕರ್ತವ್ಯದ ಅವಧಿಯಲ್ಲಿ ಮೃತಪಟ್ಟವರ ಅವಲಂಬಿತರಿಗೆ 25 ಲಕ್ಷ ಪರಿಹಾರ ಕೊಡಬೇಕು. ಯಾವುದೇ ಖಾಸಗಿ ಸಂಸ್ಥೆಗೆ ಬಿಸಿಯೂಟ ಯೋಜನೆ ನಿರ್ವಹಿಸುವ ಜವಾಬ್ದಾರಿ ಕೊಡಬಾರದು. ಬೇಸಿಗೆ ಮತ್ತು ದಸರಾ ರಜೆಗಳನ್ನು ಕಡ್ಡಾಯವಾಗಿ ನೀಡಬೇಕು ಎಂದು ಆಗ್ರಹಿಸಿದರು.**


# ಆಲೂರ ಪಂಚಾಯತ್ ಅಧ್ಯಕ್ಷೆಯಾಗಿ ಶೋಭಾ ಶೆಳ್ಳಗಿ

**• ಉದಯವಾಹಿನಿ ಮುದ್ದೇಬಿಹಾಳ**

ಮುದ್ದೇಬಿಹಾಳ ತಾಲ್ಲೂಕಿನ ಆಲೂರ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷೆಯಾಗಿ ಕಾಂಗ್ರೆಸ್ ಮಹಿಳಾ ಘಟಕದ ತಾಲ್ಲೂಕ ಅಧ್ಯಕ್ಷೆ ಶೋಭಾ ಶೆಳ್ಳಗಿ ಆಯ್ಕೆಯಾಗಿದ್ದಾರೆ ಗುರುವಾರ ನಡೆದ ಆಲೂರ ಗ್ರಾಪಂ ಅಧ್ಯಕ್ಷ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ 1 ಮತದ ಅಂತರದಿಂದ ವಿಜಯಶಾಲಿಯಾಗಿದ್ದಾರೆ ಒಟ್ಟು 21 ಸದಸ್ಯರು ಮತಚಲಾಯಿಸಿದ್ದರು ಶೋಭಾ ಶೆಳ್ಳಗಿ ಅವರು 11 ಮತಗಳನ್ನು ಪಡೆದರೆ 10 ಮತಗಳನ್ನು ಪ್ರತಿಸ್ಪರ್ಧಿ ವಿಜಯಲಕ್ಷ್ಮಿ ಪಂಪಣ್ಣವರ ಪಡೆದರು ಜಿದ್ದಾಜೀದಿನ ಕಣದಲ್ಲಿ ಶೋಭಾ ಶೆಳ್ಳಗಿ ಅವರು ಒಂದು ಮತದ ಅಂತರದಿಂದ ಗೆಲುವಿನ ನಗೆ ಬಿರಿದರು

ಮಾಧ್ಯಮಗಳ ಜೊತೆ ಮಾತನಾಡಿದ ನೂತನ ಗ್ರಾಪಂ ಅಧ್ಯಕ್ಷೆ ಶೋಭಾ ಶೆಳ್ಳಗಿ ಶಾಸಕ ಸಿ.ಎಸ್ ನಾಡಗೌಡರ ಮಾರ್ಗದರ್ಶನದಲ್ಲಿ ಆಲೂರ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಮಾಡುತ್ತೇನೆಂದು ಹೇಳಿದ. ಅವರು ತಮ್ಮನ್ನು ಗೆಲ್ಲಿಸಲು ಶ್ರಮಿಸಿದವರನ್ನು ಸ್ಮರಿಸಿ ಭಾವುಕರಾದರು. ಕಾಂಗ್ರೆಸ್ ಪಕ್ಷ ಬೆಂಬಲಿತ ಅಭ್ಯರ್ಥಿ ಗೆಲುವಿಗೆ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಈ ವೇಳೆ ಮುದ್ದೇಬಿಹಾಳ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಉಪಾಧ್ಯಕ್ಷೆ ಪ್ರೀತಿ ದೇಗಿನಾಳ ನಿಕಟಪೂರ್ವ ಅಧ್ಯಕ್ಷೆ ಹಾಲಿ ಸದಸ್ಯೆ ಪ್ರತಿಭಾ ಅಂಗಡಗೇರಿ ಭಾರತಿ ಪಾಟೀಲ್, ಕಾಂಗ್ರೆಸ್ ಪಕ್ಷದ ಮುಖಂಡರಾದ ಅಮರೇಶ ಗೂಳಿ, ಎಂ ಎಸ್ ದೇಶಮುಖ ಶಾಂತಗೌಡ ನಾಡಗೌಡ, ಎಸ್ ಟಿ ಪಾಟೀಲ್, ಎಸ್ ಜಿ ಹಿರೇಗೌಡರ, ರಮೇಶ ಪಾಟೀಲ್, ವಿರೇಶ ಗೂಳಿ, ಆರ್ ಎಸ್ ಗೂಳಿ, ಎಂ ಎ ಗೂಳಿ, ಹುಸೇನ್ ಮುಲ್ಲಾ ಶ್ರೀನಿವಾಸ ಗೌಂಡಿ, ಪ್ರದೀಪ ನಾಡಗೌಡ, ಸಂಗಮೇಶ ಹಿರೇಮಠ, ಮುನ್ನಮ್ಮ ದೂಡಮನಿ, ಸರಸ್ವತಿ ಪೀರಾಪೂರ, ಅಕ್ಷತಾ ಚಲವಾದಿ ಸೇರಿದಂತೆ ಅನೇಕರು ಉಪಸ್ಥಿತರಿದ್ದು ನೂತನ ಅಧ್ಯಕ್ಷರಿಗೆ ಅಭಿನಂದಿಸಿದರು.

ಚುನಾವಣೆ ಅಧಿಕಾರಿಯಾಗಿ ತಾಪಂ ಇಒ ನಿಂಗಪ್ಪ ಮಸಳಿ ಕಾರ್ಯನಿರ್ವಹಿಸಿ ಮತದಾನ ಪ್ರಕ್ರಿಯೆ ನಡೆಸಿ ವಿಜೇತ ಅಭ್ಯರ್ಥಿ ಶೋಭಾ ಶೆಳ್ಳಗಿ ಹೆಸರನ್ನು ಘೋಷಿಸಿದರು. ಸಹಾಯಕರಾಗಿ ಎಸ್ ಎಸ್ ಬಂಗಾರಗುಂಡ, ಪಿಡಿಒ ರಾಜು ನಾರಾಯಣಿ, ಕಾರ್ಯದರ್ಶಿ ಎಸ್ ಎಸ್ ಬೆಳಗಲ್ ಸಿಬ್ಬಂದಿಗಳಾದ ಬಿ ಎಚ್ ಚಲವಾದಿ, ರಾಜಶೇಖರ ಕೋಳೂರ ಇದ್ದರು.


ಉದಯವಾಹಿನಿ ಚಿತ್ರ

**ಬಹು ಪ್ರತಿಷ್ಠಿತ ಚುನಾವಣೆ ಇದಾಗಿತ್ತು ನಮ್ಮ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿ ಶೋಭಾ ಶೆಳ್ಳಗಿ 11 ಮತಗಳನ್ನು ಪಡೆದು ಜಯಶಾಲಿಯಾಗಿದ್ದಾರೆ ಹಣದ ಬಲ ಮತ್ತು ಜನರ ಬಲದ ಚುನಾವಣೆಯಲ್ಲಿ ನಾವು ಜನರ ಬಲದಿಂದ ಗೆದ್ದಿದ್ದೇವೆ ಹಣದ ಬಲದವರು ಸೋತಿದ್ದಾರೆ**

**-ಬಾಪುರಾವ್ ದೇಸಾಯಿ ಕಾಂಗ್ರೆಸ್ ಮುಖಂಡ**

### ಸೌಲಭ್ಯಗಳನ್ನು ಒದಗಿಸುತ್ತಾರೆ

**ಈ ವೇಳೆ ಕಾಂಗ್ರೆಸ್ ಹಿರಿಯ ಮುಖಂಡ ಬಾಪುರಾವ ದೇಸಾಯಿ ಹಾಗೂ ಗ್ರಾಪಂ ಸದಸ್ಯ ಬಸವರಾಜ ಡಮನಾಳ ಮಾತನಾಡಿ ನೂತನ ಅಧ್ಯಕ್ಷರಾಗಿ ಜಯಶಾಲಿಯಾದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಶೋಭಾ ಶೆಳ್ಳಗಿ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಮೂಲಭೂತ ಸಮಸ್ಯೆಗಳನ್ನು ಅರಿತು ಸರಕಾರದಿಂದ ಬರುವ ಸೌಲಭ್ಯಗಳನ್ನು ಒದಗಿಸುತ್ತಾರೆ ಎಂದರು.**

# ಬಸ್-ಬೈಕ್ ಅಪಘಾತ: ಸವಾರನ ಸಾವು

**• ಉದಯವಾಹಿನಿ ಪುತ್ತೂರು**

ಕೆಎಸ್‌ಆರ್‌ಟಿಸಿ ಬಸ್ ಮತ್ತು ಬೈಕ್ ನಡುವೆ ನಡೆದ ಶ್ರೀ. ಶಿವಮೊಗ್ಗ ಈ ರಾಷ್ಟ್ರೀಯ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟ ಘಟನೆ ಪುತ್ತೂರು ನಗರದ ಹೊರವಲಯದ ಕಬಕ ಗ್ರಾಮದ ಮುರ ಎಂಬಲ್ಲಿ ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಪುತ್ತೂರು ತಾಲ್ಲೂಕಿನ ಪಡೂರು ಗ್ರಾಮದ ರಾಮನಗರ ನಿವಾಸಿ ಅಬ್ದುಲ್ ಕುಂಞ (66) ಮೃತಪಟ್ಟವರು. ಮಂಗಳೂರಿನಿಂದ ಪುತ್ತೂರು ಕಡೆಗೆ ತೆರಳುತ್ತಿದ್ದ ಬಸ್ ಮತ್ತು ಅಬ್ದುಲ್‌ಕುಂಞ ಅವರು ಪುತ್ತೂರು ಕಡೆಯಿಂದ ಕದಿಲ ಕಡೆಗೆ ಹೋಗುತ್ತಿದ್ದ ಬೈಕ್ ನಡುವೆ ಡಿಕ್ಕಿ ಸಂಭವಿಸಿದೆ. ಗಂಭೀರ ಗಾಯಗೊಂಡ ಅಬ್ದುಲ್‌ಕುಂಞ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಯೊಂದಕ್ಕೆ ಕರೆದೊಯ್ಯುವಷ್ಟರಲ್ಲಿ ಅವರು ಮೃತಪಟ್ಟಿದ್ದರು. ಪುತ್ತೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದಾಖಲೆಗಳಿಲ್ಲದ 6.80 ಲಕ್ಷ ಸಹಿತ ವ್ಯಕ್ತಿ ಬಂಧನ

**• ಉದಯವಾಹಿನಿ ಕಾಸರಗೋಡು**

ಹೊಸಂಗಡಿಯಲ್ಲಿ ದಾಖಲೆಗಳಿಲ್ಲದ 6.80 ಲಕ್ಷ ಸಹಿತ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಕುಂಬಡಾಜೆ ಪಿಲಾಂಗಟ್ಟೆ ನಿವಾಸಿ ಮಣಿಪ್ರಸಾದ್ (27) ಎಂಬಾತನನ್ನು ಅಬಕಾರಿ ದಳ ಬಂಧಿಸಿದೆ.

ಬಳಿಕ ಆರೋಪಿಯನ್ನು ಮಂಜೇಶ್ವರ ಪೊಲೀಸರಿಗೆ ಹಸ್ತಾಂತರಿಸಿದೆ. ಜಿಲ್ಲೆ ಮಾದಕವಸ್ತು ಸಾಗಣೆ ಸಂಬಂಧ ಖಚಿತ ಮಾಹಿತಿ ಆಧರಿಸಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದರು. ಆರೋಪಿಯ ಹೆಚ್ಚುವರಿ ವಿಚಾರಣೆ ನಡೆಯುತ್ತಿದೆ.

# ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಜನ್ಮದಿನ ಸತತ 18ನೇ ಬಾರಿ ರಕ್ತದಾನ: ರವಿಶಂಕರರೆಡ್ಡಿ ಮುತ್ತಂಗಿ

**• ಉದಯವಾಹಿನಿ,ಚಿಂಚೋಳಿ**

ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕಾ ಮತ್ತು ಉಕ್ಕು ಸಚಿವರಾದ ಹೆಚ್.ಡಿ. ಕುಮಾರಸ್ವಾಮಿಯವರ 65ನೇ ಜನ್ಮದಿನದ ಅಂಗವಾಗಿ ಬೀದರ ಜಿಲ್ಲೆಯ ಬ್ರಿಮ್ಸ್ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಚಿಂಚೋಳಿ ಜೆಡಿಎಸ್ ಪಕ್ಷದ ತಾಲ್ಲೂಕಾ ಅಧ್ಯಕ್ಷರಾದ ರವಿಶಂಕರರೆಡ್ಡಿ ಮುತ್ತಂಗಿಯವರು ರಕ್ತದಾನ ಮಾಡಿದರು.


ಉದಯವಾಹಿನಿ ಚಿತ್ರ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಚ್.ಡಿ.ಕುಮಾರಸ್ವಾಮಿಯವರ ಜನ್ಮದಿನದ ಅಂಗವಾಗಿ 2006ರಿಂದ ಸತತವಾಗಿ ಇಲ್ಲಿಯವರೆಗೆ 18 ಬಾರಿ ರಕ್ತದಾನ ಮಾಡುತ್ತಾ ಬಂದಿದ್ದೇನೆ ಅವರ ಆರೋಗ್ಯ ಚೆನ್ನಾಗಿರಲ್ಲಿ ಜನರ ಸೇವೆ ಮಾಡಲು ದೇವರು ಇನಷ್ಟು ಆಯುಷ್ಯ ದೇವರು ನೀಡಲಿವೆಂದು ಹಾರೈಸುತ್ತಾ ಪ್ರತಿವರ್ಷ ರಕ್ತದಾನ ಮಾಡುತ್ತೇನೆ ರಕ್ತದಾನ ಮಹಾಧಾನ ತಿಳಿದು ಈ ರಕ್ತದಿಂದ ಅವಶ್ಯಕತೆಯಿರುವ ಬಡವರಿಗೆ ಅನುಕೂಲ ಹಾಗೂ ಅನೇಕ ಜೀವ ಉಳಿಬಹುದು ಹಾಗೂ ನಮ್ಮ ನಾಯಕರಿಗೆ ಪುಣ್ಯ ದೊರಕುತ್ತದೆವೆಂದು ಭಾವಿಸಿ ಪ್ರತಿವರ್ಷ ರಕ್ತದಾನ ಮಾಡುತ್ತಾ ಬಂದಿದ್ದೇನೆ ಮೊದಲ ಬಾರಿ 2006ರಲ್ಲಿ ರಾಜ್ಯದ ಮುಖ್ಯಮಂತ್ರಿಯಾದಗ ರಕ್ತದಾನ ಮಾಡುವುದು ಪ್ರಾರಂಭಿಸಿದ್ದೇನೆ ಆಗಿನಿಂದ ಇಂದಿನವರೆಗೆ ಪ್ರತಿವರ್ಷ ರಕ್ತದಾನ ನೀಡುತ್ತಿದ್ದೇನೆ ಮುಂದೆಯೂ ಕೂಡ ರಕ್ತದಾನ ಮಾಡುತ್ತೇನೆ.

ಕುಮಾರಸ್ವಾಮಿಯವರು ಬಡವರ ಪರ ರೈತರ ಪರ ಮಧ್ಯಮ ವರ್ಗದವರ ಪರ ಸದಾ ನಿಲ್ಲುವಂತ ನಾಯಕರು ಕುಮಾರಸ್ವಾಮಿ ಅವರಿದ್ದಾರೆ ಅದಕಾರಣ ಕುಮಾರಸ್ವಾಮಿ ಎಂದರೆ ನನಗೆ ಬಹಳಷ್ಟು ಹೆಮ್ಮೆ ನನ್ನ ಜೀವ ಇರುವವರೆಗೆ ಅವರ ಜನ್ಮದಿನದಂದ್ದು ರಕ್ತದಾನ ಮಾಡುತ್ತೇನೆ ಎಂದರು.

# ಗ್ರಾಮಕ್ಕೆ ಸಂಪರ್ಕ ರಸ್ತೆ ನಿರ್ಮಿಸುವಂತೆ ಯಾಕಾಪೂರ ಆಗ್ರಹ

**• ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನ ಸೇಡಂ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಾಕಾಪೂರ ಮತ್ತು ರಾಮತೀರ್ಥ ಗ್ರಾಮಗಳಿಂದ ಬೆಡಕಪಳ್ಳಿ ಗ್ರಾಮಕ್ಕೆ ಸಂಪರ್ಕ ರಸ್ತೆ ನಿರ್ಮಾಣ ಮಾಡುವಂತೆ ಉಸ್ತುವಾರಿ ಸಚಿವ ಪ್ರೀಯಾಂಕ್ ಖರ್ಗೆ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಹಾಗೂ ಸಂಸದ ರಾಧಾಕೃಷ್ಣ ದೊಡ್ಡಮನಿಯವರಿಗೆ ಸಮಾಜ ಸೇವಕ ರಮೇಶ ಯಾಕಾಪೂರ ಪತ್ರ ಬರೆದು ಒತ್ತಾಯಿಸಿದ್ದಾರೆ.

ತಾಲ್ಲೂಕಿನ ಯಾಕಾಪೂರ ಮತ್ತು ರಾಮತೀರ್ಥ ಈ ಎರಡು ಗ್ರಾಮಗಳಿಂದ ಬೆಡಕಪಳ್ಳಿ ಗ್ರಾಮಕ್ಕೆ ಸಂಪರ್ಕ ರಸ್ತೆ ನಿರ್ಮಾಣ ಕೆಲಸ ಆದಿ ಕಾಲದಿಂದ ಹಾಗೆ ಉಳಿದಿದೆ ಶರಣಪ್ರಕಾಶ ಪಾಟೀಲ ಸಚಿವರಾದಗೆಲ್ಲ ಈ ಎರಡು ಗ್ರಾಮಗಳ ಜನರು ಬೆಡಕಪಳ್ಳಿ ಸಂಪರ್ಕ ರಸ್ತೆ ನಿರ್ಮಾಣದ ಕೆಲಸ ನಿಮ್ಮಿಂದ ನಿರೀಕ್ಷಿಸುತ್ತಲೆ ಇದ್ದಾರೆ. ಗ್ರಾಮದ ಜನರ ಕನಸು ನನಸಾಗದೆ ಉಳಿದಿದೆ, ಪಂಚಾಯತ ರಾಜ್ ಇಲಾಖೆ ಯಾಕಾಪೂರ ಗ್ರಾಮದಿಂದ ಬೆಡಕಪಳ್ಳಿ ಗ್ರಾಮಕ್ಕೆ ಸಂಪರ್ಕ ರಸ್ತೆ ನಿರ್ಮಾಣದ ಅಂದಾಜು ಪಟ್ಟಿ ಸಿದ್ಧಪಡಿಸಿದ್ದು ಕಾಮಗಾರಿಗೆ 1.75 ಲಕ್ಷ ಖರ್ಚು ಆಗಲಿದೆ ಅಂದಾಜಿಸಲಾಗಿದೆ.



**ಆದಿ ಕಾಲದಿಂದ ಹಾಗೆ ಉಳಿದಿದೆ**

ತಾಪಂ.ಇಓ ಇದೆ ಅ.23 ರಂದು ಸಲ್ಲಿಸಿದ್ದಾರೆ, ನವೆಂಬರ್ ತಿಂಗಳಲ್ಲಿ ನಿರ್ಮಿತ ಕೇಂದ್ರ ಕಲಬುರಗಿ ಇಂಜಿನಿಯರ ಯಾಕಾಪೂರ ಗ್ರಾಮಕ್ಕೆ ಭೇಟಿ ನೀಡಿ ಯಾಕಾಪೂರ ಗ್ರಾಮದಿಂದ ಬೆಡಕಪಳ್ಳಿ ಗ್ರಾಮಕ್ಕೆ ಸಂಪರ್ಕ ರಸ್ತೆಗಾಗಿ ಕೆ.ಕೆ.ಆರ್.ಡಿ.ಬಿ ಯಿಂದ ರೂ.15 ಲಕ್ಷಗಳ ಅನುದಾನ ಬಿಡುಗಡೆ ಆಗಿ ಸದರಿ ಕಾಮಗಾರಿಯನ್ನು ನಿರ್ಮಿತ ಕೇಂದ್ರ ಕಲ್ಬುರ್ಗಿ ವಹಿಸಿ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಪಂಚಾಯತ ರಾಜ್ ತಯಾರಿಸಿ ಸಲ್ಲಿಸಿದ ಅಂದಾಜು 1.75ಲಕ್ಷಗಳಲ್ಲಿ ಈ ಕೆ.ಕೆ ಆರ್.ಡಿ.ಬಿ ಮಂಜೂರಿಸದ ಬಿಡುಗಡೆ ಮಾಡಿದ ರೂ.15 ಲಕ್ಷಗಳ ಕಾಮಗಾರಿ ನಂತರ ಮುಂದುವರೆಸಲು ಇನ್ನೂ ಉಳಿದ ಅಂದಾಜು ರೂ.1.60 ಲಕ್ಷಗಳು ಕೂಡ ಕೆ.ಕೆ. ಆರ್.ಡಿ.ಬಿಯಿಂದಲೆ ಅನುದಾನ ಮಂಜೂರಿ ಮಾಡಬೇಕು ಇದರಂತೆ ರಾಮ ತೀರ್ಥದಿಂದ ಬೆಡಕಪಳ್ಳಿಗೆ ಸಂಪರ್ಕ ರಸ್ತೆಗಾಗಿಯು ಕೂಡ ಕೆ.ಕೆ.ಆರ್.ಡಿ.ಬಿಯಿಂದಲೆ ಅನುದಾನ ಮಂಜೂರಿ ನೀಡಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಮಿತ್ ಶಾ ಹೇಳಿಕೆ ಖಂಡಿಸಿ, ಸಿಪಿಐ(ಎಂಎಲ್) ಲಿಬರೇಶನ್‌ನಿಂದ ಪ್ರತಿಭಟನೆ

## ಕೇಂದ್ರದ ಗೃಹ ಸಚಿವ ಸ್ಥಾನದಲ್ಲಿದ್ದುಕೊಂಡು ಸಂವಿಧಾನ ನಿರ್ಮಾತೃ ಅಂಬೇಡ್ಕರ್ ಅವರ ಬಗ್ಗೆಯೇ ಹೀನಾಯವಾಗಿ ಹೇಳಿಕೆ: ನಾಗರಾಜ್

**• ಉದಯವಾಹಿನಿ ಸಿಂಧನೂರು**

ಅಮಿತ್ ಶಾ ಹೇಳಿಕೆ ಖಂಡಿಸಿ, ಸಿಪಿಐ(ಎಂಎಲ್) ಲಿಬರೇಶನ್‌ನಿಂದ ಪ್ರತಿಭಟನೆ.

ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಗೃಹಮಂತ್ರಿ ಅಮಿತ್ ಶಾ ಅವರು ರಾಜ್ಯಸಭೆ ಕಲಾಪದಲ್ಲಿ ನೀಡಿದ ಹೇಳಿಕೆ ಖಂಡಿಸಿ ಸಿಪಿಐ(ಎಂಎಲ್) ಲಿಬರೇಶನ್ ಪಾರ್ಟಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಗುರುವಾರ ಮನವಿ ರವಾನಿಸಲಾಯಿತು. ಈ ಸಂದರ್ಭದಲ್ಲಿ ಪಾರ್ಟಿಯ ಜಿಲ್ಲಾ ಕಾರ್ಯದರ್ಶಿ ನಾಗರಾಜ್ ಪೂಜಾರ್ ಮಾತನಾಡಿ, ಅಂಬೇಡ್ಕರ್ ಹೆಸರು ಹೇಳುವುದು ಈಗ ಶೋಕಿ ಆಗಿಬಿಟ್ಟಿದೆ, ಇಷ್ಟೊಂದು ಬಾರಿ ದೇವರು ಹೆಸರು ಹೇಳಿದ್ದರೆ ಏಳು ಜನ್ಮಗಳವರೆಗೆ ಸ್ವರ್ಗ ಪ್ರಾಪ್ತಿ ಆಗುತ್ತಿತ್ತು'' ಎಂದು ರಾಜ್ಯಸಭೆ ಕಲಾಪದಲ್ಲಿ ನಾಲಿಗೆ ಹರಿಬಿಟ್ಟು ಬಾಬಾ ಸಾಹೇಬರಿಗೆ ಅವಮಾನ ಮಾಡುವ ಮೂಲಕ ರಾಷ್ಟ್ರದ್ರೋಹ ಕೃತ್ಯ ಎಸಗಿದ್ದಾರೆ. ಸಂವಿಧಾನದತ್ತವಾದ ಕೇಂದ್ರದ ಗೃಹ ಸಚಿವ ಸ್ಥಾನದಲ್ಲಿದ್ದುಕೊಂಡು ಸಂವಿಧಾನ ನಿರ್ಮಾತೃ ಅಂಬೇಡ್ಕರ್ ಅವರ ಬಗ್ಗೆಯೇ ಹೀನಾಯವಾಗಿ ಹೇಳಿಕೆ ನೀಡಿರುವುದು ಬಿಜೆಪಿಯವರಿಗೆ ಸಂವಿಧಾನದ ಬಗ್ಗೆ ಇರುವ ಸಿಟ್ಟನ್ನು ಹೊರಹಾಕಿದಂತಾಗಿದೆ.

**ಬಾಬಾ ಸಾಹೇಬರಿಗೆ ಅವಮಾನ**

ಆರ್‌ಎಸ್‌ಎಸ್‌ನ ಕೂಸಾದ ಬಿಜೆಪಿಯು ದೇಶದ ಜನರ ಮೇಲೆ ಮನುವಾದ ಹೇರಲು ಹೊರಟಿದೆ. ಅದರ ಭಾಗವಾಗಿ ಗೃಹ ಸಚಿವ ಅಮಿತ್ ಶಾ ಮಾತನಾಡಿದ್ದಾರೆ. ಈ ಹೇಳಿಕೆ ಖಂಡನಾರ್ಹವಾಗಿದ್ದು, ಈ ಕೂಡಲೇ ಗೃಹ ಸಚಿವ ಅಮಿತ್ ಶಾ ಬೇಷರತ್ ಕ್ಷಮೆಯಾಚಿಸಿ ಸಚಿವ ಸ್ಥಾನದಿಂದ ಕೆಳಗಿಳಿಯಬೇಕು ಎಂದು ಆಗ್ರಹಿಸಿದರು.

ದೇಶಕ್ಕೆ ಸಂವಿಧಾನ ಕೊಟ್ಟಂತ, ಎಲ್ಲಾ ಜಾತಿ, ಜನಾಂಗದವರಿಗೆ ಆದರ್ಶರಾದ ಅಂಬೇಡ್ಕರ್ ಅವರ ಬಗ್ಗೆ ಅಮಿತ್ ಹೀಯಾಳಿಸಿರುವುದು ಅತ್ಯಂತ ಖಂಡನಾರ್ಹ. ಅಂಬೇಡ್ಕರ್ ಅವರನ್ನು ಅವಮಾನಿಸುವುದು ರಾಷ್ಟ್ರದ್ರೋಹದ ಕೆಲಸವಾಗಿದೆ. ಹಾಗಾಗಿ ರಾಷ್ಟದ್ರೋಹದ ಅಡಿಯಲ್ಲಿ ಅಮಿತ್ ಶಾ ಅವರ ವಿರುದ್ಧ ಕೇಸ್ ದಾಖಲಿಸಬೇಕು. ಅಮಿತ್ ಶಾ ಹೇಳಿಕೆ ಖಂಡಿಸಿ ದೇಶದ ಮೂಲೆ ಮೂಲೆಯಲ್ಲಿ ಹೋರಾಟ ನಡೆಯುತ್ತಿದ್ದು, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಲಾಗುತ್ತಿದೆ.



ಉದಯವಾಹಿನಿ ಚಿತ್ರ

**ದೇಶದ ಸರ್ವ ಜನರ ವಿಮೋಚನೆಗಾಗಿ ಹತ್ತಾರು ಡಿಗ್ರಿಗಳನ್ನು ಪಡೆದು, ಬಹಳಷ್ಟು ದೇಶಗಳಲ್ಲಿ ಸಂಚರಿಸಿ, ಆಳ ಅಧ್ಯಯನದೊಂದಿಗೆ ಸಂವಿಧಾನ ನೀಡಿದ ನಿರ್ಮಾತೃವನ್ನೇ ಹೀಗಳೆಯುವ ಗೃಹ ಸಚಿವರು ಈ ಕೂಡಲೇ ರಾಜೀನಾಮೆ ನೀಡಬೇಕು -ಎಕ್ಕಿ**

**ಬಾಬಾ ಸಾಹೇಬರು ಕೊಟ್ಟ ಸಂವಿಧಾನದ ಅಡಿಯಲ್ಲಿ ಸಚಿವ ಸ್ಥಾನ ಪಡೆದಿರುವ ಅಮಿತ್ ಶಾ ಅವರು, ಸಂವಿಧಾನ ಅಡಿಯಲ್ಲಿ ಕೆಲಸ ನಿರ್ವಹಿಸದೇ ಮನುವಾದ, ಆರ್‌ಎಸ್‌ಎಸ್ ಸಿದ್ಧಾಂತವನ್ನಿಟ್ಟುಕೊಂಡು ಆಡಳಿತ ನಡೆಸುತ್ತಿದ್ದಾರೆ. ಕೇಂದ್ರದ ಬಿಜೆಪಿ ನೇತೃತ್ವದ ಪ್ಯಾಸಿಸ್ಟ್ ಸರ್ಕಾರ ದೊಡ್ಡ ದೊಡ್ಡ ಕಾರ್ಪೋರೇಟ್ ಕಂಪನಿಗಳಿಗೆ ಮಣೆ ಹಾಕಿ ಆಡಳಿತ ನಡೆಸುತ್ತಿದೆ. ದೇಶದ ರೈತರು, ಕಾರ್ಮಿಕರು ಹಾಗೂ ದುಡಿಯುವ ವರ್ಗವನ್ನು ಸಂಪೂರ್ಣ ಕಡೆಗಣಿಸಲಾಗಿದೆ. ದೇಶದ ಪ್ರಧಾನಿಯವರು ಅಮಿತ್ ಶಾ ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಕಟುವಾಗಿ ಟೀಕಿಸಿದರು.**


ಈ ಸಂದರ್ಭದಲ್ಲಿ ಹೋರಾಟಗಾರ ಬಸವರಾಜ ಎಕ್ಕಿ ಮಾತನಾಡಿ, ಅಂಬೇಡ್ಕರ್ ಹೆಸರು ಹೇಳುವುದು ಶೋಕಿಯಾಗಿದ್ದು, ಇಷ್ಟೊಂದು ಬಾರಿ ದೇವರ ಹೆಸರು ಹೇಳಿದ್ದರೆ ಸ್ವರ್ಗ ಪ್ರಾಪ್ತಿಯಾಗುತ್ತಿತ್ತು ಎಂದು ಬಾಬಾ ಸಾಹೇಬರನ್ನು ಕೀಳಾಗಿ ಬಿಂಬಿಸಿ ಮಾತನಾಡಿರುವುದು ಖಂಡನಾರ್ಹ.

ಹಾಗಾದರೆ ಅಮಿತ್ ಶಾ ಅವರು ಸಂವಿಧಾನದ ಅಡಿಯಲ್ಲಿ ಗೃಹ ಸಚಿವರಾಗಿ ಅಧಿಕಾರ ಪಡೆದಿದ್ದು ಯಾಕೆ ? ಯಾವುದೋ ದೇವಸ್ಥಾನದಲ್ಲಿದ್ದುಕೊಂಡು ತಾವೇ ದೇವರ ಹೆಸರು ಜಪ ಮಾಡುತ್ತಾ ಸ್ವರ್ಗವನ್ನು ಪಡೆಯಬಹುದಿತ್ತಲ್ಲ. ತಲೆಯಲ್ಲಿ ಸಂಪೂರ್ಣ ಮನುವಾದವನ್ನು ತುಂಬಿಕೊಂಡಿರುವ ಬಿಜೆಪಿ ಮತ್ತು ಅದರ ಮಂತ್ರಿಗಳು ಹಾಗೂ ರಾಜಕಾರಣಿಗಳು ಪುನಃ ದೇಶದ ಜನರ ಮೇಲೆ ಮನುಸಂಸ್ಕೃತಿಯನ್ನು ಹೇರಲು ಹೊರಟಿದ್ದಾರೆ.

ಈ ಸಂದರ್ಭದಲ್ಲಿ ಮುಖಂಡರಾದ ಬಸವರಾಜ ಕೊಂಡೆ, ಬಸವರಾಜ ಬೆಳಗುರ್ಕಿ, ಶ್ರೀನಿವಾಸ ಬುಕ್ಕನಹಟ್ಟಿ, ರಾಘವೇಂದ್ರ ಉಪ್ಪಳ, ಹುಲುಗಪ್ಪ ಹುಲುಗುಂಚಿ, ಶೇಕ್ಷಾವಲಿ, ಮಂಜುನಾಥ, ಹನುಮಂತ ಬೂದಿವಾಳಕ್ಯಾಂಪ್, ಕಂಠೆಪ್ಪ ರೈತನಗರಕ್ಯಾಂಪ್, ಮಲ್ಲಿಕಾರ್ಜುನ ರೈತನಗರ ಸೇರಿದಂತೆ ಇನ್ನಿತರರು ಇದ್ದರು.

## ಮಿನಿ ನ್ಯೂಸ್

# ಕುಂಚಾವರಂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೇಮಕ


ಉದಯವಾಹಿನಿ ಚಿತ್ರ

**• ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಕುಂಚಾವರಂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಡಳಿತ ಮಂಡಳಿಯ ಚುನಾವಣೆಯ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶೀಷ್ಟ ಪಂಗಡ, ಹಿಂದುಳಿದ ವರ್ಗಗಳ ಮಹಿಳೆಯರಿಗೆ ಮೀಸಲಿರಿಸಿದ ಮತಕ್ಷೇತ್ರದಿಂದ ಚುನಾವಣೆಗೆ ಸ್ವರ್ಧಿಸಿ ಮುಂದಿನ ಐದು ವರ್ಷಗಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ. ನರಸಿಂಹಮ್ಲು ಕುಂಬಾರ, ಲಾಜರ ಯೇಶಪ್ಪ, ಜೋಗು ಸಮೃದ್ಧಿ, ಬಿಚ್ಚಪ್ಪ, ಚಿನ್ನ ಮುತ್ತಪ್ಪ, ಬೇಗರಿ ಚಿರಂಜೀವಿ, ಪ್ರಭಾಕರರೆಡ್ಡಿ, ಶ್ರೀನಿವಾಸ್, ಶೇಜಾಬ್ದಿ, ಅಮೃತಮ್ಮ, ನರಸಿಂಹಮಲು, ಇವರೆಲ್ಲರೂ ಕುಂಚಾವರಂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಡಿ.ಮೊದಲ ವಾರದಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಡಿ.18ರಂದ್ದು ನಡೆದ ಕುಂಚಾವರಂ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಪದಾಧಿಕಾರಿಗಳು ಆಯ್ಕೆ ಪ್ರಕ್ರಿಯೆ ನಡೆಯಿತು. ಇದರಲ್ಲಿ ಅಧ್ಯಕ್ಷರಾಗಿ ಪ್ರಭಾಕರರೆಡ್ಡಿ ಯಲ್ಲರೆಡ್ಡಿ ಆಯ್ಕೆಯಾದರೆ, ಉಪಾಧ್ಯಕ್ಷರಾಗಿ ಲಾಜರ ಯೇಶಪ್ಪ ಆಯ್ಕೆಯಾದರು ಎಂದು ತಿಳಿಸಿದರು. ಎಲ್ಲಾ ಆಡಳಿತ ಮಂಡಳಿಯವರು ಹೂಮಾಲೆ ಹಾಕಿ ಸಂಭ್ರಮಿಸಿದರು.

# ಕಾಂತರಾಜ್ ವರದಿ ಬಿಡುಗಡೆಗೆ ಹಿಂದುಳಿದ ವರ್ಗದಿಂದ ಪ್ರತಿಭಟನೆ


ಉದಯವಾಹಿನಿ ಚಿತ್ರ

**• ಉದಯವಾಹಿನಿ ಯಾದಗಿರಿ**

ಯಾವುದೇ ಕಾರಣಕ್ಕೂ ಪಂಚಮ ಸಾಲಿ ಸಮಾಜವನ್ನು 2.ಎ ಗೆ ಸೇರಿಸಬಾರದು ಎಂದು ಕರ್ನಾಟಕ ಪ್ರದೇಶ ಕುರುಬ ಸಂಘದ ರಾಜ್ಯಾಧ್ಯಕ್ಷ ಎಂ. ಈರಣ್ಣ ಮಾನ್ವಿ ಹೇಳಿದರು .ಬೆಳಗಾವಿಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಹಾಗೂ ಶೋಷಿತ ಸಮುದಾಯಗಳ ಒಕ್ಕೂಟದಿಂದ

ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ 2ಎ ನಲ್ಲಿ ಸೇರಿಸಬಾರದು ಮತ್ತು ಕಾಂತರಾಜ್ ವರದಿಯನ್ನು ಶೀಘ್ರವೇ ಬಿಡುಗಡೆಗೊಳಿಸುವಂತೆ ಒತ್ತಾಯಿಸಿ ಬೆಳಗಾವಿಯಲ್ಲಿ ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು. ಈಗಾಗಲೇ 2 ಎ. ಜಾತಿಯಲ್ಲಿ ಇರುವ ಜನರಿಗೆ ತುಂಬಾ ಅನ್ಯಾಯವಾಗುತ್ತದೆ ಆದ್ದರಿಂದ ಈ ಕುರಿತು ಸರಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಶೀಘ್ರವೇ ಕಾಂತರಾಜ್ ವರದಿಯನ್ನು ಬಿಡುಗಡೆಗೊಳಿಸಿ ಹಿಂದುಳಿದ ವರ್ಗದವರಿಗೆ ನ್ಯಾಯ ಒದಗಿಸಿ ಕೊಡಬೇಕು ಎಂದು ಅವರು ಸರಕಾರಕ್ಕೆ ಮನವಿ ಮಾಡಿಕೊಂಡರು.


ಈ ಸಂದರ್ಭದಲ್ಲಿ ಶೋಷಿತ ಹಿಂದುಳಿದ ಜಾತಿಗಳ ಒಕ್ಕೂಟದ ರಾಜ್ಯದ್ಯಕ್ಷರಾದ ಕೆ. ರಾಮಚಂದ್ರಪ್ಪ ಶೋಷಿತ ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಅಪ್ಪಣ್ಣ ಚಿನ್ನಾಕಾರ್ ,ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ, ಕುರುಬ ಸಂಘದ ಶಹಾಪುರ ತಾಲ್ಲೂಕ ಅಧ್ಯಕ್ಷ ಡಾ. ಭೀಮಣ್ಣ ಮೇಟಿ, ಎಸ್ .ಟಿ ಸಮುದಾಯದ ಮುಖಂಡ ಹನುಮೇಗೌಡ ಮರ್ಕಲ್ , ರಾವುತರಾಯ ಕಮತಗಿ, ಚನ್ನಕೇಶವ ಗೌಡ ಬಾಣತಿಹಾಳ, ಹಾಗೂ ಶೋಷಿತ ಹಿಂದುಳಿದ ವರ್ಗಗಳ ಮುಖಂಡರು ವಿವಿಧ ಸಂಘಟನೆಯ ಪದಾಧಿಕಾರಿಗಳು ಸದಸ್ಯರು ಹಾಗೂ ಇನ್ನಿತರರು ಭಾಗವಹಿಸಿದ್ದರು.

# 3 ಲಕ್ಷ ರೂ ಬೋಗಸ್ ಬಿಲ್ ಪಾವತಿ ಮುಖ್ಯಾಧಿಕಾರಿ ವಿರುದ್ಧ ದೂರು

**• ಉದಯವಾಹಿನಿ ಮುದ್ದೇಬಿಹಾಳ**

ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ ಅವರು ಪಟ್ಟಣದ ಇಂದಿರಾ ನಗರ ಬಡಾವಣೆಯಲ್ಲಿ ಕುಡಿಯುವ ನೀರು ಪೂರೈಸಲು ಬೋರವೆಲ್ ಕೂರೆದು ಮೋಟಾರ್ ಮತ್ತು ಪೈಪ್ ಲೈನ್ ಅಳವಡಿಸದೆ.

3 ಲಕ್ಷ ರೂ ಬೋಗಸ್ ಬಿಲ್ಲನ್ನು ಪಾವ ತಿಸಿದ್ದಾರೆ ಈ ಕುರಿತು ಜಿಲ್ಲಾಧಿಕಾರಿಗಳಿಗೆ ,ನಗರಾಭಿವೃದ್ಧಿ ಯೋಜ ನಾಧಿಕಾರಿಗಳಿಗೆ ದೂರನ್ನು ಡಿ 18 ರಂದು ನೀಡಲಾಗಿದೆ ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ತನಿಖೆಯನ್ನು ನಡೆಸಬೇಕು ಮತ್ತು ಪುರಸಭೆ ಮುಖ್ಯಾಧಿಕಾರಿಯನ್ನು ಅಮಾನತ್ತುಗೂಳಸಿಬೇಕೆಂದು ಅರ್ಜಿದಾರ ಸಂಗಮೇಶ್ವರ ನಗರ ಪುರಸಭೆ ಸದಸ್ಯ ವಿರೇಶ ಹಡಲಗೇರಿ ಒತ್ತಾಯಿಸಿದರು


ಉದಯವಾಹಿನಿ ಚಿತ್ರ

ಗುರುವಾರ ಇಂದಿರಾ ನಗರ ಹನುಮಾನ್ ದೇವಾಲಯದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು ಕಳೆದ ಒಂದು ವರ್ಷದಿಂದ ಇಂದಿರಾ ನಗರದಲ್ಲಿ ನೂತನವಾಗಿ ಯಾವುದೇ ಬೋರವೆಲ್ ಹಾಕಿಲ್ಲವೆಂದು ನಿವಾಸಿಗಳು ತಿಳಿಸಿದ್ದಾರೆ 202122 ನೇ ಸಾಲಿನ 15 ನೇ ಹಣಕಾಸು ಯೋಜನೆ ನಾನ್ ಮಿಲಿಯನ್ ಪ್ಲಸ್ ಸಿಟಿಗಳಿಗೆ ಮರು ಹಂಚಿಕೆಯ 61 ಲಕ್ಷ ರೂ ಅನುದಾನ ಅನುಮೋದನೆ ದೂರಕಿದ ಕ್ರಿಯಾ ಯೋಜನೆಯ 7 ನೇ ಕ್ರಮಾಂಕದಲ್ಲಿ ಪಟ್ಟಣದ ಇಂದಿರಾ ನಗರದಲ್ಲಿ ಬೋರವೆಲ್ ಕೂರೆದು ಮೋಟಾರ ಮತ್ತು ಪೈಪ್ ಲೈನ್ ಅಳವಡಿಸಲು 3 ಲಕ್ಷ ರೂ ಯಾವುದೇ ಕಾಮಗಾರಿ ನಿರ್ವಹಿಸದೆ ಕಾಮಗಾರಿ ಪೂರ್ಣಗೂಳಿಸಲಾಗಿದೆ ಎಂದು ಹಣ ಮಂಜೂರ ಮಾಡುವ ಪತ್ರದಲ್ಲಿ ಮುಖ್ಯಾಧಿಕಾರಿ ಬಿರಾದಾರ 3.12.2024 ರಂದು ಸರಕಾರಕ್ಕೆ ಸಂದಾಯವಾಗುವ ಎಲ್ಲಾ ಮೊತ್ತ ಕಡಿತಗೊಳಿಸಿ 203309.00 ರೂ ಹಣವನ್ನು ಪುರಸಭೆಯಿಂದ ಸಂದಾಯವಾದ ಮೊತ್ತದ ದಾಖಲೆಗಳನ್ನು ಕಂಡು ಬಂದಿದೆ ಎಂದು ದಾಖಲೆಗಳನ್ನು ಪ್ರದರ್ಶಿಸಿದರು.



# ಆಲಿಯಾ ಬಗ್ಗೆ ರಣಬೀರ್‌ಗೆ ಇಲ್ಲ ಕಾಳಜಿ

ಆಲಿಯಾ ಭಟ್ ಹಾಗೂ ರಣಬೀರ್ ಕಪೂರ್ ಬಾಲಿವುಡ್‌ನ ಸಾಕಷ್ಟು ಚರ್ಚೆಗೆ ಒಳಗಾಗುವ ಸೆಲೆಬ್ರಿಟಿಗಳು. ಈ ದಂಪತಿ ಭರ್ಜರಿ ಮೆಚ್ಚುಗೆ ಪಡೆಯುತ್ತಾರೆ. ಆನ್‌ಸ್ಕ್ರೀನ್ ಮೇಲೆ ಗಮನ ಸೆಳೆಯುವ ಈ ಜೋಡಿಗೆ ಸಾಕಷ್ಟು ದೊಡ್ಡ ಅಭಿಮಾನಿ ಬಳಗ ಇದೆ. ಇತ್ತೀಚೆಗೆ ರಣಬೀರ್ ಕಪೂರ್ ಅವರನ್ನು ಅನೇಕರು ಟೀಕೆ ಮಾಡಿದ್ದಾರೆ. ಇದಕ್ಕೆ ಕಾರಣ ಆಗಿದ್ದು ರಾಜ್ ಕಪೂರ್ ಅವರ 100ನೇ ವರ್ಷದ ಜನ್ಮ ದಿನಾಚರಣೆ. ಈ ಬಗ್ಗೆ ಆಲಿಯಾ ಪ್ರತಿಕ್ರಿಯಿಸಿದ್ದಾರೆ ಎನ್ನಲಾಗಿದೆ. ಇತ್ತೀಚೆಗೆ ರಾಜ್ ಕಪೂರ್ ಅವರ 100ನೇ ವರ್ಷದ ಜನ್ಮ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಈ ವೇಳೆ ರಣಬೀರ್ ಕಪೂರ್ ಅವರು ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ ಎಂದು ಅನೇಕರು ಟೀಕೆ ಮಾಡಿದ್ದರು. ಅಲ್ಲದೆ, ಆಲಿಯಾ ಬಗ್ಗೆ ಗಮನ ನೀಡಿಲ್ಲ ಎಂದು ಕೂಡ ಹೇಳಲಾಯಿತು. ಈ ವಿಡಿಯೋದಲ್ಲಿ ಅವರು ಖುಷಿ ಖುಷಿಯಿಂದ ಓಡಾಡುತ್ತಿರುವುದು ಇದೆ. ಅಲ್ಲದೆ, ರಣಬೀರ್ ಅವರು ಆಲಿಯಾ ಭಟ್ ಅವರ ಬಗ್ಗೆ ಕಾಳಜಿ ತೋರಿಸುತ್ತಿದ್ದಾರೆ. 'ರಣಬೀರ್ ಕಪೂರ್ ಈ ಮುಖವನ್ನು ಸೋಶಿಯಲ್ ಮೀಡಿಯಾದಲ್ಲಿ ಎಂದಿಗೂ ತೋರಿಸುವುದಿಲ್ಲ' ಎಂದು ಕ್ಯಾಪ್ಶನ್ ನೀಡಲಾಗಿದೆ. ಈ ವಿಡಿಯೋನ ಆಲಿಯಾ ಲೈಕ್ ಮಾಡಿದ್ದಾರೆ. ರಣಬೀರ್ ಕಪೂರ್ ಅವರು ಟ್ರೋಲ್‌ಗಳನ್ನು ಎದುರಿಸುತ್ತಿರುವುದು ಈಗಿನಿಂದ ಅಲ್ಲ. ಅನೇಕ ಹುಡುಗಿಯರ ಜೊತೆ ಸುತ್ತಾಡಿದ್ದಕ್ಕೆ ಅವರು ಟೀಕೆ ಎದುರಿಸಬೇಕಾಯಿತು. ಅವರನ್ನು ಅನೇಕರು ನಾನಾ ರೀತಿ ಕರೆದಿದ್ದರು. ಈ ಕಾರಣಕ್ಕೆ ಅವರನ್ನು ಸಾಕಷ್ಟು ಟ್ರೋಲ್ ಮಾಡಲಾಯಿತು. ಆಲಿಯಾ ಭಟ್ ಆಗಲಿ ರಣಬೀರ್ ಕಪೂರ್ ಆಗಲಿ ಟ್ರೋಲ್‌ಗಳಿಗೆ ಉತ್ತರಿಸಿದ್ದು ಕಡಿಮೆ. ಅವರು ಕೆಲವು ಸಂದರ್ಶನಗಳಲ್ಲಿ ಈ ಬಗ್ಗೆ ಮಾತನಾಡುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಇವರು ಮೌನ ವಹಿಸುತ್ತಾರೆ. ಈಗ ರಣಬೀರ್ ಬಗ್ಗೆ ಕೇಳಿ ಬಂದ ಆರೋಪಕ್ಕೆ ಆಲಿಯಾ ಉತ್ತರಿಸಿದ್ದಾರೆ. ಆಲಿಯಾ ಹಾಗೂ ರಣಬೀರ್‌ಗೆ ರಹಾ ಹೆಸರಿನ ಮಗು ಜನಿಸಿದೆ. ಈ ದಂಪತಿ ಕುಟುಂಬದ ಜೊತೆ ಹಾಯಾಗಿ ಸಂಸಾರ ನಡೆಸುತ್ತಾ ಇದ್ದಾರೆ.



# ಯುಐ ಚಿತ್ರಕ್ಕೆ ಬಾಲಿವುಡ್‌ನಲ್ಲೂ ಬಹುಪರಾಕ್

ಜಗತ್ತಿನ ಬುದ್ಧಿವಂತ ಡೈರೆಕ್ಟರ್ ಲಿಸ್ಟ್‌ನಲ್ಲಿರುವ ಉಪೇಂದ್ರ ನಿರ್ದೇಶನದ ಸಿನಿಮಾ ಅಂದರೆ ಇಡೀ ಜಗತ್ತೇ ಕುತೂಹಲದಿಂದ ಕಾದಿರುತ್ತೆ. ಹೀಗಾಗೇ ಯುಐ ಚಿತ್ರದ ಮೇಲೆ ಇನ್ನಿಲ್ಲದ ನಿರೀಕ್ಷೆ ಶುರುವಾಗಿದೆ. ಇದೀಗ ಬಿಡುಗಡೆ ಹೊಸ್ತಿಲಲ್ಲಿರುವ ಚಿತ್ರತಂಡ ದೇಶಾದ್ಯಂತ ಭರ್ಜರಿ ಪ್ರಚಾರ ಮಾಡುತ್ತಿದೆ.



## ಯುಐ ಹವಾ ಶುರು

ಇದೀಗ ಮುಂಬೈನಲ್ಲೂ ಯುಐ ಹವಾ ಶುರುವಾಗಿದೆ. ಭಾರೀ ಬಜೆಟ್‌ನಲ್ಲಿ ತಯಾರಾದ ಯುಐ ವಿಸ್ಮಯ ಜಗತ್ತನ್ನು ಕಣ್ತುಂಬಿಕೊಳ್ಳಲು ಬಾಲಿವುಡ್ ಕೂಡ ಕಾದು ಕುಳಿತಿದೆ. ಅದರಲ್ಲೂ ಅಮಿರ್ ಖಾನ್ ಖುದ್ದು ವಿಡಿಯೋ ಮಾಡಿ ಯುಐಗೆ ವಿಶ್ ಮಾಡಿ ಸಿನಿಮಾ ನೋಡುವ ಕುತೂಹಲ ಹೊರಹಾಕಿದ ಮೇಲಂತೂ ಸಿನಿಮಾದ ಮೇಲೆ ಬಾಲಿವುಡ್ ಮಂದಿಯ ಕುತೂಹಲ ಹೆಚ್ಚಾಗಿದ್ದು, ಮಹಾರಾಷ್ಟ್ರದಾದ್ಯಂತ ಹೆಚ್ಚಿನ ಸ್ಕ್ರೀನ್‌ನಲ್ಲಿ ಹಿಂದಿ ಭಾಷೆಯಲ್ಲೂ ಯುಐ ತೆರೆಕಾಣುತ್ತದೆ. ಮುಂಬೈ ನಗರದಲ್ಲಿ ಯುಐ ಚಿತ್ರದ ಕುರಿತು ಮಾಹಿತಿ ನೀಡಿರುವ ಉಪೇಂದ್ರ ಟೀಮ್‌ಗೆ ಭಾರೀ ಬೆಂಬಲ ವ್ಯಕ್ತವಾಗಿದೆ. ಉಪ್ಪಿಯ ಡೈರೆಕ್ಷನ್ ಸಿನಿಮಾ ನೋಡಲು ಬಾಲಿವುಡ್ ಮಂದಿ ಕಾದಿದ್ದಾರೆ. ಹಿಂದಿಯ ಹಂಚಿಕೆ ಹಕ್ಕನ್ನು ಝೀ ಪಿಕ್ಚರ್ಸ್ ಪಡೆದಿದ್ದು, ಬಹುಸಂಖ್ಯೆಯ ಹಿಂದಿ ಸ್ಕ್ರೀನ್‌ಗಳಲ್ಲಿ ಯುಐ ತೆರೆಕಾಣಲಿದೆ.



# ಪ್ರಭಾಸ್ 'ರಾಜ್‌ಸಾಬ್' ಸಿನಿಮಾ ನಿರ್ಮಾಪಕರಿಂದ ಹೇಳಿಕೆ ಬಿಡುಗಡೆ


**ಹೇಳಿಕೆ ಬಿಡುಗಡೆ ಮಾಡಿರುವ 'ರಾಜಾಸಾಬ್' ತಂಡ, 'ಪ್ರಭಾಸ್ ನಟನೆಯ 'ರಾಜಾಸಾಬ್' ಸಿನಿಮಾದ ಚಿತ್ರೀಕರಣ ವೇಗವಾಗಿ ನಡೆಯುತ್ತಿದೆ. ಸಿನಿಮಾದ 80% ಚಿತ್ರೀಕರಣ ಈಗಾಗಲೇ ಮುಗಿದಿದೆ. ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕಾರ್ಯವೂ ಸಹ ವೇಗವಾಗಿ ನಡೆಯುತ್ತಿದೆ.**

ಪ್ರಭಾಸ್ ನಟನೆಯ 'ಕಲ್ಕಿ 2898 ಎಡಿ' ಇದೇ ವರ್ಷ ಜೂನ್ ತಿಂಗಳಲ್ಲಿ ಬಿಡುಗಡೆ ಆಗಿತ್ತು. ಪ್ರಭಾಸ್ ಕೈಯಲ್ಲಿ ಈಗ ಅಧಿಕೃತವಾಗಿ ಏಳು ಸಿನಿಮಾಗಳಿವೆ. ಯಾವ ಸಿನಿಮಾ ಯಾವಾಗ ಬಿಡುಗಡೆ ಆಗಲಿದೆ ಎಂಬ ಕಅತರ ಅಭಿಮಾಗಳಿಗೆ ಇದೆ. 'ಕಲ್ಕಿ 2898 ಎಡಿ' ಸಿನಿಮಾದ ಬಳಿಕ ಪ್ರಭಾಸ್ ನಟನೆಯ 'ರಾಜಾಸಾಬ್' ಸಿನಿಮಾ ಬಿಡುಗಡೆ ಆಗಲಿದೆ ಎಂದು ಹೇಳಲಾಗಿತ್ತು. ಅದಕ್ಕೆ ತಕ್ಕಂತೆ 'ರಾಜಾಸಾಬ್' ಸಿನಿಮಾದ ಟೀಸರ್ ಸಹ ಕೆಲ ತಿಂಗಳ ಹಿಂದೆ ಬಿಡುಗಡೆ ಆಗಿತ್ತು. ಇದೀಗ 'ರಾಜಾಸಾಬ್' ಸಿನಿಮಾದ ನಿರ್ಮಾಪಕರು ಸಿನಿಮಾ ಕುರಿತು ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದಾರೆ. ರಾಜಾ ಸಾಬ್' ಸಿನಿಮಾದ ಬಿಡುಗಡೆ, ಟ್ರೈಲರ್ ಬಿಡುಗಡೆ ಇತ್ಯಾದಿಗಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಕೆಲ ಸುದ್ದಿಗಳು ಹರಿದಾಡುತ್ತಿವೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ 'ರಾಜಾಸಾಬ್' ನಿರ್ಮಾಪಕರು. ಅಭಿಮಾನಿಗಳ ಆಸೆಗೆ ತಣ್ಣೀರು ಎರಚಿದ್ದಾರೆ. 'ರಾಜಾಸಾಬ್' ಸಿನಿಮಾದ ಟ್ರೈಲರ್ ಕ್ರಿಸ್‌ಮಸ್‌ಗೆ, ಹೊಸ ವರ್ಷಕ್ಕೆ ಬಿಡುಗಡೆ ಆಗಲಿದೆ ಎಂಬ ಸುದ್ದಿಗಳು ಹರಿದಾಡಿದ್ದವು. ಇದು ಅಭಿಮಾನಿಗಳ ಸಂತಸಕ್ಕೆ ಕಾರಣವಾಗಿತ್ತು. ಆದರೆ ಈ ಸುದ್ದಿಯನ್ನು ಸಿನಿಮಾ ನಿರ್ಮಾಪಕರು ತಳ್ಳಿ ಹಾಕಿದ್ದಾರೆ. ಆದರೆ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ 'ರಾಜಾಸಾಬ್' ಸಿನಿಮಾದ ಟೀಸರ್ ಹೊಸವರ್ಷ ಅಥವಾ ಕ್ರಿಸ್‌ಮಸ್‌ಗೆ ಬಿಡುಗಡೆ ಆಗಲಿದೆ ಎಂಬ ಸುದ್ದಿ ಹರಿದಾಡುತ್ತಿದೆ. ಆದರೆ ಇದು ಸತ್ಯವಲ್ಲ. ಯಾರೂ ಇದನ್ನು ನಂಬಬೇಡಿ' ಎಂದಿದ್ದಾರೆ. 'ರಾಜಾ ಸಾಬ್' ಸಿನಿಮಾದ ಚಿತ್ರೀಕರಣದ ವೇಳೆ ಪ್ರಭಾಸ್‌ಗೆ ಗಾಯವಾಗಿದೆ. ಹೊಂಬಾಳೆ ಜೊತೆ ಇನ್ನೆರಡು ಸಿನಿಮಾಗಳಲ್ಲಿ ಪ್ರಭಾಸ್ ನಟಿಸಲಿದ್ದಾರೆ.

ಸಿನಿ ವಾಹಿನಿ



# ಪವನ್ ಕಲ್ಯಾಣ್ ಜೊತೆ ಮುಂಗಾರು ಮಳೆ 2 ಬೆಡಗಿ




ಪವನ್ ಕಲ್ಯಾಣ್ ಒಂದು ಕಡೆ ರಾಜಕೀಯ, ಆಡಳಿತದಲ್ಲಿ ಬ್ಯುಸಿಯಾಗಿದ್ದರೂ, ಮಧ್ಯೆ ಸಮಯ ಸಿಕ್ಕಾಗ ಕಮಿಟ್ ಆದ ಸಿನಿಮಾಗಳನ್ನು ಪೂರ್ಣಗೊಳಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅವಕಾಶ ಸಿಕ್ಕಾಗ ಶೂಟಿಂಗ್‌ಗಳಿಗೆ ಹಾಜರಾಗುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಹರಿಹರ ವೀರಮಲ್ಲು ಸಿನಿಮಾ ಶೂಟಿಂಗ್‌ನಲ್ಲಿ ಭಾಗವಹಿಸಿದ್ದ ಪವನ್ ಕಲ್ಯಾಣ್ ಇತ್ತೀಚೆಗೆ 'ಒಜಿ' ಚಿತ್ರದ ರಾತ್ರಿ ಶೂಟಿಂಗ್‌ನಲ್ಲಿ ಭಾಗವಹಿಸಿದ್ದಾರೆ ಎನ್ನಲಾಗಿದೆ. ಏನೇ ಆಗಲಿ, ಆ ಎರಡೂ ಸಿನಿಮಾಗಳನ್ನು ಪೂರ್ಣಗೊಳಿಸಿ 2025 ರಲ್ಲಿ ಪ್ರೇಕ್ಷಕರ ಮುಂದೆ ತರುವ ಯೋಜನೆಯಲ್ಲಿದ್ದಾರೆ ಪವನ್ ಕಲ್ಯಾಣ್. ಎರಡೂ ಸಿನಿಮಾಗಳಲ್ಲಿ ಒಜಿ ಚಿತ್ರದ ಮೇಲಿನ ನಿರೀಕ್ಷೆಗಳು ದೊಡ್ಡದಿವೆ. ಸಾಹೋ ಸುಜಿತ್ ನಿರ್ದೇಶನದ ಔಉ ಚಿತ್ರ ಒಂದು ಕ್ರೈಮ್, ಆಕ್ಷನ್ ಥ್ರಿಲ್ಲರ್ ಆಗಿ ಮೂಡಿಬರುತ್ತಿದೆ. ಪವನ್ ಕಲ್ಯಾಣ್ ಪಾತ್ರವನ್ನು ತೆರೆಯ ಮೇಲೆ ನೋಡಲು ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಇದು ಒಂದು ಪ್ರಬಲ ಗ್ಯಾಂಗ್‌ಸ್ಟರ್ ಕಥೆ ಎನ್ನಲಾಗಿದೆ. ಮಾಫಿಯಾ ಹಿನ್ನೆಲೆಯ ಜೊತೆಗೆ ಪವನ್ ಕಲ್ಯಾಣ್ ಅವರನ್ನು ಅಭಿಮಾನಿಗಳು ಹೇಗೆ ನೋಡಬೇಕೆಂದು ಬಯಸುತ್ತಾರೋ ಹಾಗೆ ಸುಜಿತ್ ತೋರಿಸಲಿದ್ದಾರೆ. ಈ ಚಿತ್ರದಲ್ಲಿ ಪವನ್ ಕಲ್ಯಾಣ್ ಪಾತ್ರದಲ್ಲಿ ಆಸಕ್ತಿದಾಯಕ ತಿರುವುಗಳು, ಕಥಾವಸ್ತು ಪ್ರೇಕ್ಷಕರನ್ನು ಆಕರ್ಷಿಸುವಂತಿದೆ. ಈ ಹಿನ್ನೆಲೆಯಲ್ಲಿ ಚಿತ್ರದ ಬಗ್ಗೆ ಒಂದು ವಿಷಯ ಹೊರಬಿದ್ದಿದೆ.

ಅಲ್ಲದೆ, ಈಗ ಅವರು ಇರುವ ಜವಾಬ್ದಾರಿಯುತ ಹುದ್ದೆಯಲ್ಲಿ ಐಟಂ ಹಾಡುಗಳನ್ನು ಮಾಡುತ್ತಾರಾ? ಪವನ್ ಕಲ್ಯಾಣ್ ಈಗಿನ ಪರಿಸ್ಥಿತಿಯಲ್ಲಿ ಡೇಟ್ಸ್ ನೀಡುವ ಸಾಧ್ಯತೆ ಇದೆಯಾ? ಎಂಬುದು ತಿಳಿದಿಲ್ಲ.

ಆದರೆ ಅವೆಲ್ಲವನ್ನೂ ಬದಿಗಿಟ್ಟರೆ ನೇಹಾ ಶೆಟ್ಟಿ ಜೊತೆ ಒಜಿಯಲ್ಲಿ ವಿಶೇಷ ಹಾಡು ಎಂಬ ಸುದ್ದಿ ವೈರಲ್ ಆಗುತ್ತಿದೆ.

# ವಿಜಯ್- ಫೋಟೋ ಹಂಚಿಕೊಂಡ ಕೀರ್ತಿ

ಸೌತ್ ನಟಿ ಕೀರ್ತಿ ಸುರೇಶ್ ಡಿ.12ರಂದು ಆ್ಯಂಟೋನಿ ಜೊತೆ ಗೋವಾದಲ್ಲಿ ಅದ್ದೂರಿಯಾಗಿ ಮದುವೆಯಾದರು. ಈ ಸಂಭ್ರಮದಲ್ಲಿ ಸ್ಟಾರ್ ನಟ ದಳಪತಿ ವಿಜಯ್ ಕೂಡ ಭಾಗಿಯಾಗಿದ್ದರು. ನಟ ಭಾಗಿಯಾಗಿ ಶುಭಹಾರೈಸಿದ್ದರ ಬಗ್ಗೆ ಫೋಟೋ ಶೇರ್ ಮಾಡಿ ನಟಿ ಸಂತಸ ವ್ಯಕ್ತಪಡಿಸಿದ್ದಾರೆ. ನನ್ನ ಕನಸಿನ ಮದುವೆಯಲ್ಲಿ ನಮ್ಮ ಡ್ರೀಮ್ ಐಕಾನ್ ನಮ್ಮನ್ನು ಆಶೀರ್ವದಿಸಿದಾಗ' ಎಂದು ನಟಿ ಅಡಿಬರಹ ನೀಡಿ, ವಿಜಯ್ ಜೊತೆಗಿನ ಫೋಟೋ ಹಂಚಿಕೊಂಡಿದ್ದಾರೆ. ಅವರ ಉಪಸ್ಥಿತಿಯನ್ನು ನಟಿ ಸಂಭ್ರಮಿಸಿದ್ದಾರೆ.



# ನನ್ನ ಮಗ ಅವಮಾನವನ್ನು ಸಹಿಸಲಾಗದೆ ನಿವೃತ್ತಿ ಘೋಷಣೆ

## ಐದು ಪಂದ್ಯಗಳ ಟೆಸ್ಟ್ ಸರಣಿಗಾಗಿ ಆಸ್ಟ್ರೇಲಿಯಾಕ್ಕೆ ತೆರಳಿದ್ದ ಅಶ್ವಿನ್ ಸರಣಿಯ ಮಧ್ಯದಲ್ಲೇ ಈ ರೀತಿಯ ಹಠಾತ್ ನಿರ್ಧಾರ

ಟೀಂ ಇಂಡಿಯಾದ ಅನುಭವಿ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳುವ ಮೂಲಕ ಎಲ್ಲರನ್ನು ಅಚ್ಚರಿ ಗೊಳಿಸಿದ್ದರು. ಐದು ಪಂದ್ಯಗಳ ಟೆಸ್ಟ್ ಸರಣಿಗಾಗಿ ಆಸ್ಟ್ರೇಲಿ ಯಾಕ್ಕೆ ತೆರಳಿದ್ದ ಅಶ್ವಿನ್ ಸರಣಿಯ ಮಧ್ಯದಲ್ಲೇ ಈ ರೀತಿಯ ಹಠಾತ್ ನಿರ್ಧಾರ ತೆಗೆದುಕೊಂಡಿದ್ದರು. ಇನ್ನು ಸಾಕಷ್ಟು ಕ್ರಿಕೆಟ್ ಆಡುವ ಸಾಮರ್ಥ್ಯ ಹೊಂದಿದ್ದ ಅಶ್ವಿನ್ ಏಕಾಏಕಿ ಇಷ್ಟೊಂದು ದೊಡ್ಡ ನಿರ್ಧಾರ ತೆಗೆದುಕೊಂಡಿದ್ದು ಏಕೆ ಎಂಬುದು ಇದೀಗ ಎಲ್ಲರ ಮನದಾಳದಲ್ಲಿ ಮೂಡಿರುವ ಪ್ರಶ್ನೆ. ಆದರೆ, ಇದೆಲ್ಲದರ ನಡುವೆ ಅಶ್ವಿನ್ ಅವರ ತಂದೆ ದೊಡ್ಡ ಹೇಳಿಕೆ ನೀಡಿದ್ದು, ತಮ್ಮ ಮಗನನ್ನು ತಂಡದಲ್ಲಿ ನಿರಂತರವಾಗಿ ಅವಮಾನಿಸಲಾಗುತ್ತಿದೆ. ಹೀಗಾಗಿಯೇ ಅವನು ಆಸ್ಟ್ರೇಲಿಯಾ ಪ್ರವಾಸದ ಮಧ್ಯದಲ್ಲಿ ನಿವೃತ್ತಿ ಘೋಷಿಸಿದ್ದಾನೆ ಎಂದು ಹೇಳಿದ್ದಾರೆ. ಅಶ್ವಿನ್ ಅವರ ತಂದೆಯ ಈ ರೀತಿಯ ಹೇಳಿಕೆ ಭಾರತೀಯ ಕ್ರಿಕೆಟ್‌ನಲ್ಲಿ ಸಾಕಷ್ಟು ಸಂಚಲನ ಮೂಡಿಸಿದೆ.

ಅಶ್ವಿನ್ ತಂದೆಯ ಸ್ಫೋಟಕ ಹೇಳಿಕೆ ಮಗನ ನಿವೃತ್ತಿಯ ನಿರ್ಧಾರದ ಬಳಿಕ ಸಿಎನ್‌ಎನ್ ನ್ಯೂಸ್ 18 ರೊಂದಿಗೆ ಮಾತನಾಡಿದ ಅಶ್ವಿನ್ ಅವರ ತಂದೆ, 'ಕೊನೆಯ ಗಳಿಗೆಯಲ್ಲಿ ನನ್ನ ಮಗನ ನಿವೃತ್ತಿ ನಿರ್ಧಾರದ ಬಗ್ಗೆ ನನಗೂ ತಿಳಿಯಿತು. ಅವನ ಮನಸ್ಸಿನಲ್ಲಿ ಏನಾಗುತ್ತಿದೆಯೋ ಗೊತ್ತಿಲ್ಲ. ನಾನಂತೂ ಸಂಪೂರ್ಣ ಸಂತೋಷದಿಂದ ಒಪ್ಪಿಕೊಂಡೆ. ಆದರೆ ಅವರು ನಿವೃತ್ತಿ ಘೋಷಿಸಿದ ರೀತಿ, ಒಂದು ಕಡೆ ನನಗೆ ತುಂಬಾ ಸಂತೋಷ ನೀಡಿದ್ದರೆ, ಮತ್ತೊಂದೆಡೆ ನನಗೆ ನೋವುಂಟು ಮಾಡಿದೆ. ಏಕೆಂದರೆ ಅವನು ತನ್ನ ಆಟವನ್ನು ಮುಂದುವರಿಸಬೇಕಾಗಿತ್ತು. ನಿವೃತ್ತಿ ಎಂಬುದು ಅಶ್ವಿನ್ ಅವರ ನಿರ್ಧಾರವಾಗಿದ್ದು, ನಾನು ಅದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ.

ಆದರೆ ಅವನು ನಿವೃತ್ತಿ ತೆಗೆದುಕೊಂಡ ರೀತಿಗೆ ಹಲವು ಕಾರಣಗಳಿರಬಹುದು. ಅದು ಅಶ್ವಿನ್‌ಗೆ ಮಾತ್ರ ಗೊತ್ತು, ಇದರಲ್ಲಿ ತಂಡದಲ್ಲಿ ಆತನಿಗೆ ಆಗುತ್ತಿದ್ದ ಅವಮಾನವೂ ಕಾರಣವಾಗಿರಬಹುದು.

ಅಶ್ವಿನ್ ಅವರ ನಿವೃತ್ತಿ ನಮಗೆ ಭಾವನಾತ್ಮಕ ಕ್ಷಣವಾಗಿದೆ ಏಕೆಂದರೆ ಅವರು 14-15 ವರ್ಷಗಳ ಕಾಲ ತಂಡದಲ್ಲಿ ಆಡಿದರು. ಹೀಗಾಗಿ ಅವರ ಹಠಾತ್ ನಿವೃತ್ತಿ ನಮಗೆ ಆಘಾತ ತಂದಿತು. ಆತನನ್ನು ನಿರಂತರವಾಗಿ ಅವಮಾನಿಸಲಾಗುತ್ತಿದೆ ಎಂದು ನಾವು ಭಾವಿಸುತ್ತೇವೆ. ಹೀಗಾಗಿ ಇದನ್ನೆಲ್ಲಾ ಇನ್ನೆಷ್ಟು ದಿನ ಸಹಿಸಿಕೊಳ್ಳಲು ಸಾಧ್ಯ, ಹೇಳಿ ಹಾಗಾಗಿಯೇ ಅಶ್ವಿನ್ ನಿವೃತ್ತಿ ನಿರ್ಧಾರ ಮಾಡಿರಬಹುದು ಎಂದು ಅಶ್ವಿನ್ ಅವರ ತಂದೆ ಹೇಳಿದ್ದಾರೆ.



ಅಶ್ವಿನ್ ತಂದೆಯ ಸ್ಫೋಟಕ ಹೇಳಿಕೆ

### ಅಶ್ವಿನ್ ಮೇಲೆ ವಿಶ್ವಾಸ ಮೂಡಲಿಲ್ಲವೇ...?

**ಪ್ರಸ್ತುತ ಅಶ್ವಿನ್ ಟೀಂ ಇಂಡಿಯಾದ ಬೆಸ್ಟ್ ಬೌಲರ್ ಆಗಿದ್ದರೂ, ವಿಶ್ವದಲ್ಲೇ ನಂಬರ್ 1 ಟೆಸ್ಟ್ ಬೌಲರ್ ಆಗಿದ್ದರೂ, ಟೀಂ ಇಂಡಿಯಾದಲ್ಲಿ ಅವರಿಗೆ ಸಿಗಬೇಕಾದ ಗೌರವ ಸಿಕ್ಕಿಲ್ಲ. ಎರಡೂ ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್‌ಗಳಲ್ಲಿ ಅಶ್ವಿನ್ ಅದ್ಭುತ ಪ್ರದರ್ಶನ ನೀಡಿದ್ದರು ಆದರೆ ಕೊನೆಯ ಫೈನಲ್ ಪಂದ್ಯದಲ್ಲಿ ಅಶ್ವಿನ್‌ಗೆ ಆಡುವ ಅವಕಾಶ ಸಿಗಲಿಲ್ಲ. ಈ ವಿಚಾರವನ್ನು ಮಾಜಿ ನಾಯಕ ಸುನಿಲ್ ಗವಾಸ್ಕರ್ ಕೂಡ ಪ್ರಸ್ತಾಪಿಸಿದ್ದರು. ನೀವು ವಿಶ್ವದ ನಂಬರ್ 1 ಬ್ಯಾಟ್ಸ್‌ಮನ್‌ನನ್ನು ಆಡುವ ಹನ್ನೊಂದರಲ್ಲಿ ಆಯ್ಕೆ ಮಾಡಿದ್ದೀರಿ. ಆದರೆ ವಿಶ್ವದ ನಂಬರ್ 1 ಟೆಸ್ಟ್ ಬೌಲರ್‌ನ ಮಾತ್ರ ಏಕೆ ಬೆಂಚ್ ಮೇಲೆ ಕುಳಿಸಿದ್ದೀರಿ ಎಂದು ಗವಾಸ್ಕರ್ ಪ್ರಶ್ನಿಸಿದ್ದರು.**



# ಹೈಬ್ರಿಡ್ ಮಾದರಿಯಲ್ಲಿ ಚಾಂಪಿಯನ್ಸ್ ಟ್ರೋಫಿ

ಮುಂದಿನ ವರ್ಷ ನಡೆಯಲ್ಲಿರುವ ಚಾಂಪಿಯನ್ಸ್ ಟ್ರೋಫಿಗೆ ಸಂಬಂಧಿಸಿದಂತೆ ನಿರೀಕ್ಷಿತ ನಿರ್ಧಾರ ಹೊರಬಿದ್ದಿದೆ. ಈ ಈವೆಂಟ್‌ನ ಆಯೋಜಕತ್ವಕ್ಕೆ ಸಂಬಂಧಿಸಿದಂತೆ ಎದ್ದಿದ್ದ ಸಾಕಷ್ಟು ಗೊಂದಲಗಳಿಗೆ ತೆರೆ ಎಳೆದಿರುವ ಐಸಿಸಿ ಅಂತಿಮವಾಗಿ ಹೈಬ್ರಿಡ್ ಮಾದರಿಯಲ್ಲಿ ಪಂದ್ಯಾವಳಿಯನ್ನು ಆಯೋಜಿಸಲು ಔಪಚಾರಿಕ ಅನುಮೋದನೆಯನ್ನು ಪಡೆದುಕೊಂಡಿದೆ.

ಮುಂದಿನ ವರ್ಷ ಫೆಬ್ರುವರಿ-ಮಾರ್ಚ್‌ನಲ್ಲಿ ನಡೆಯಲಿರುವ ಈ ಪಂದ್ಯಾವಳಿಯಲ್ಲಿ ಭಾರತ ತಂಡದ ಪಂದ್ಯಗಳನ್ನು ಪಾಕಿಸ್ತಾನದ ಬದಲಿಗೆ ತಟಸ್ಥ ಸ್ಥಳದಲ್ಲಿ ಆಡಲಾಗುವುದು ಎಂದು ಐಸಿಸಿ ಇಂದು ಘೋಷಿಸಿದೆ. ಇದಕ್ಕೆ ಪ್ರತಿಯಾಗಿ, ಐಸಿಸಿ ಪಾಕಿಸ್ತಾನಕ್ಕೆ ಹೊಸ ಪಂದ್ಯಾವಳಿಯ ಆತಿಥ್ಯವನ್ನು ಸಹ ಬಹುಮಾನವಾಗಿ ನೀಡಿದ್ದು, ಈ ಪಂದ್ಯಾವಳಿಯೂ 2028 ರಲ್ಲಿ ನಡೆಯಲಿದೆ. ಇದೀಗ ಚಾಂಪಿಯನ್ಸ್ ಟ್ರೋಫಿ ಆಯೋಜನೆಗೆ ಎದುರಾಗಿದ್ದ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದ್ದು ಇನ್ನು ಕೆಲವೇ ದಿನಗಳಲ್ಲಿ ಚಾಂಪಿಯನ್ಸ್ ಟ್ರೋಫಿಯ ವೇಳಾಪಟ್ಟಿ ಕೂಡ ಬಿಡುಗಡೆಯಾಗಲಿದೆ.

**ತಟಸ್ಥ ಸ್ಥಳದಲ್ಲಿ ಭಾರತದ ಪಂದ್ಯಗಳು:** ಎಲ್ಲಾ ಕ್ರಿಕೆಟ್ ಮಂಡಳಿಗಳ ಜೊತೆಗಿನ ಸಭೆಯ ನಂತರ ಚಾಂಪಿಯನ್ಸ್ ಟ್ರೋಫಿಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸುವ ತೀರ್ಮಾನಕ್ಕೆ ಬರಲಾಗಿದೆ. ಆದಾಗ್ಯೂ, ಇಡೀ ಪಂದ್ಯಾವಳಿಯ ಹೋಸ್ಟಿಂಗ್ ಅಧಿಕಾರವನ್ನು ಸಂಪೂರ್ಣವಾಗಿ ಪಾಕಿಸ್ತಾನಕ್ಕೆ ನೀಡಲಾಗಿದೆ. ಇಡೀ ಪಂದ್ಯಾವಳಿಯ ಪಂದ್ಯಗಳನ್ನು ಪಾಕಿಸ್ತಾನದಲ್ಲಿ ಮತ್ತು ತಟಸ್ಥ ಸ್ಥಳಗಳಲ್ಲಿ ಆಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿರುವ ಐಸಿಸಿ, ಆ ತಟಸ್ಥ ಸ್ಥಳ ಯಾವುದು ಎಂಬುದರ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ. ಆದರೆ ದುಬೈನಲ್ಲಿ ಟೀಂ ಇಂಡಿಯಾದ ಪಂದ್ಯಗಳನ್ನು ಆಡಲು ಬಿಸಿಸಿಐ ಒಲವು ತೋರಿರುವುದರಿಂದ ಟೀಂ ಇಂಡಿಯಾದ ಪಂದ್ಯವನ್ನು ಅಲ್ಲಿಯೇ ನಡೆಸುವ ನಿರೀಕ್ಷೆಯಿದೆ.

### ಇತರ ಪಂದ್ಯಾವಳಿಗೂ ಹೈಬ್ರಿಡ್ ಮಾದರಿ

**ಚಾಂಪಿಯನ್ಸ್ ಟ್ರೋಫಿಯಲ್ಲಿ ಮಾತ್ರವಲ್ಲದೆ 2027 ರವರೆಗೆ ನಡೆಯಲಿರುವ ಪ್ರತಿಯೊಂದು ಪಂದ್ಯಾವಳಿಯಲ್ಲೂ ಇದೇ ವ್ಯವಸ್ಥೆ ಅನ್ವಯವಾಗಲಿದೆ ಎಂದು ಐಸಿಸಿ ಸ್ಪಷ್ಟಪಡಿಸಿದೆ. ಇದರ ಅಡಿಯಲ್ಲಿ, ಭಾರತದಲ್ಲಿ ನಡೆಯಲಿರುವ ಐಸಿಸಿ ಪಂದ್ಯಾವಳಿಗಳಲ್ಲಿ ಪಾಕಿಸ್ತಾನ ತಂಡವು ತನ್ನ ಪಂದ್ಯಗಳನ್ನು ತಟಸ್ಥ ಸ್ಥಳಗಳಲ್ಲಿ ಆಡಲಿದೆ. ವಾಸ್ತವವಾಗಿ ಭಾರತ 2025 ರಲ್ಲಿ ನಡೆಯಲ್ಲಿರುವ ಮಹಿಳೆಯರ ಏಕದಿನ ವಿಶ್ವಕಪ್‌ಗೆ ಏಕಾಂಗಿಯಾಗಿ ಆತಿಥ್ಯವಹಿಸುತ್ತದೆ. ಉಳಿದಂತೆ 2026 ರಲ್ಲಿ ನಡೆಯಲ್ಲಿರುವ ಪುರುಷರ ಟಿ20 ವಿಶ್ವಕಪ್‌ಗೆ ಭಾರತ, ಶ್ರೀಲಂಕಾ ಜಂಟಿಯಾಗಿ ಆತಿಥ್ಯ ವಹಿಸಲಿವೆ. ಇಂತಹ ಪರಿಸ್ಥಿತಿಯಲ್ಲಿ ಪಾಕಿಸ್ತಾನ ತಂಡ ಈ ಎರಡೂ ಟೂರ್ನಿಗಳಲ್ಲಿ ಭಾರತದ ಹೊರಗೆ ತನ್ನ ಪಂದ್ಯಗಳನ್ನು ಆಡಲಿದೆ. ಅಂತೆಯೇ, 2028 ರ ಮಹಿಳಾ ಟಿ20 ವಿಶ್ವಕಪ್‌ನ ಆತಿಥ್ಯ ಹಕ್ಕುಗಳನ್ನು ಸಹ ಪಾಕಿಸ್ತಾನ ಪಡೆದುಕೊಂಡಿದ್ದು, ಈ ಟೂರ್ನಿ ಕೂಡ ಹೈಬ್ರಿಡ್ ಮಾದರಿಯಲ್ಲಿ ನಡೆಯಲ್ಲಿದೆ**

# ಸತತ 7 ಎಸೆತಗಳಲ್ಲಿ 7 ಬೌಂಡರಿ ಬಾರಿಸಿದ ಸ್ಮೃತಿ




ವೆಸ್ಟ್ ಇಂಡೀಸ್ ವಿರುದ್ಧದ ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಟೀಂ ಇಂಡಿಯಾದ ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನ ರನ್‌ಗಳ ಶಿಖರ ಕಟ್ಟಿದ್ದಾರೆ. ವಿಂಡೀಸ್ ವಿರುದ್ಧದ ಈ ಸರಣಿಯಲ್ಲಿ ಸತತ ಎರಡು ಅರ್ಧಶತಕ ಸಿಡಿಸಿದ್ದ ಸ್ಮೃತಿ ಇದೀಗ ಮೂರನೇ ಪಂದ್ಯದಲ್ಲೂ ಅಜೇಯ ಅರ್ಧಶತಕದ ಇನ್ನಿಂಗ್ಸ್ ಆಡಿದ್ದಾರೆ. ಅದರಲ್ಲೂ ಈ ಪಂದ್ಯದಲ್ಲಿ ಸ್ಮೃತಿ ಸತತ 7 ಬೌಂಡರಿಗಳನ್ನು ಬಾರಿಸುವ ಮೂಲಕ ಮೈದಾನದಲ್ಲಿ ನೆರೆದಿದ್ದವರು ಹುಚ್ಚೆದ್ದು ಕುಣಿಯುವಂತೆ ಮಾಡಿದ್ದಾರೆ.

**ಸತತ 7 ಬೌಂಡರಿ:** ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ವೆಸ್ಟ್ ಇಂಡೀಸ್ ವಿರುದ್ಧದ ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡುತ್ತಿರುವ ಟೀಂ ಇಂಡಿಯಾ ಪರ ಇನ್ನಿಂಗ್ಸ್ ಆರಂಭಿಸಿದ್ದ ಸ್ಮೃತಿ ಮಂಧಾನ ಮೂರು ಮತ್ತು ನಾಲ್ಕನೇ ಓವರ್‌ಗಳಲ್ಲಿ ಸತತ 7 ಬೌಂಡರಿ ಹೊಡೆದ ಸಾಧನೆ ಮಾಡಿದರು. ಮೂರನೇ ಓವರ್ ಎಸೆದ ಹೆನ್ರಿ ಅವರ ನಾಲ್ಕನೇ ಎಸೆತದಲ್ಲಿ ಮಂಧಾನ ಬೌಂಡರಿ ಬಾರಿಸಿದರು. ಆ ಬಳಿಕ ಐದು ಮತ್ತು ಆರನೇ ಎಸೆತಗಳಲ್ಲಿಯೂ ಬೌಂಡರಿ ಬಾರಿಸಿದರು. ಇದರ ನಂತರ, ನಾಲ್ಕನೇ ಓವರ್‌ನ ಎರಡನೇ ಎಸೆತದಲ್ಲಿ ಸ್ಟ್ರೈಕ್ ಪಡೆದ ಸ್ಮೃತಿ, ಎರಡನೇ ಎಸೆತದಲ್ಲಿ ಬೌಂಡರಿ, ಮೂರನೇ ಎಸೆತದಲ್ಲಿ ಸಿಕ್ಸರ್, ನಾಲ್ಕನೇ ಎಸೆತದಲ್ಲಿ ಬೌಂಡರಿ ಮತ್ತು ನಂತರ ಐದನೇ ಎಸೆತದಲ್ಲಿ ಬೌಂಡರಿ ಬಾರಿಸಿದರು. ಈ ಮೂಲಕ ಮಂಧಾನ ಸತತ 7 ಬೌಂಡರಿ ಬಾರಿಸಿದರು.

**ಮಂಧಾನ ವಿಶೇಷ ಹ್ಯಾಟ್ರಿಕ್ ಸಾಧನೆ:** ಸ್ಮೃತಿ ಮಂಧಾನ ಅವರು ಸತತ 7 ಬೌಂಡರಿಗಳನ್ನು ಬಾರಿಸಿದ್ದು ಮಾತ್ರವಲ್ಲದೆ ಕೇವಲ 27 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಈ ಸರಣಿಯಲ್ಲಿ ಇದು ಮಂಧಾನ ಅವರ ಮೂರನೇ ಅರ್ಧಶತಕ ಎಂಬುದು ದೊಡ್ಡ ವಿಷಯ. ಈ ಮೂಲಕ ಹ್ಯಾಟ್ರಿಕ್ ಅರ್ಧ ಶತಕ ಬಾರಿಸಿದರು.

# ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ನೆಚ್ಚಿನ ಸಿನಿಮಾ





ಸದ್ಯ ಜಗತ್ತಿನಲ್ಲಿ ಎಲ್ಲೆಲ್ಲೂ ಗುಕೇಶ್ ದೊಮ್ಮರಾಜು ಅವರದೇ ಸುದ್ದಿ. ಈ ಬಾರಿಯ ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ 18ರ ಹರೆಯದ ಗುಕೇಶ್ ದೊಮ್ಮರಾಜು. ತಮಿಳುನಾಡು, ಚೆನ್ನೈನವರಾದ ಗುಕೇಶ್ ಡಿ, ಚೆಸ್ ತರಬೇತಿ ಹಾಗೂ ಪ್ರಾಕ್ಟೀಸ್‌ಗೆ ತೊಂದರೆ ಆಗುತ್ತದೆ ಎಂಬಕಾರಣಕ್ಕೆ 4ನೇ ಕ್ಲಾಸಿನಲ್ಲೇ ಸ್ಕೂಲ್ ಶಿಕ್ಷಣವನ್ನು ಡ್ರಾಪ್‌ಔಟ್ ಮಾಡಿದ್ದಾರೆ. ಉತ್ತಮ ತರಬೇತಿ ಹಾಗು ಶ್ರದ್ಧೆಯಿಂದ ಕಲಿತು ಗುಕೇಶ್ 2019ರಲ್ಲಿಯೇ ಚೆಸ್ ಗ್ರಾಂಡ್ ಮಾಸ್ಟರ್ ಪಟ್ಟ ಪಡೆದವರು. ಇದೀಗ 2024ರಲ್ಲಿ ವರ್ಲ್ಡ್ ಚೆಸ್ ಚಾಂಪಿಯನ್ ಪಟ್ಟ ಪಡೆದುಕೊಂಡು ಭಾರತದ ಕೀರ್ತಿ ಪತಾಕೆಯನ್ನು ಜಗತ್ತಿನಾದ್ಯಂತ ಪಸರಿಸಿದ್ದಾರೆ.

ಎಲ್ಲೆಲ್ಲೂ ಸಖತ್ ಸದ್ದು

ಇಂಥ ಗುಕೇಶ್ ಡಿ ಅವರ ಮೆಚ್ಚಿನ ಸಿನಿಮಾಗಳು ಯಾವವು ಎಂಬ ಮಾಹಿತಿ ಸದ್ಯ ಭಾರೀ ವೈರಲ್ ಆಗಿದೆ. ಸಂದರ್ಶನವೊಂದರಲ್ಲಿ ಭಾಗಿಯಾಗಿದ್ದ ಗುಕೇಶ್ ಅವರಿಗೆ 'ನಿಮ್ಮ ಮೆಚ್ಚಿನ ಸಿನಿಮಾಗಳು ಯಾವವು' ಎಂಬ ಬಗ್ಗೆ ಕೇಳಲಾಗಿದೆ. ಈ ಬಗ್ಗೆ ಅವರು ಅದೇನು ಹೇಳಿದ್ದಾರೆ ಎಂಬ ಕುತೂಹಲ ಸಹಜವಾಗಿ ಎಲ್ಲರಲ್ಲಿ ಇದೆ. ಅದಕ್ಕೆ ಉತ್ತರ ಇಲ್ಲಿದೆ ನೋಡಿ.. ಉತ್ತರ ಕೊಡುವುದಕ್ಕೂ ಮೊದಲು ಗುಕೇಶ್ ಅವರು 'ಯಾವ ಭಾಷೆಯ ಸಿನಿಮಾ ಬಗ್ಗೆ ಹೇಳಲಿ' ಎಂದು ಕೇಳಿ ಬಳಿಕ ಉತ್ತರಿಸಿದ್ದಾರೆ. ಮೊದಲಿಗೆ, ತಮ್ಮ ಮೆಚ್ಚಿನ ತಮಿಳು ಸಿನಿಮಾ ಬಗ್ಗೆ ಹೇಳಿದ ಗುಕೇಶ್ ಅವರು 'ವಾರಣಂ ಆಯಿರಂ' ಎಂದಿದ್ದಾರೆ. ಬಹುತೇಕ ಎಲ್ಲರಿಗೂ ಗೊತ್ತಿರುವಂತೆ ಇದು ತಮಿಳು ಸ್ಟಾರ್ ನಟ ಸೂರ್ಯ ನಟನೆಯ ಚಿತ್ರ. ಈ ಚಿತ್ರದಲ್ಲಿ ಕನ್ನಡದ ನಟಿ ರಮ್ಯಾ ಕೂಡ ನಟಿಸಿದ್ದಾರೆ. ಈ ಚಿತ್ರವು 2008ರಲ್ಲಿ ಬಿಡುಗಡೆಯಾಗಿ ಅಭೂತಪೂರ್ವ ಯಶಸ್ಸು ಸಾಧಿಸಿತ್ತು. ಈ ಚಿತ್ರವು ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ಅವರ ಮೆಚ್ಚುಗೆ ಗಳಿಸಿದೆ ಎಂಬುದು ಈ ಚಿತ್ರಕ್ಕೆ ಒಂದು ಕಿರೀಟ ಇದ್ದಂತೆ ಎನ್ನಬಹುದು.

ಇನ್ನು ತೆಲುಗಿನಲ್ಲಿ ತಮ್ಮ ಮೆಚ್ಚಿನ ಚಿತ್ರ 'ಗೀತ ಗೋವಿಂದಂ' ಎಂದಿದ್ದಾರೆ ಗುಕೇಶ್ ಡಿ. ಕನ್ನಡತಿ ರಶ್ಮಿಕಾ ಮಂದಣ್ಣ ಹಾಗು ವಿಜಯ್ ದೇವರಕೊಂಡ ಜೋಡಿಯ ಈ ಚಿತ್ರವು 2018ರಲ್ಲಿ ಬಿಡುಗಡೆ ಕಂಡು ಸೂಪರ್ ಹಿಟ್ ಆಗಿತ್ತು. ಈ ಚಿತ್ರವನ್ನು ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ಮೆಚ್ಚಿದ್ದು, ಈ ಚಿತ್ರತಂಡಕ್ಕೆ ಹೊಸ ಕೋಡು ಮೂಡಿಸಲಿದೆ ಎನ್ನಬಹುದು. ಇನ್ನು ಬಾಲಿವುಡ್ ಚಿತ್ರದ ಬಗ್ಗೆಯೂ ಗುಕೇಶ್ ಅವರು ಮಾತನ್ನಾಡಿದ್ದಾರೆ. ಹೃತಿಕ್ ರೋಶನ್ ನಟನೆಯ ಹಿಂದಿಯ 'ಜಿಂದಗಿ ನ ಮಿಲೇಗಿ ದೊಬಾರಾ' ಚಿತ್ರವನ್ನು ತಮ್ಮ ಮೆಚ್ಚಿನ ಚಿತ್ರವೆಂದು ಹೇಳಿರುವ ಗುಕೇಶ್, ಅದು ತುಂಬಾ ಹಳೆಯದು ಎಂದಿದ್ದಾರೆ. ಹೌದು, ಇದೀಗ ಕೇವಲ ಹದಿನೆಂಟು ವರ್ಷದ ಹುಡುಗನಾಗಿರುವ ಗುಕೇಶ್ ಅವರಿಗೆ ಅದು ತುಂಬಾ ಹಳೆಯದೇ ಆಗಿದೆ. ಏಕೆಂದರೆ, ಆ ಚಿತ್ರವು 2011ರಲ್ಲಿ ತೆರೆಗೆ ಬಂದಿತ್ತು. ಆಗ ಗುಕೇಶ್ ವಯಸ್ಸು ಕೇವಲ 6. ಇನ್ನು ಹಾಲಿವುಡ್ ಚಿತ್ರದ ಬಗ್ಗೆಯೂ ಚೆಸ್ ಚಾಂಪಿಯನ್ ಗುಕೇಶ್ ಹೇಳಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966